ಸಂಪುಟ: 05 ಸಂಚಿಕೆ: 291 ಪುಟಗಳು: 08 ಭಾನುವಾರ 04 ಜನವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


**ಮುಂಜಾನೆ ಮಾತು**

ಆತ್ಮವಿಶ್ವಾಸವೊಂದಿದ್ದರೆ ಆಯಾಸವಿಲ್ಲದೇ ಕೊನೆಯವರೆಗೂ ಪಯಣಿಸಬಹುದು. ವಿಶ್ವಾಸದ ಕೊರತೆಯಿಂದ ಪ್ರಯಾಣ ಅರ್ಧಕ್ಕೆ ನಿಲ್ಲಬಹುದು. ವಿಶ್ವಾಸವೇ ಇಂಧನವಾಗಲಿ

## ಬಳ್ಳಾರಿ ಘಟನೆಗೆ ಎಸ್‌ಪಿ ಬಲಿಪಶು, ಪರಮೇಶ್ವರ್, ಜಮೀರ್ ಅಮಾನತು ಏಕಿಲ್ಲ

• ಉದಯವಾಹಿನಿ, ಬೆಂಗಳೂರು

ಬಳ್ಳಾರಿ ಘಟನೆಗೆ ಎಸ್‌ಪಿಯನ್ನು ಬಲಿಪಶು ಮಾಡಲಾಗಿದೆ. ಅವರನ್ನು ಅಮಾನತು ಮಾಡುವ ಬದಲಾಗಿ ಗೃಹ ಸಚಿವ ಡಾ. ಜಿ ಪರಮೇಶ್ವರ್ ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಅಮಾನತು ಏಕಿಲ್ಲ ಎಂದು ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಪ್ರಶ್ನೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ಶನಿವಾರ ಮಾತನಾಡಿದ ಅವರು, ಇದು ಕೊಲೆಗಡುಕ ಸರ್ಕಾರ ಎಂದು ಕಿಡಿಕಾರಿದರು.



ರಾಜ್ಯದಲ್ಲಿ ಕಾಂಗ್ರೆಸ್‌ನಿಂದ ಕಾನೂನು ವ್ಯವಸ್ಥೆ ಹದಗೆಟ್ಟಿದೆ. ಪೊಲೀಸ್ ಅಧಿಕಾರಿಗಳಿಗೆ ಮಾನಸಿಕ ಒತ್ತಡ ಹೆಚ್ಚಿದೆ. ಪೊಲೀಸ್ ಅಧಿಕಾರಿಗಳು ಹಣ ಕೊಟ್ಟರೆ ಮಾತ್ರ ಪೋಸ್ಟಿಂಗ್ ಕೊಡುತ್ತಾರೆ. ಬಳ್ಳಾರಿಯಲ್ಲಿ ಜನಾರ್ದನ ರೆಡ್ಡಿಯವರ ಮೇಲೆ ಗುಂಡಿನ ದಾಳಿಯ ಪ್ರಯತ್ನ ನಡೆದಿದೆ. ಅದಕ್ಕೆ ಬಲಿಪಶುವಾಗಿ ಎಸ್‌ಪಿ ಯನ್ನು ಅಮಾನತು ಮಾಡಲಾಗಿದೆ.

ಶಾಸಕ ಭರತ್ ರೆಡ್ಡಿ ಗನ್ ಮ್ಯಾನ್ ಗುಂಡು ಹಾರಿಸಿದ್ದು ಎಂದಿದ್ದಕ್ಕೆ ಎಸ್‌ಪಿ ಮೇಲೆ ಕ್ರಮ ವಹಿಸಿದ್ದಾರೆ. ಈಗ ಆ ಎಸ್‌ಪಿ ಆತ್ಮಹತ್ಯೆಗೆ ಪ್ರಯತ್ನ ಮಾಡಿದ್ದಾರೆ ಎಂದರು.

ಗನ್ ಮ್ಯಾನ್‌ಗಳ ಗನ್ ಮಾತ್ರ ವಶಕ್ಕೆ ಪಡೆದು ಆರೋಪಿಗಳು ರಾಜ್ಯ ಬಿಟ್ಟು ಓಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಓಡಿ ಹೋದ ನಂತರ ಎಫ್ ಐಆರ್ ಮಾಡುತ್ತಾರೆ. ಸರ್ಕಾರದ ಒತ್ತಡದಿಂದ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 12 ಪೊಲೀಸ್ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎರಡು ಗಂಟೆಯಲ್ಲಿ ಎಸ್‌ಪಿಯನ್ನು ಅಮಾನತು ಮಾಡಿದ್ದಾರೆ ಎಂದರೆ, ಎರಡೂವರೆ ವರ್ಷದಿಂದ ಸಚಿವರಾಗಿರುವ ಗೃಹ ಸಚಿವರು, ಜಮೀರ್ ಅಹ್ಮದ್ ಅವರನ್ನು ಅಮಾನತು ಮಾಡಬೇಕಿತ್ತು, ಇದು ನೇಣಿನ ಭಾಗ್ಯದ ಸರ್ಕಾರ ಎಂದರು.

ನಿಗಮಕ್ಕೆ ಭೇಟಿ ನೀಡಿ ಅಧಿಕಾರಿಗಳ ಜೊತೆ ಚರ್ಚಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ರಾಜೀವ್ ಗಾಂಧಿ ವಸತಿ ನಿಗಮಕ್ಕೆ ರಾಜ್ಯದ ಸುಮಾರು 65 ಸಾವಿರ ಜನರು ಮನೆಗಾಗಿ ಅರ್ಜಿ ಹಾಕಿದ್ದಾರೆ. ನಿಗಮದಲ್ಲಿ ವಿವಿಧ ಯೋಜನೆಗಳಲ್ಲಿ ಸುಮಾರು 7,000 ಮನೆಗಳನ್ನು ನಿರ್ಮಿಸಲಾಗಿದೆ. ಇನ್ನೂ 10,000 ಮನೆಗಳು ನಿರ್ಮಾಣ ಹಂತದಲ್ಲಿದೆ. 80 ವರ್ಷದ ಮಹಿಳೆ ಪೂರ್ತಿ ಮೊತ್ತವನ್ನು ಪಾವತಿಸಿದ್ದು, ಅವರಿಗೆ ಇನ್ನೂ ಮನೆ ನೀಡಿಲ್ಲ. ಕಳೆದ ನಾಲ್ಕು ತಿಂಗಳಿಂದ ಅವರನ್ನು ಅಲೆದಾಡಿಸುತ್ತಿದ್ದು, ಆ ಮನೆಗೆ ಇನ್ನೂ ಕುಡಿಯುವ ನೀರು ಹಾಗೂ ವಿದ್ಯುತ್ ಸಂಪರ್ಕ ಸಿಕ್ಕಿಲ್ಲ. ಇವರು ಬಾಡಿಗೆ ಮನೆಯಲ್ಲಿದ್ದು, ಆ ಮನೆಯಿಂದಲೂ ಹೊರಬರುವ ಆತಂಕದಲ್ಲಿದ್ದಾರೆ ಎಂದು ತಿಳಿಸಿದರು.

**ಜನವರಿ 5 ರಂದು ಪ್ರತಿಭಟನೆ, ಸರ್ಕಾರಕ್ಕೆ ಎಚ್ಚರಿಕೆ**

**ರಾಜೀವ್ ಗಾಂಧಿ ವಸತಿ ನಿಗಮದ ವಸತಿ ಯೋಜನೆಗಳಿಗೆ 65,000 ಜನರು ಅರ್ಜಿ ಹಾಕಿದ್ದಾರೆ. ಕೋಗಿಲು ಕ್ರಾಸ್‌ನ ಬಾಂಗ್ಲಾ ಜನರಿಗೆ ಮನೆ ನೀಡುವುದಾರೆ, ಮೊದಲು ಕನ್ನಡಿಗರಿಗೆ ಆದ್ಯತೆ ಮೇರೆಗೆ ಮನೆ ನೀಡಬೇಕು ಎಂದು ಆರ್.ಅಶೋಕ ಆಗ್ರಹಿಸಿದರು.**

ಇದೇ ರೀತಿ ಸಾವಿರಾರು ಕನ್ನಡಿಗರು ಅರ್ಜಿ ಹಾಕಿ ಮನೆಗಾಗಿ ಕಾಯುತ್ತಿದ್ದಾರೆ. ಆದರೆ ಕಾಂಗ್ರೆಸ್ ಸರ್ಕಾರ ಬಾಂಗ್ಲಾ ನಿವಾಸಿಗಳಿಗೆ ಕೋಗಿಲು ಕ್ರಾಸ್‌ನಲ್ಲಿ ಮನೆ ನೀಡುತ್ತಿದೆ. ಇದನ್ನು ವಿರೋಧಿಸಿ ಜನವರಿ 5 ರಂದು ಪ್ರತಿಭಟನೆ ಮಾಡುತ್ತೇವೆ. ಜೊತೆಗೆ ಕಾನೂನು ಹೋರಾಟ ಮಾಡುತ್ತೇವೆ. ಮುಂದಿನ ಸದನದಲ್ಲೂ ಹೋರಾಟ ಮಾಡುತ್ತೇವೆ ಎಂದರು.

ಕೋಗಿಲು ಕ್ರಾಸ್‌ನಲ್ಲಿ ಏಕಾಏಕಿ ಮನೆ ನೀಡಲು ಸಾಧ್ಯವೇ ಇಲ್ಲ. ಜನರು ಅರ್ಜಿ ಸಲ್ಲಿಸಿ, ಶಾಸಕರ ಸಮಿತಿಯಿಂದ ಪರಿಶೀಲನೆಯಾಗಿ ಆಯ್ಕೆಯಾಗಬೇಕು. ಚಿಕ್ಕಬಾಣಾವರದಲ್ಲಿ ಒಂದು ಯೋಜನೆ ಇನ್ನೂ ಐದಾರು ವರ್ಷಗಳಿಂದ ಪ್ರಗತಿಯಲ್ಲಿದೆ. ಆದರೆ ಸರ್ಕಾರ ಕೋಗಿಲು ಕ್ರಾಸ್‌ನಲ್ಲಿ ಮಾತ್ರ ನಿಯಮ ಗಾಳಿಗೆ ತೂರಿ ಮನೆ ನೀಡಲು ಮುಂದಾಗಿದೆ. ಅಲ್ಲಿ ಇರುವವರು ಇದೇ ದೇಶದವರೇ ಎಂಬುದಕ್ಕೆ ಯಾವುದೇ ಆಧಾರ ಇಲ್ಲ. ಅವರ ಮೂಲಕ ಯಾವುದು, ಅವರ ಅಪ್ಪ ಅಮ್ಮ ಎಲ್ಲಿದ್ದಾರೆ ಎಂಬುದಕ್ಕೆ ಮಾಹಿತಿ ಇಲ್ಲ ಎಂದು ಕಿಡಿಕಾರಿದರು.

## ಮಾನವ ಸಂಘರ್ಷ ನಿಯಂತ್ರಣಕ್ಕೆ ತಂತ್ರಜ್ಞಾನ ಆಧಾರಿತ ಪರಿಹಾರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಹೆಚ್ಚುತ್ತಿರುವ ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಿಸಲು ತಂತ್ರಜ್ಞಾನ ಆಧಾರಿತ ಪರಿಹಾರ ನೀಡುವಲ್ಲಿ ರಾಜ್ಯಮಟ್ಟದ ಸಮಗ್ರ ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರ (Integrated command and Control centre) ಮಹತ್ವದ ಪಾತ್ರ ವಹಿಸಲಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನ ಅರಣ್ಯ ಭವನದಲ್ಲಿಂದು ಕಮಾಂಡ್ ಸೆಂಟರ್ ಹಾಗೂ 7 ವಿಭಾಗಗಳ ಪ್ರಾದೇಶಿಕ ನಿಯಂತ್ರಣ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಕಾಡಿನಂಚಿನ ಜನರು ಮತ್ತು ಸಾರ್ವಜನಿಕರು ವನ್ಯಜೀವಿಗಳ ಸಂಚಾರದ ಬಗ್ಗೆ ಅಥವಾ ಅರಣ್ಯ ಅಪರಾಧಗಳ ಬಗ್ಗೆ ಚಲನವಲನದ ಬಗ್ಗೆ ಇಲಾಖೆಯ ದೂರವಾಣಿ ಸಂಖ್ಯೆ 1926ಗೆ ಕರೆ ಮಾಡಿ ತಿಳಿಸಿದರೆ ಕಮಾಂಡ್ ಸೆಂಟರ್ ನಿಂದ ಸಂಬಂಧಿತ ವಿಭಾಗಕ್ಕೆ ಮಾಹಿತಿ ಹೋಗುತ್ತದೆ ಮತ್ತು ಸಾರ್ವಜನಿಕರು ನೀಡಿದ ಮಾಹಿತಿ ಅಥವಾ ದೂರು ಇತ್ಯರ್ಥವಾಗುವತನಕ ಹಿರಿಯ ಅಧಿಕಾರಿಗಳು ಅದರ ನಿಗಾ ವಹಿಸಲಿದ್ದಾರೆ ಎಂದರು.

## ಉದ್ಯೋಗ ಖಾತ್ರಿಗೆ ಕತ್ತರಿ: ಹಳ್ಳಿ ಅಧಿಕಾರ ಕಸಿದುಕೊಂಡ ಮೋದಿ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಕೇಂದ್ರದಲ್ಲಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಹಳ್ಳಿ ಅಧಿಕಾರ ಕಸಿದುಕೊಂಡು, ಗ್ರಾಮೀಣ ಆರ್ಥಿಕತೆಯನ್ನು ನಾಶ ಪಡಿಸಲು ಮುಂದಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು. ಮೋದಿ ಸರ್ಕಾರ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಹಿಂಪಡೆಯುವ ಮೂಲಕ ವಿಬಿ ಜಿ ರಾಮ್ ಜಿ ಹೆಸರಿನಲ್ಲಿ ಹೊಸ ಕಾಯ್ದೆ ಜಾರಿಗೆ ತರುವಾಗ, ರಾಜ್ಯ ಸರ್ಕಾರಗಳ ಅಭಿಪ್ರಾಯ ಕೇಳಿಲ್ಲ. ಭಾರತೀಯರ ಅಭಿಪ್ರಾಯ ಪಡೆಯದೆ ನೇರವಾಗಿ ಹೊಸ ಕಾಯ್ದೆ ಜಾರಿಗೊಳಿಸುವ ಮೂಲಕ ಸರ್ವಾಧಿಕಾರಿ ಧೋರಣೆಯನ್ನು ಪ್ರದರ್ಶಿಸಿದೆ ಎಂದರು. ಮನಮೋಹನ ಸಿಂಗ್ ಅವರ ನೇತೃತ್ವದ ಯುಪಿಎ ಸರ್ಕಾರ ಉದ್ಯೋಗದ ಹಕ್ಕು, ಮಾಹಿತಿ ಹಕ್ಕು, ಶೈಕ್ಷಣಿಕ ಹಕ್ಕು ಮೊದಲಾದ ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಜನರಿಗೆ ಹೆಚ್ಚಿನ ಅಧಿಕಾರವನ್ನು ನೀಡುವ ಕಾರ್ಯವನ್ನು ಮಾಡಿತ್ತು. ಮೋದಿ ಸರ್ಕಾರ ಡಿಸೆಂಬರ್ 17ರಂದು ಕಾಯ್ದೆಯನ್ನು ಸಂಸತ್ತಿನಲ್ಲಿ ಮಂಡಿಸಿ ಡಿ.18ರಂದು ಅಂಗೀಕಾರ ಪಡೆದಿದೆ. ಸುಮಾರು 12.16 ಕೋಟಿ ನರೇಗಾ ಕಾರ್ಮಿಕರು ದೇಶದಲ್ಲಿದ್ದಾರೆ. ಅದರಲ್ಲಿ 6.21 ಕೋಟಿ ಮಹಿಳೆಯರು ಇದ್ದಾರೆ.

## ಸುಪ್ರೀಂ, ಹೈಕೋರ್ಟ್‌ನಲ್ಲಿದೆ ನೀರಾವರಿ ನಿಗಮಗಳ 58,752 ಪ್ರಕರಣ

• ಉದಯವಾಹಿನಿ, ಬೆಂಗಳೂರು

ಜಲಸಂಪನ್ಮೂಲ ಇಲಾಖೆಯ ನಾಲ್ಕು ನಿಗಮಗಳಿಗೆ ಸೇರಿದ 58,752 ಪ್ರಕರಣಗಳು ಸುಪ್ರೀಂ ಕೋರ್ಟ್, ಹೈ ಕೋರ್ಟ್ ಹಾಗೂ ಜಿಲ್ಲಾ ಮತ್ತು ಇತರ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿದೆ. ಈ ಪ್ರಕರಣಗಳ ವ್ಯಾಜ್ಯಕ್ಕಾಗಿ ಕಳೆದ ಹತ್ತು ವರ್ಷಗಳಲ್ಲಿ ವಕೀಲರ ಶುಲ್ಕ ಮತ್ತು ಇತರ ಭತ್ಯೆಗಳಿಗಾಗಿ ಒಟ್ಟು 48.94 ಕೋಟಿ ವೆಚ್ಚ ಮಾಡಲಾಗಿದೆ ಜಲಸಂಪನ್ಮೂಲ ಇಲಾಖೆಯ ಮಾಹಿತಿಯ ಪ್ರಕಾರ, ಕರ್ನಾಟಕ ನೀರಾವರಿ ನಿಗಮ ನಿಯಮಿತದ ಪ್ರಕರಣಗಳ ವ್ಯಾಜ್ಯಕ್ಕೆ ವಕೀಲರ ಶುಲ್ಕಕ್ಕಾಗಿ 2017 ರಿಂದ ಒಟ್ಟು 10.39 ಕೋಟಿ ಮೊತ್ತ ವೆಚ್ಚವಾದರೆ, ಕಾವೇರಿ ನಿವಾವರಿ ನಿಗಮ ನಿಯಮಿತದ ವ್ಯಾಜ್ಯಗಳಿಗೆ ವಕೀಲರ ಶುಲ್ಕ ಹಾಗೂ ಇತರ ಭತ್ಯೆಗಳಿಗಾಗಿ 32.16 ಕೋಟಿ ವೆಚ್ಚವಾಗಿದೆ. ಇನ್ನು ವಿಶ್ವೇಶ್ವರಯ್ಯ ಜಲ ನಿಗಮದ ವ್ಯಾಜ್ಯಕ್ಕಾಗಿ ವಕೀಲರ ಶುಲ್ಕಕ್ಕಾಗಿ 3.62 ಕೋಟಿ ವೆಚ್ಚವಾಗಿದೆ. ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ ವ್ಯಾಜ್ಯದ ವಕೀಲರ ಶುಲ್ಕಕ್ಕಾಗಿ 2.75 ಕೋಟಿ ವೆಚ್ಚವಾಗಿದೆ. ಈ ಮೂಲಕ ಕಳೆದ 10 ವರ್ಷಗಳಲ್ಲಿ ವಕೀಲರ ಶುಲ್ಕ ಭತ್ಯೆಗೆ 48.94 ಕೋಟಿ ವೆಚ್ಚವನ್ನು ಮಾಡಲಾಗಿದೆ.

ನಕ್ಸಲ್ ನಿಗ್ರಹ ಕಾರ್ಯಪಡೆಯು ಮತ್ತೊಂದು ಭರ್ಜರಿ ಕಾರ್ಯಾಚರಣೆ ನಡೆಸಿದೆ. ಇಲ್ಲಿನ ಬಸ್ತಾರ್ ಪ್ರದೇಶದಲ್ಲಿ ಶನಿವಾರ ಕನಿಷ್ಠ 14 ಶಸ್ತ್ರಸಜ್ಜಿತ ಮಾವೋವಾದಿಗಳನ್ನು ಎನ್‌ಕೌಂಟರ್ ಮಾಡಿದೆ. ಶೋಧ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ.ಸುಕ್ಮಾ ಜಿಲ್ಲೆಯಲ್ಲಿ 12, ಬಿಜಾಪುರ ಜಿಲ್ಲೆಯಲ್ಲಿ ಇಬ್ಬರು ನಕ್ಸಲರು ಭದ್ರತಾ ಪಡೆಗಳು ಗುಂಡೇಟಿಗೆ ಹತರಾಗಿದ್ದಾರೆ. ಕೊಂಟಾ ಏರಿಯಾ ಸಮಿತಿ ಕಾರ್ಯದರ್ಶಿ, ಪ್ರಮುಖ ನಕ್ಸಲ್‌ವಾದಿ ಮಂಗ್ದು ಹತ್ಯೆಯಾದವರಲ್ಲಿ ಒಬ್ಬರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



**ಮತ್ತೆ 14 ನಕ್ಸಲರ ಎನ್‌ಕೌಂಟರ್**

# ಗುಂಡಿನ ಚಕಮಕಿ
# ನಕ್ಸಲ್ ಮುಕ್ತ 3 ತಿಂಗಳು ಬಾಕಿ



• ಉದಯವಾಹಿನಿ, ದೆಹಲಿ

ನಕ್ಸಲ್ ನಿಗ್ರಹ ಕಾರ್ಯಪಡೆಯು ಮತ್ತೊಂದು ಭರ್ಜರಿ ಕಾರ್ಯಾಚರಣೆ ನಡೆಸಿದೆ. ಇಲ್ಲಿನ ಬಸ್ತಾರ್ ಪ್ರದೇಶದಲ್ಲಿ ಶನಿವಾರ ಕನಿಷ್ಠ 14 ಶಸ್ತ್ರಸಜ್ಜಿತ ಮಾವೋವಾದಿಗಳನ್ನು ಎನ್‌ಕೌಂಟರ್ ಮಾಡಿದೆ. ಶೋಧ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ.ಸುಕ್ಮಾ ಜಿಲ್ಲೆಯಲ್ಲಿ 12, ಬಿಜಾಪುರ ಜಿಲ್ಲೆಯಲ್ಲಿ ಇಬ್ಬರು ನಕ್ಸಲರು ಭದ್ರತಾ ಪಡೆಗಳು ಗುಂಡೇಟಿಗೆ ಹತರಾಗಿದ್ದಾರೆ. ಕೊಂಟಾ ಏರಿಯಾ ಸಮಿತಿ ಕಾರ್ಯದರ್ಶಿ, ಪ್ರಮುಖ ನಕ್ಸಲ್‌ವಾದಿ ಮಂಗ್ದು ಹತ್ಯೆಯಾದವರಲ್ಲಿ ಒಬ್ಬರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುಕ್ಮಾ ಜಿಲ್ಲೆಯ ಪಾಮ್ಲೂರ್ ಬಳಿಯ ಅರಣ್ಯ ಪ್ರದೇಶದಲ್ಲಿ ನಕ್ಸಲರು ಇರುವ ಬಗ್ಗೆ ಮಾಹಿತಿಯ ಮೇರೆಗೆ ಭದ್ರತಾ ಪಡೆಗಳು ದಾಳಿ ನಡೆಸಿವೆ. ಈ ವೇಳೆ ಎರಡೂ ಕಡೆಯಿಂದ ಗುಂಡಿನ ಚಕಮಕಿ ನಡೆದಿದೆ. ಇದುವರೆಗೆ 12 ಶಸ್ತ್ರಸಜ್ಜಿತ ನಕ್ಸಲರನ್ನು ಎನ್‌ಕೌಂಟರ್ ಮಾಡಲಾಗಿದೆ. ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ. ಹೆಚ್ಚಿನ ವಿವರಗಳನ್ನು ನಂತರ ಹಂಚಿಕೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಪ್ರಮುಖ ನಕ್ಸಲ್‌ವಾಗಿ ಹತ:** ಕೊಂಟಾ ಏರಿಯಾ ಸಮಿತಿ ಕಾರ್ಯದರ್ಶಿ, ಪ್ರಮುಖ ನಕ್ಸಲ್‌ವಾದಿ ಮಂಗ್ದು ಹತನಾಗಿದ್ದಾನೆ. ಇತರ ನಕ್ಸಲರ ಗುರುತುಗಳು ಇನ್ನು ಪತ್ತೆಯಾಗಿಲ್ಲ. ಎಕೆ –47 ಗನ್‌ಗಳು, ಐಎನ್‌ಎಸ್ಎಎಸ್ ರೈಫಲ್‌ಗಳು ಮತ್ತು ಎಸ್‌ಎಲ್‌ಆರ್ ರೈಫಲ್‌ಗಳು ಸೇರಿದಂತೆ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಎನ್‌ಕೌಂಟರ್ ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಇನ್ಸ್‌ಪೆಕ್ಟರ್ ಜನರಲ್ ಸುಂದರರಾಜ್ ಅವರು ಸುದ್ದಿಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಮಾಹಿತಿ ನೀಡಿದರು.ಇದರ ಜೊತೆಗೆ, ಬಿಜಾಪುರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಜಿಲ್ಲಾ ಮೀಸಲು ಪಡೆ ಮತ್ತು ನಕ್ಸಲರ ನಡುವೆ ಇದೇ ರೀತಿಯ ಎನ್‌ಕೌಂಟರ್ ನಡೆದಿದೆ. ದಕ್ಷಿಣ ಬಿಜಾಪುರದ ಅರಣ್ಯ ಪ್ರದೇಶದಲ್ಲಿ ನಕ್ಸಲರು ಇರುವ ಬಗ್ಗೆ ಸುಳಿವು ದೊರೆತ ಹಿನ್ನೆಲೆಯಲ್ಲಿ, ತಂಡವು ಶೋಧ ಕಾರ್ಯಾಚರಣೆ ನಡೆಸಿತು. ಬೆಳಿಗ್ಗೆ 5 ಗಂಟೆಗೆ ಎನ್‌ಕೌಂಟರ್ ನಡೆಯಿತು ಎಂದು ಮಾಹಿತಿ ಹಂಚಿಕೊಂಡರು.

ಎನ್‌ಕೌಂಟರ್ ಸ್ಥಳದಲ್ಲಿ ಇಲ್ಲಿಯವರೆಗೆ ಇಬ್ಬರು ನಕ್ಸಲರ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆಯ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ಎನ್‌ಕೌಂಟರ್ ಮುಗಿದ ನಂತರ ಹೆಚ್ಚಿನ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಿದರು.ಗುಂಡಿನ ಚಕಮಕಿಯಲ್ಲಿ ಯಾವುದೇ ಭದ್ರತಾ ಸಿಬ್ಬಂದಿ ಗಾಯಗೊಂಡಿರುವ ಬಗ್ಗೆ ಯಾವುದೇ ವರದಿಯಾಗಿಲ್ಲ. ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗಿದೆ.

**2025ರಲ್ಲಿ 256 ನಕ್ಸಲರು ಎನ್‌ಕೌಂಟರ್:** 2025ರಲ್ಲಿ ಬಸ್ತಾರ್ ವಿಭಾಗದ ವಿವಿಧ ಜಿಲ್ಲೆಗಳ ಕಾಡುಗಳಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಭದ್ರತಾ ಪಡೆಗಳ ಗುಂಡೇಟಿಗೆ 256 ನಕ್ಸಲರು ಹತರಾಗಿದ್ದಾರೆ. ಪೊಲೀಸರು ನಕ್ಸಲರಿಂದ ಒಟ್ಟು 665 ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಇದರಲ್ಲಿ AK-47, LMG, INSAS ರೈಫಲ್‌ಗಳು ಮತ್ತು SLR 250 ಸ್ವಯಂಚಾಲಿತ ಬಂದೂಕುಗಳೂ ಇವೆ. ಉಳಿದ ಶಸ್ತ್ರಾಸ್ತ್ರಗಳಲ್ಲಿ 303 ರೈಫಲ್‌ಗಳು, ಭರ್ಮಾರ್ ರೈಫಲ್‌ಗಳು, BGL ಲಾಂಚರ್‌ಗಳು, ಸಿಂಗಲ್–ಶಾಟ್ ಶಸ್ತ್ರಾಸ್ತ್ರಗಳು ಮತ್ತು ಕಾರ್ಬೈನ್‌ಗಳು ಸೇರಿವೆ ಎಂದು ಅಧಿಕಾರಿಗಳು ವಿವರ ನೀಡಿದರು.

## ಭದ್ರತಾ ಪಡೆ ನಡೆಸಿದ ಬಹುದೊಡ್ಡ ಕಾರ್ಯಚರಣೆ

## ಗುಂಡಿನ ಚಕಮಕಿಯಲ್ಲಿ 14 ಮಾವೋವಾದಿಗಳು ಸಾವು

1 ಬಿಜಾಪುರ ಜಿಲ್ಲೆಯಲ್ಲಿ ಇಬ್ಬರು ನಕ್ಸಲರ ಎನ್‌ಕೌಂಟರ್

2 ಸುಕ್ಮಾ ಜಿಲ್ಲೆಯಲ್ಲಿ 12 ನಕ್ಸಲರು ಹತ್ಯೆ

3 ಛತ್ತೀಸ್‌ಗಡದಲ್ಲಿ ಮಾವೋವಾದಿಗಳ ವಿರುದ್ಧ ಭಾರೀ ಕಾರ್ಯಾಚರಣೆ

## ವೈಟ್ ಕಾಲರ್ ಭಯೋತ್ಪಾದನೆ

ಇದು ವೈಟ್ ಕಾಲರ್ ಅಪರಾಧ ಎನ್ನುವ ಪರಿಕಲ್ಪನೆಯಿಂದ ಪ್ರೇರಿತವಾದುದು. ವೃತ್ತಿಪರ ಶಿಕ್ಷಣ ಅಥವಾ ಉನ್ನತ ಶಿಕ್ಷಣ ಪಡೆದಿರುವವರು, ಭಯೋತ್ಪಾದನೆಯಲ್ಲಿ ತೊಡಗಿದ್ರೆ ಅದನ್ನು ವೈಟ್ ಕಾಲರ್ ಭಯೋತ್ಪಾದನೆ ಎನ್ನಲಾಗುತ್ತದೆ. ಧಾರ್ಮಿಕ ಮೂಲಭೂತವಾದಿಗಳಿಂದ ಬ್ರೈನ್‌ವಾಶ್‌ಗೆ ಒಳಗಾದವರು, ಅನಕ್ಷರಸ್ಥರು, ಉಗ್ರರಾಗಿ ಬದಲಾಗುತ್ತಾರೆ ಎಂಬುದು ಸಹಜ. ಆದ್ರೆ ಈಗ ಅದರಲ್ಲೂ ಟ್ರೆಂಡ್ ಬದಲಾಗಿದೆ. ಉತ್ತಮ ಶಿಕ್ಷಣ ಪಡೆದು ಉನ್ನತ ಉದ್ಯೋಗದಲ್ಲಿರುವವರೂ ಉಗ್ರರಾಗುತ್ತಿದ್ದಾರೆ. ಇದಕ್ಕೆ ದೆಹಲಿ ಸ್ಫೋಟ ಪ್ರಕರಣದ ರುವಾರಿ ಡಾ. ಉಮರ್ ಮೊಹಮ್ಮದ್ ದೊಡ್ಡ ನಿದರ್ಶನವಾಗಿದ್ದಾನೆ.



## ಕೈಯಲ್ಲಿ ಡಿಗ್ರಿ, ಜೇಬಿನಲ್ಲಿ ಆರ್‌ಡಿಎಕ್ಸ್

## ಉಗ್ರವಾದ ಬಗ್ಗೆ ರಾಜನಾಥ್ ಕಳವಳ

ಉನ್ನತ ಶಿಕ್ಷಣ ಪಡೆದವರೇ ಸಮಾಜ ಮತ್ತು ರಾಷ್ಟ್ರವಿರೋಧಿ ಕೃತ್ಯಗಳಲ್ಲಿ ತೊಡಗಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಕೆಲವರು ಒಂದು ಕೈಯಲ್ಲಿ ಡಿಗ್ರಿ ಹಿಡಿದು ಜೇಬಿನಲ್ಲಿ ಆರ್‌ಡಿಎಕ್ಸ್ ಇಟ್ಟುಕೊಳ್ಳುತ್ತಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಳವಳ ವ್ಯಕ್ತಪಡಿಸಿದ್ದಾರೆ. ರಾಜಸ್ಥಾನದ ಉದಯಪುರದಲ್ಲಿರುವ ಭೂಪಾಲ್ ನೋಬಲ್ಸ್ ವಿಶ್ವವಿದ್ಯಾಲಯದ 104ನೇ ಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೆಹಲಿಯ ಕೆಂಪು ಕೋಟೆ ಬಳಿ ನಡೆದ ಸ್ಫೋಟದ ಘಟನೆಯನ್ನು ಉದಾಹರಣೆಯಾಗಿ ತೋರಿಸಿದರು. ದೆಹಲಿ ಬಾಂಬ್ ಸ್ಫೋಟದ ಆರೋಪಿಗಳು ವೈದ್ಯರು ಕೈಯಲ್ಲಿ ಡಿಗ್ರಿ ಹಿಡಿದು, ಜೇಬಿನಲ್ಲಿ ಆರ್‌ಡಿಎಕ್ಸ್ ಇಟ್ಟುಕೊಂಡವರು. ಇದು ಜ್ಞಾನದೊಂದಿಗೆ ಮೌಲ್ಯಗಳು ಮತ್ತು ನೈತಿಕತೆಯ ಅಗತ್ಯತೆಯನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದರು. 2025ರ ನವೆಂಬರ್ 10ರಂದು ದೆಹಲಿಯ ಕೆಂಪು ಕೋಟೆ ಬಳಿ ನಡೆದ ಕಾರು ಬಾಂಬ್ ಸ್ಫೋಟದಲ್ಲಿ 15 ಜನರು ಮೃತಪಟ್ಟಿದ್ದರು.

**ಹಿರಿಯ ಅಧಿಕಾರಿಗಳ ನಿಗಾ**

ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ಅವರು ಕಾರ್ಯಾಚರಣೆಯನ್ನು ಬಹಳ ಹತ್ತಿರದಿಂದಲೇ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪರಿಸ್ಥಿತಿ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದ ನಂತರ ಹೆಚ್ಚಿನ ಅಧಿಕೃತ ಮಾಹಿತಿ ಬಿಡುಗಡೆ ಮಾಡಲಾಗುವುದು ಎಂದು ಪೊಲೀಸ್ ಇಲಾಖೆ ಸ್ಪಷ್ಟಪಡಿಸಿದೆ. ಬಸ್ತಾರ್ ಪ್ರದೇಶದಲ್ಲಿ ನಕ್ಸಲ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸುವ ಉದ್ದೇಶದಿಂದ ಭದ್ರತಾ ಪಡೆಗಳು ಮುಂದುವರೆದ ಕಾರ್ಯಾಚರಣೆ ನಡೆಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಜನಾರ್ದನ ರೆಡ್ಡಿ ಬಳ್ಳಾರಿಗೆ ಕಾಲಿಡೋವರೆಗೂ ಒಂದೇ ಒಂದು ಗಲಾಟೆ ಇರಲಿಲ್ಲ

### ● ಸರ್ಕಾರದ ಜಾಗದಲ್ಲಿ ಹಾಕಿದ್ರೆ ಏನು ತಪ್ಪು ಎಂದು ಡಿಸಿಎಂ ಡಿಕೆ ಶಿವಕುಮಾರ್ ಪ್ರಶ್ನೆ

• ಉದಯವಾಹಿನಿ, ಬೆಂಗಳೂರು

ಬಳ್ಳಾರಿ ಗಲಾಟೆಯ ಸಂದರ್ಭದಲ್ಲಿ ನಾವು ಕಾಂಗ್ರೆಸ್ ಪಕ್ಷದ ಕಾರ್ಯಕರ್ತನನ್ನು ಕಳೆದುಕೊಂಡಿದ್ದೇವೆ. ಇದಕ್ಕೆ ಬಿಜೆಪಿ ಕಾರಣ ಎಂದು ಡಿಸಿಎಂ ಡಿಕೆ ಶಿವಕುಮಾರ್ ಆರೋಪಿಸಿದರು. ಬೆಂಗಳೂರಿನಲ್ಲಿ ಶನಿವಾರ ಮಾತನಾಡಿದ ಅವರು, ಬಿಜೆಪಿ ವಿರುದ್ಧ ಕಿಡಿಕಾರಿದರು.

ಜನಾರ್ದನ ರೆಡ್ಡಿ ಬಳ್ಳಾರಿಗೆ ಕಾಲಿಡೋವರೆಗೂ ಒಂದೇ ಒಂದು ಗಲಾಟೆ ಇರಲಿಲ್ಲ, ಸಣ್ಣ ಅಹಿತಕರ ಘಟನೆ ಆಗಿರಲಿಲ್ಲ, ಸಣ್ಣ ಎಫ್ ಐಆರ್ ಇರಲಿಲ್ಲ. ಅವರು ಬಂದಮೇಲೆ ಗಲಭೆ ಆಗಿದೆ. ಹೀಗಾಗಿ ಅವರಿಗೆ ಮಾತನಾಡುವ ಹಕ್ಕಿಲ್ಲ. ಪಕ್ಷ ನಮ್ಮ ಶಾಸಕ ಭರತ್ ರೆಡ್ಡಿ ಬೆನ್ನಿಗೆ ನಿಲ್ಲಲಿದೆ. ನಾವು ನಮ್ಮ ಕಾರ್ಯಕರ್ತನನ್ನು ಕಳೆದುಕೊಂಡಿದ್ದೇವೆ. ಇದಕ್ಕೆ ಕಾರಣ ಯಾರು ಎಂಬುದು ತನಿಖೆಯಿಂದ ಹೊರಬರಲಿದ್ದು, ಕಾನೂನು ತನ್ನ ಕ್ರಮ ಕೈಗೊಳ್ಳಲಿದೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ'' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಸಿಎಂ ಗೃಹಕಚೇರಿ ಕೃಷ್ಣಾದಲ್ಲಿ ನಡೆದ ಜಂಟಿ ಮಾಧ್ಯಮಗೋಷ್ಠಿಯಲ್ಲಿ ಶಿವಕುಮಾರ್ ಅವರು ಶನಿವಾರ ಮಾತನಾಡಿದರು. ''ಮೊದಲ ಬಾರಿಗೆ ಬಳ್ಳಾರಿಯಲ್ಲಿ ನಮ್ಮ ಸರ್ಕಾರ ವಾಲ್ಮೀಕಿ ಮಹರ್ಷಿಯವರ ಪುತ್ಥಳಿ ನಿರ್ಮಿಸುತ್ತಿದೆ. ನಮ್ಮ ಶಾಸಕರು ಅದರ ಜವಾಬ್ದಾರಿ ತೆಗೆದುಕೊಂಡಿದ್ದಾರೆ.

ನಗರದ ಎಲ್ಲೆಡೆ ಅದರ ಪೋಸ್ಟರ್ ಗಳನ್ನು ಹಾಕಿದ್ದಾರೆ. ಅದರಲ್ಲಿ ತಪ್ಪೇನಿದೆ ನಮ್ಮ ಮನೆ ಮುಂದೆಯೂ ಬಿಜೆಪಿಯವರು ಪೋಸ್ಟರ್ ಹಾಕುತ್ತಿರುತ್ತಾರೆ. ಅದನ್ನು ನಾನು ಬೇಡ ಎನ್ನಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಈ ಪೋಸ್ಟರ್ ಹಾಕುವುದರಿಂದ ಬಿಜೆಪಿಯವರಿಗೆ ಆಗಿರುವ ತೊಂದರೆ ಆದರೂ ಏನು ಅವರು ಸರ್ಕಾರಿ ಜಾಗದಲ್ಲಿ ಹಾಕಿದ್ದಾರೆ ಇದರಲ್ಲಿ ರೆಡ್ಡಿ ಜಗಳಕ್ಕೆ ಬರುವ ಅಗತ್ಯವೇನಿತ್ತು. ನಾವು ನಮ್ಮ ಕಾರ್ಯಕರ್ತನನ್ನು ಕಳೆದುಕೊಂಡಿದ್ದೇವೆ. ಇದಕ್ಕೆ ಕಾರಣ ಬಿಜೆಪಿಯವರು. ಈ ಪ್ರಕರಣದ ತನಿಖೆ ನಡೆಯುತ್ತಿದ್ದು, ಈ ಬಗ್ಗೆ ಸಿಎಂ, ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮಾತನಾಡಿದ್ದಾರೆ. ಪೊಲೀಸರ ತನಿಖೆಯಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ'' ಎಂದು ಸ್ಪಷ್ಟಪಡಿಸಿದರು.

''ಪಕ್ಷದ ವತಿಯಿಂದ ಈ ಘಟನೆ ಬಗ್ಗೆ ಅಧ್ಯಯನ ನಡೆಸಲು ಹೆಚ್.ಎಂ. ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ನಿಯೋಗ ಕಳುಹಿಸಿದ್ದೇವೆ. ಬಿಜೆಪಿಯವರಿಗೆ ಬಳ್ಳಾರಿಯಲ್ಲಿ ನಮ್ಮ ಪಕ್ಷದ ಗೆಲುವು ಅರಗಿಸಿಕೊಳ್ಳಲು ಆಗುತ್ತಿಲ್ಲ. ಸೋತ ನಂತರ ಶ್ರೀರಾಮುಲು ಹಾಗೂ ಜನಾರ್ದನ ರೆಡ್ಡಿ ಅವರು ತಬ್ಬಾಡುತ್ತಿದ್ದಾರೆ. ಅವರ ನಡುವೆ ಏನೇನೂ, ಎಷ್ಟಿದೆ ಎಂಬುದು ಗೊತ್ತಿದೆ. ಮತ್ತೆ ಬಳ್ಳಾರಿಯಲ್ಲಿ ತಮ್ಮ ರಿಪಬ್ಲಿಕ್ ತರಲು ಪ್ರಯತ್ನಿಸುತ್ತಿದ್ದಾರೆ. ನಾವು ಅದಕ್ಕೆ ಅವಕಾಶ ನೀಡುವುದಿಲ್ಲ. ನಮ್ಮ ಕಾರ್ಯಕರ್ತರಿಗೆ ನಮ್ಮ ಸಿಎಂ ಈಗಾಗಲೇ ನಿರ್ದೇಶನ ನೀಡಿದ್ದಾರೆ. ಜನಾರ್ದನ ರೆಡ್ಡಿ ಅವರು ಅಲ್ಲಿಗೆ ಬರುವವರೆಗೂ ಅಲ್ಲಿ ಒಂದೇ ಒಂದು ಗಲಾಟೆ ನಡೆದಿರಲಿಲ್ಲ.'' ಎಂದು ಹೇಳಿದರು.


''ಈ ಪ್ರಕರಣದ ಬೆನ್ನಲ್ಲೇ ಎಲ್ಲಾ ಖಾಸಗಿ ಗನ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಗನ್ ವಿತರಣೆ ವಿಚಾರದಲ್ಲಿ ಕೈಗೊಳ್ಳಬೇಕಾಗಿರುವ ಕ್ರಮಗಳನ್ನು ಸಿದ್ಧಪಡಿಸಿ, ನಿಯಮಾವಳಿ ರೂಪಿಸುತ್ತೇವೆ'' ಎಂದು ತಿಳಿಸಿದರು.

ಶಾಸಕರಾದ ಭರತ್ ರೆಡ್ಡಿ ಅವರು ಮನೆಗೆ ಬೆಂಕಿ ಹಚ್ಚುವ ಬಗ್ಗೆ ಮಾತನಾಡಿದ್ದು, ಕೆಪಿಸಿಸಿ ಅಧ್ಯಕ್ಷರಾಗಿ ನೀವು ಅದನ್ನು ಒಪ್ಪುತ್ತೀರಾ ಎಂದು ಕೇಳಿದಾಗ, ''ಯಾರೂ ಮನೆಗೆ ಬೆಂಕಿ ಹಚ್ಚುವುದಿಲ್ಲ. ಅದನ್ನು ಒಪ್ಪುವುದಿಲ್ಲ. ಮೊದಲು ಅವರ ಹೇಳಿಕೆ ಏನಿದೆ ಎಂದು ಪರಿಶೀಲನೆ ಮಾಡುತ್ತೇನೆ'' ಎಂದರು.

ಜನಾರ್ದನ ರೆಡ್ಡಿ ಮನೆ ಮುಂದೆ ಭರತ್ ರೆಡ್ಡಿ ಬೆಂಬಲಿಗರು ಪೋಸ್ಟರ್ ಅಂಟಿಸಿದ್ದರ ಬಗ್ಗೆ ಕೇಳಿದಾಗ, ''ಅಲ್ಲಿ ಭರತ್ ರೆಡ್ಡಿ ಇದ್ದರಾ ಜನಾರ್ದನ ರೆಡ್ಡಿ ಅವರ ಮನೆ ಮುಂದೆ ವಾಲ್ಮೀಕಿ ಅವರ ಪೋಸ್ಟರ್ ಇರಬಾರದಾ ಇದ್ದರೆ ತಪ್ಪೇನಿದೆ'' ಎಂದು ತಿಳಿಸಿದರು.

**ಜನಾರ್ದನ ರೆಡ್ಡಿ ಡ್ರಾಮಾ ಮಾಸ್ಟರ್**

ನನ್ನ ಹತ್ಯೆಗೆ ಸಂಚು ರೂಪಿಸಿದ್ದರು ಎಂಬ ಜನಾರ್ದನ ರೆಡ್ಡಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, ''ಅವರು ಡ್ರಾಮಾ ಮಾಸ್ಟರ್. ಅವರು ಮೊದಲೇ ಸಿನಿಮಾ ನಿರ್ಮಾಪಕರಲ್ಲವೇ ಡ್ರಾಮಾ ಮಾಡುತ್ತಾರೆ. ಕೋಟೆ ನಿರ್ಮಿಸಿಕೊಂಡು ನೂರು ಜನ ಭದ್ರತಾ ಸಿಬ್ಬಂದಿ ಹೊಂದಿರುವವರನ್ನು ಯಾರು ಹತ್ಯೆ ಮಾಡುತ್ತಾರೆ ಬದಲಿಗೆ ಜನರಿಗೆ ಬೇರೆಯದೇ ರೀತಿಯ ಭಯವಿದೆ. ಜನಾರ್ಧನ ರೆಡ್ಡಿ ಅವರ ಕುಟುಂಬದವರಿಗೆ ಸೋಲು ಅರಗಿಸಿಕೊಳ್ಳಲು ಆಗುತ್ತಿಲ್ಲ. ಅದಕ್ಕೆ ಈ ರೀತಿ ಆರೋಪ ಮಾಡುತ್ತಿದ್ದಾರೆ. ಯಾರ ಇತಿಹಾಸ ಏನಿದೆ ಎಂಬುದನ್ನು ನೀವೇ ಅರ್ಥ ಮಾಡಿಕೊಳ್ಳಬೇಕು'' ಎಂದು ತಿರುಗೇಟು ನೀಡಿದರು.



| ಈ ದಿನದ ದರ | | | | |
|---|---|---|---|---|
| ಪೆಟ್ರೋಲ್: 102.92 ₹/L | ಡೀಸೆಲ್ : 90.99 ₹/L | ಬಂಗಾರ: ₹13,582/Gram24ct | ₹12,450/Gram22ct | ಬೆಳ್ಳಿ: ₹241.00/Gram |

# ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಉತ್ತಮ ವೇದಿಕೆ

■ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಭಾಗಹಿಸಿರುವ ಮಕ್ಕಳು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಜಿಲ್ಲೆಗೆ ಕೀರ್ತಿ ತರಬೇಕು

• ಉದಯವಾಹಿನಿ, ರಾಮನಗರ

ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಲು ಸರ್ಕಾರ ಗ್ರಾಮ, ಹೋಬಳಿ, ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಯಂತಹ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇಂತಹ ಕಾರ್ಯಕ್ರಮಗಳಲ್ಲಿ ಮಕ್ಕಳು ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರ್ಪಡಿಸಬೇಕೆಂದು ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಕೆ. ರಾಜು ಹೇಳಿದರು. ಅವರು ಶನಿವಾರ ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಿಂಭಾಗದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ, ಕಲೋತ್ಸವವನ್ನು ಉದ್ಘಾಟಿಸಿ, ಸಾವಿತ್ರಿಬಾಯಿ ಪುಲೆ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

**ಎಲ್ಲಾ ಶಿಕ್ಷಕರು ಶ್ರಮವಹಿಸಿ**

ಹಿಂದಿನ ಕಾಲದಲ್ಲಿ ಅನಿಷ್ಠ ಪದ್ಧತಿಗಳು ವಿಜೃಂಭಿಸುತ್ತಿದ್ದವು, ಆ ಸಂದರ್ಭದಲ್ಲಿ ಸಾವಿತ್ರಿಬಾಯಿ ಪುಲೆ ಅವರು ಹೆಣ್ಣು ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು, ಸಮಾಜ ಮುಖಿ ಕೆಲಸಗಳನ್ನು ಮಾಡಲು ಹೆಣ್ಣು ಮಕ್ಕಳಿಗೂ ಶಿಕ್ಷಣ ದೊರಕಬೇಕು ಎಂದು ಹೋರಾಟ ಮಾಡಿದರು. ಮಹಾತ್ಮಾ ಗಾಂಧೀಜಿ, ಕುವೆಂಪುರಂತಹ ಮಹನೀಯರು ಹಾಕಿ ಕೊಟ್ಟಿರುವ ಮಾರ್ಗವನ್ನು ಎಲ್ಲರೂ ಅಳವಡಿಸಿಕೊಂಡರೆ ಇಂದಿನ ಮಕ್ಕಳು ಉತ್ತಮ ಪ್ರಜೆಗಳಾಗಿ ಹೊರಹೊಮ್ಮುತ್ತಾರೆ ಎಂದರು.

ಪ್ರತಿಭಾ ಕಾರಂಜಿ ಕಾರ್ಯಕ್ರಮಗಳು ಮುಗಿದ ನಂತರ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿಕೊಳ್ಳಲು ಶ್ರಮಪಡಬೇಕು ಹಾಗೂ ಪರೀಕ್ಷೆ ಫಲಿತಾಂಶದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯಲು ಎಲ್ಲಾ ಶಿಕ್ಷಕರು ಶ್ರಮವಹಿಸುವಂತೆ ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸ್ವಾಮಿ ಅವರು ವೇದಿಕೆ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಿ, ಉತ್ತರ ನೀಡಿದ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಬಹುಮಾನವಾಗಿ ನೀಡಿದರು. ತಾಲ್ಲೂಕು ಅಭಿವೃದ್ಧಿ ಅಧ್ಯಕ್ಷರಾದ ಬೈರೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗಯ್ಯ, ಶಾಲಾ ಶಿಕ್ಷಣ ಇಲಾಖೆಯ ಭಾಗ್ಯಲಕ್ಷ್ಮೀ, ನೋಡಲ್ ಅಧಿಕಾರಿಗಳು ಹಾಗೂ ವಿಷಯ ಪರಿವೀಕ್ಷಕರಾದ ಭಾರತಿ, ಪ್ರಾಂಶುಪಾಲರಾದ ಓಂಕಾರ ಮೂರ್ತಿ, ದೈಹಿಕ ಶಿಕ್ಷಣಾಧಿಕಾರಿ ನೀಲಕಂಠಯ್ಯ, ದೈಹಿಕ ಶಿಕ್ಷಣ ಸಂಘದ ರವಿಕುಮಾರ್, ಅಕ್ಷರ ದಾಸೋಹದ ಸಂತೋಶ್, ಆಶಾ, ಮಂಜುಳಾ, ಕೃಷ್ಣಪ್ಪ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಜ್ಞಾನ ವಿಕಾಸ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ಪ್ರಾರ್ಥನೆ ಹಾಗೂ ನಾಡಗೀತೆ ಪ್ರಸ್ತುತಪಡಿಸಿದರು. ಭಾರತಿ ಸ್ವಾಗತಿಸಿದರು. ಶಿಕ್ಷಣಾಧಿಕಾರಿ ಭಾಗ್ಯಲಕ್ಷ್ಮೀ ವಂದಿಸಿದರು.


ಉದಯವಾಹಿನಿ ಚಿತ್ರ

> ಉಪ ಮುಖ್ಯಮಂತ್ರಿಗಳ ನಿರ್ದೇಶನದಂತೆ ಜಿಲ್ಲೆಯ ರಾಮನಗರ ತಾಲ್ಲೂಕಿನಲ್ಲಿ ರಾಮೋತ್ಸವ, ಮಾಗಡಿ ತಾಲ್ಲೂಕಿನಲ್ಲಿ ಕೆಂಪೇಗೌಡ ಉತ್ಸವ, ಚನ್ನಪಟ್ಟಣದಲ್ಲಿ ಬೊಂಬೆನಾಡು ಗಂಗೋತ್ಸವ ಹಾಗೂ ಕನಕಪುರದಲ್ಲಿ ಕನಕೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಕ್ಕಳಲ್ಲಿರುವ ಪ್ರತಿಭೆಗಳನ್ನು ಗುರುತಿಸಿಕೊಳ್ಳಲು ಉತ್ತಮ ವೇದಿಕೆಯನ್ನು ಹಾಕಿಕೊಡಲಾಗಿದೆ. ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಬೇಕು.
> – ಚೇತನ್ ಕುಮಾರ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

> ಜಿಲ್ಲಾ ಮಟ್ಟದಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳಲ್ಲಿ ಮಕ್ಕಳು ಭಾಗವಹಿಸಿ ತಮ್ಮ ಪ್ರತಿಭೆಗಳನ್ನು ಗುರುತಿಸಿಕೊಳ್ಳಬೇಕು. ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಭಾಗಹಿಸಿರುವ ಮಕ್ಕಳು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಜಿಲ್ಲೆಗೆ ಕೀರ್ತಿ ತರಬೇಕು.
> –ನಟರಾಜುಗಾಣಕಲ್
> ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

## ಖಾಸಗಿ ಶಾಲೆಗಳ ಹಿಡಿತದಲ್ಲಿ ಸರ್ಕಾರ: ಪುರುಷೋತ್ತಮ ಬಿಳಿಮಲೆ

• ಉದಯವಾಹಿನಿ, ತುಮಕೂರು


ಉದಯವಾಹಿನಿ ಚಿತ್ರ

ರಾಜ್ಯ ಸರ್ಕಾರವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದು, ಅಂತಹ ಶಾಲೆಗಳಲ್ಲಿ ಕನ್ನಡ ಭಾಷೆಯ ಅನುಷ್ಠಾನ ಕಷ್ಟಕರವಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಇಲ್ಲಿ ವಿಷಾದಿಸಿದರು. ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರಕ್ಕೆ ಹಿಡಿತ ಇಲ್ಲವಾಗಿದೆ. ಸರ್ಕಾರದ ಹಿಡಿತದಲ್ಲಿ ಇರಬೇಕಾದ ಸಂಸ್ಥೆಗಳು ಸರ್ಕಾರವನ್ನು ನಿಯಂತ್ರಿಸುತ್ತಿವೆ. ಹಾಗಾಗಿ ಖಾಸಗಿ ಶಾಲೆಗಳಲ್ಲಿ ಕನ್ನಡ ಭಾಷೆ ಅನುಷ್ಠಾನ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಿಶ್ವವಿದ್ಯಾಲಯಗಳ ಹಂತದಲ್ಲಿ ಹಾಗೂ ಉನ್ನತ ಶಿಕ್ಷಣಕ್ಕೆ ಪೂರಕವಾದ ಪಠ್ಯವನ್ನು ಕನ್ನಡದಲ್ಲಿ ರಚಿಸಿದರೆ ಅದನ್ನು ಪ್ರಾಧಿಕಾರ ಅಥವಾ ಇತರ ಸಂಸ್ಥೆಗಳ ಮೂಲಕ ಮುದ್ರಿಸಲಾಗುವುದು. 500 ಕೋಟಿ ಇಡುಗಂಟು ನೀಡಿ, ಅದರಲ್ಲಿ ಬರುವ ಬಡ್ಡಿ ಹಣವನ್ನು ಬಳಸಿಕೊಂಡು ನಿರ್ವಹಣೆ ಮಾಡುವ 'ಅನುದಾನ ಕೇಂದ್ರ' ಆರಂಭಿಸಬೇಕು. ಈ ಕೇಂದ್ರದ ಮೂಲಕ ಜಗತ್ತಿನ ಇತರೆ ಭಾಷೆಗಳ ಜ್ಞಾನ ಭಂಡಾರವನ್ನು ಕನ್ನಡಕ್ಕೆ ಅನುವಾದಿಸುವ ಕೆಲಸ ಮಾಡುವಂತೆ ಸರ್ಕಾರಕ್ಕೆ ಸಲಹೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಕನ್ನಡಪರ ಸಂಘಟನೆಗಳ ಪ್ರಮುಖರು, ಹೋರಾಟಗಾರರ ಜತೆ ಸಮಾಲೋಚನೆ ನಡೆಸಲಾಯಿತು. ಜಿಲ್ಲಾಧಿಕಾರಿ, ವಿಶ್ವವಿದ್ಯಾಲಯದಲ್ಲಿ ಕನ್ನಡ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸಲಾಯಿತು. ಜಿಲ್ಲೆಯಲ್ಲಿ ಕನ್ನಡ ಅನುಷ್ಠಾನಕ್ಕೆ ಅಧಿಕಾರಿಗಳು ಆಸಕ್ತಿಯಿಂದ ಕೆಲಸ ಮಾಡಿದಂತೆ ಕಂಡುಬರಲಿಲ್ಲ. ತಮಗೆ ಶಿಕ್ಷೆ ನೀಡುವ ಅಧಿಕಾರ ಇಲ್ಲ. ಆದರೆ ಈ ಬಗ್ಗೆ ಸೂಚನೆ ನೀಡಲಾಗಿದೆ ಎಂದರು. 2022 ಸಮಗ್ರ ಕನ್ನಡ ಅನುಷ್ಠಾನ ಅಧಿನಿಯಮ ಕೆಲವೇ ತಿಂಗಳಲ್ಲಿ ಜಾರಿಗೆ ಬರಲಿದೆ. ಇದು ಜಾರಿಯಾದರೆ ನಿಯಮ ಉಲ್ಲಂಘಿಸುವ ಹಾಗೂ ಕನ್ನಡ ಅನುಷ್ಠಾನ ಮಾಡದ ಅಧಿಕಾರಿ, ನೌಕರರಿಗೆ ಶಿಕ್ಷೆ ವಿಧಿಸಬಹುದಾಗಿದೆ. ಈಗ ಶಿಕ್ಷೆಯ ಭಯವಿಲ್ಲದೆ ಕನ್ನಡ ಅನುಷ್ಠಾನದಲ್ಲಿ ತಾತ್ಸಾರ ತೋರುತ್ತಾರೆ ಎಂದು ಹೇಳಿದರು.

ಕನ್ನಡಪರ ಹೋರಾಟಗಾರರು, ಜಿಲ್ಲಾಧಿಕಾರಿ ನಡುವೆ ಅಂತರ ಇರುವುದು, ಹೋರಾಟಗಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದು ಸಭೆ ನಡೆದ ಸಮಯದಲ್ಲಿ ಕಂಡು ಬಂತು. ಜಿಲ್ಲಾಧಿಕಾರಿ ವಿರುದ್ಧ ಹೋರಾಟಗಾರರು ದೂರು ಸಲ್ಲಿಸಿದ್ದಾರೆ.

ಈ ವಿಚಾರವನ್ನು ಜಿಲ್ಲಾಧಿಕಾರಿ ಗಮನಕ್ಕೆ ತಂದಿದ್ದು, ಸರಿಪಡಿಸಿಕೊಳ್ಳುವುದಾಗಿ ಅವರು ತಿಳಿಸಿದ್ದಾರೆ. ಕನ್ನಡದ ಪರವಾಗಿ ಹೋರಾಟ ನಡೆಸಿದವರ ಮೇಲೆ ದಾಖಲಾಗಿರುವ ದೂರಿನ ವಿವರಗಳನ್ನು ನೀಡುವಂತೆ ನಿರ್ದೇಶಿಸಲಾಗಿದೆ ಎಂದು ತಿಳಿಸಿದರು.

**ಕನ್ನಡ ಬಲ್ಲವರ ನೇಮಕ**

**ರಾಷ್ಟ್ರೀಕೃತ ಬ್ಯಾಂಕ್‌ಗಳ ಎಲ್ಲಾ ಶಾಖೆಯಲ್ಲಿ ಕನ್ನಡ ಭಾಷೆ ಗೊತ್ತಿರುವ ಒಬ್ಬರನ್ನು ಕಡ್ಡಾಯವಾಗಿ ನೇಮಕ ಮಾಡುವಂತೆ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ, ಈ ಸಂಬಂಧ ಲೀಡ್ ಬ್ಯಾಂಕ್ ಅಧಿಕಾರಿಗೆ ಜಿಲ್ಲಾಧಿಕಾರಿ ನಿರ್ದೇಶನ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಇದು ಜಾರಿಗೆ ಬರಲಿದೆ. ಇದರಿಂದ ಬ್ಯಾಂಕ್‌ಗಳಲ್ಲಿ ನಡೆಯುವ ಸಂಘರ್ಷ ಕಡಿಮೆಯಾಗಲಿದೆ ಎಂದರು.**

## ಪಾಚಿಗಟ್ಟಿದ ಕಲ್ಯಾಣಿ: ಭಕ್ತರ ಪ್ರಾಣಕ್ಕೆ ಕುತ್ತು

• ಉದಯವಾಹಿನಿ, ಮಹದೇಶ್ವರ ಬೆಟ್ಟ

ಮಲೆ ಮಾದಪ್ಪನ ಸನ್ನಿಧಿಯಲ್ಲಿರುವ ಕಲ್ಯಾಣಿ ಕೊಳದ ನಿರ್ವಹಣೆ ಮಾಡದ ಪರಿಣಾಮ ಭಕ್ತರು ಜಾರಿಬಿದ್ದು ಪ್ರಾಣಕ್ಕೆ ಕುತ್ತು ತಂದುಕೊಳ್ಳುತ್ತಿದ್ದಾರೆ. ಕೈಕಾಲು ಮುರಿದುಕೊಂಡು ಆಸ್ಪತ್ರೆ ಸೇರುತ್ತಿದ್ದಾರೆ. ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳವಾಗಿರುವ ಮಲೆ ಮಹದೇಶ್ವರನ ಬೆಟ್ಟಕ್ಕೆ ಪ್ರತಿದಿನ ಸಾವಿರಾರು ಭಕ್ತರು ಭೇಟಿ ನೀಡಿ ಮಾದಪ್ಪನ ದರ್ಶನ ಪಡೆಯುತ್ತಾರೆ. ಉತ್ಸವ, ಅಮಾವಾಸ್ಯೆ, ಜಾತ್ರಾ ಮಹೋತ್ಸವಗಳಲ್ಲಿ ಭಕ್ತ ಸಾಗರವೇ ಬರುತ್ತದೆ. ಹೀಗೆ ಕ್ಷೇತ್ರಕ್ಕೆ ಬಂದವರಿಗೆ ಶುಚಿಯಾಗಲು ಸ್ನಾನಘಟ್ಟಗಳ ಕೊರತೆ ಇರುವುದರಿಂದ ಭಕ್ತರು ಅಂತರಗಂಗೆಯಲ್ಲಿರುವ ಕಲ್ಯಾಣಿ ಕೊಳದಲ್ಲಿ ಸ್ನಾನ ಮಾಡುತ್ತಾರೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಮಿಂದೇಳುವುದರಿಂದ ಹಾಗೂ ಕಲ್ಯಾಣಿಯೊಳಗೆ ಭಕ್ತರು ಬಿಸಾಡುವ ನಿರುಪಯುಕ್ತ ವಸ್ತುಗಳಿಂದ ಅನೈರ್ಮಲ್ಯ ಉಂಟಾಗಿ ಕ್ರಮೇಣ ಕೊಳೆತು ಕಲ್ಯಾಣಿಯ ಮೆಟ್ಟಿಲುಗಳಲ್ಲಿ ಪಾಚಿ ಕಟ್ಟುತ್ತಿದೆ. ಇದನ್ನು ಗಮನಿಸಿದ ಭಕ್ತರು ಪಾಚಿಯ ಮೇಲೆ ಕಾಲಿಟ್ಟು ಜಾರಿ ಕಲ್ಯಾಣಿ ಕೊಳದೊಳಗೆ ಬೀಳುತ್ತಿದ್ದಾರೆ.


ಉದಯವಾಹಿನಿ ಚಿತ್ರ

ನಿಯಮಿತವಾಗಿ ಕಲ್ಯಾಣಿ ಕೊಳವನ್ನು ಶುಚಿಗೊಳಿಸದಿರುವುದು, ಪಾಚಿಯನ್ನು ತೆಗೆಯದಿರುವುದು ಸಮಸ್ಯೆಗೆ ಕಾರಣ ಎಂದು ದೂರುತ್ತಾರೆ ಭಕ್ತರು. ಪ್ರತಿದಿನ ಕಲ್ಯಾಣಿಯಲ್ಲಿ ಬಿದ್ದು ಭಕ್ತರು ಗಾಯ ಮಾಡಿಕೊಳ್ಳುತ್ತಿದ್ದಾರೆ. ಕೈಕಾಲು, ತಲೆಗೆ ಗಂಭೀರ ಪೆಟ್ಟು ಮಾಡಿಕೊಳ್ಳುತ್ತಿದ್ದಾರೆ.

ಕೆಲವರು ಆಸ್ಪತ್ರೆ ಸೇರಬೇಕಾಗಿದೆ' ಎಂದು ಭಕ್ತ ಮಹೇಶ್ ಅಸಮಾಧಾನ ವ್ಯಕ್ತಪಡಿಸಿದರು. ಕೆಆರ್ ನಗರದಿಂದ ಬಂದಿದ್ದ ವಿಜಯ್ ಎಂಬುವರು ಮುಡಿ ಕೊಟ್ಟು ಸ್ನಾನ ಮಾಡಲು ಕಲ್ಯಾಣಿಕೊಳಕ್ಕೆ ಇಳಿಯುವಾಗ ಕಾಲು ಜಾರಿಬಿದ್ದು ತಲೆಗೆ ಗಂಭೀರ ಪೆಟ್ಟು ಮಾಡಿಕೊಂಡಿದ್ದಾರೆ. ಕೂಡಲೇ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಬೇರೊಂದು ಆಸ್ಪತ್ರೆಗೆ ತೆರಳುವಂತೆ ಸೂಚಿಸಲಾಗಿದೆ ಎಂದು ಆಸ್ಪತ್ರೆಯ ಆರೋಗ್ಯ ಮಹಿಳಾ ಸಹಾಯಕಿ ತಿಳಿಸಿದ್ದಾರೆ. ಘಟನೆ ಕುರಿತು ಮಾತನಾಡಿದ ಗಾಯಾಳು ವಿಜಯ್ ಹಲವು ವರ್ಷಗಳಿಂದ ಮಾದೇಶ್ವರನ ದರ್ಶನಕ್ಕೆ ಬರುತಿದ್ದೇನೆ. ಈ ಬಾರಿಯೂ ಸಂಜೆ ಕ್ಷೇತ್ರಕ್ಕೆ ಬಂದು ಬೆಳಿಗ್ಗೆ ಮುಡಿ ತೆಗೆಸಿ ಸ್ನಾನ ಮಾಡಲು ಹೋದಾಗ ಪಾಚಿ ಕಟ್ಟಿದ್ದ ಮೆಟ್ಟಿಲು ಮೇಲೆ ಕಾಲಿಡುತ್ತಿದ್ದಂತೆ ಜಾರಿ ಬಿದ್ದು ತಲೆಗೆ ಪೆಟ್ಟು ಬಿದ್ದಿದೆ' ಎಂದರು. ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಭಕ್ತರಿಗೆ ಮೂಲಸೌಲಭ್ಯ ಕಲ್ಪಿಸಬೇಕು. ದೇವರ ಬಳಿ ಕಷ್ಟ ಹೇಳಿಕೊಳ್ಳಲು ಬರುವ ಭಕ್ತರೇ ಕ್ಷೇತ್ರದಲ್ಲಿ ಕಷ್ಟಕ್ಕೆ ಸಿಲುಕುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಲ್ಯಾಣಿ ಕೊಳದಲ್ಲಿ ನೀರು ಹಸಿರು ಪಾಚಿಯಿಂದ ಕೂಡಿದ್ದು ಸ್ನಾನ ಮಾಡಲು ಯೋಗ್ಯವಿಲ್ಲದಂತಾಗಿದೆ. ಪಾಪ ಕಳೆದುಕೊಳ್ಳಲು ಕೊಳದಲ್ಲಿ ಮೀಯಲು ಬರುವ ಭಕ್ತರಿಗೆ ಅನಾರೋಗ್ಯ ಬರುವ ಆತಂಕ ಎದುರಾಗಿದೆ. ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕೂಡಲೇ ಸಮಸ್ಯೆ ಬಗೆಹರಿಸಬೇಕು ಎಂದು ಭಕ್ತರು ಒತ್ತಾಯಿಸಿದ್ದಾರೆ.

## ಮಿನಿ ನ್ಯೂಸ್

### ಪಸರಿಸಲಿ ಕನ್ನಡ ಸಾಹಿತ್ಯ ಸೊಬಗು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚನ್ನಪಟ್ಟಣ

ಕನ್ನಡ ಸಾಹಿತ್ಯದ ಸೊಬಗನ್ನು ಪಸರಿಸುವ ಕೆಲಸಕ್ಕೆ ಸರ್ವರೂ ಸನ್ನದ್ದರಾಗಿ ನಿಲ್ಲಬೇಕಾದ ಅನಿವಾರ್ಯತೆ ಬಂದಿದೆ ಎಂದು ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಸು.ತ. ರಾಮೇಗೌಡ ಹೇಳಿದರು. ನಗರದ ಸರ್ಕಾರಿ ಬಸ್ ನಿಲ್ದಾಣದ ಆವರಣದಲ್ಲಿ ಚನ್ನಪಟ್ಟಣ ರೋಟರಿ ಸಂಸ್ಥೆ– 3191 ವತಿಯಿಂದ ಏರ್ಪಡಿಸಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ, ಇತಿಹಾಸ ಇತ್ಯಾದಿ ವಿಷಯಗಳನ್ನು ಜನಸಾಮಾನ್ಯರ ಸ್ಮೃತಿ ಪಟಲದಲ್ಲಿ ದೀರ್ಘಕಾಲ ಉಳಿಯುವಂತೆ ಮಾಡಲು ಸಂಘ–ಸಂಸ್ಥೆಗಳು ಕಾರ್ಯಕ್ರಮಗಳನ್ನು ಸಂಘಟಿಸಬೇಕಿದೆ. ರೋಟರಿ ಸಂಸ್ಥೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳನ್ನು ಬಸ್ ನಿಲ್ದಾಣದಲ್ಲಿ ಅನಾವರಣಗೊಳಿಸಿ, ಜನಸಾಮಾನ್ಯರಿಗೆ ಸಾಹಿತಿಗಳ ಪರಿಚಯಿಸುವ ಕಾರ್ಯ ಶ್ಲಾಘನೀಯ ಎಂದರು. ಕಸ್ತೂರಿ ಕರ್ನಾಟಕ ವೇದಿಕೆ ಜಿಲ್ಲಾಧ್ಯಕ್ಷ ಯೋಗೀಶ್ ಗೌಡ, ಕನ್ನಡದ ಬಗೆಗೆ ಕನ್ನಡಿಗರು ಅಭಿಮಾನ ಮೂಡಿಸಿಕೊಳ್ಳದ ಹೊರತು, ಕನ್ನಡತನ ಉಳಿಯಲು ಸಾಧ್ಯವಿಲ್ಲ. ನೆಲ, ಜಲ, ಭಾಷೆ, ಆಹಾರ, ಸಂಸ್ಕೃತಿ ಇತ್ಯಾದಿ ಅಂಶಗಳು ಹೆಮ್ಮೆಯ ವಿಷಯವಾಗಬೇಕು ಎಂದು ಹೇಳಿದರು. ಕವಯಿತ್ರಿ ಡಾ. ರಾಜಶ್ರೀ, ಕನ್ನಡ ಸಾಹಿತ್ಯವನ್ನು ವಿಶ್ವ ದರ್ಜೆಗೆ ಏರಿಸಿದ ಕೀರ್ತಿ ನಮ್ಮ ಕವಿಗಳಿಗೆ ಸಲ್ಲುತ್ತದೆ. ಕನ್ನಡ ಗಳಿಸಿರುವ ಶ್ರೇಷ್ಠತೆಯನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

### ಚಿನ್ನ ವಂಚನೆ ಪ್ರಕರಣ: ಪಶ್ಚಿಮ ಬಂಗಾಳದಲ್ಲಿ ಆರೋಪಿ ಬಂದನ

• ಉದಯವಾಹಿನಿ, ಹಾರೋಹಳ್ಳಿ

ಒಡವೆ ಮಾಡಿಸಿಕೊಡುವುದಾಗಿ ನಂಬಿಸಿ ಗಟ್ಟಿಚಿನ್ನ ಪಡೆದು ವಂಚನೆ ಮಾಡಿದ್ದ ಆರೋಪಿಯನ್ನು ಕಗ್ಗಲಿಪುರ ಪೊಲೀಸರು ಪಶ್ಚಿಮ ಬಂಗಾಳದ ಕೋಲ್ಕತ್ತಾದ ಸಮೀಪ ಬಂಧಿಸಿದ್ದಾರೆ. ಪಶ್ಚಿಮ ಬಂಗಾಳದ ಮುಕ್ತ ಶೇಖ್, ಬಂಧಿತರು. ಆರೋಪಿಗಳಿಂದ 15 ಲಕ್ಷ ಮೌಲ್ಯದ 100 ಗ್ರಾಂ. ಚಿನ್ನ ವಶಕ್ಕೆ ಪಡೆಯಲಾಗಿದೆ.



ಉದಯವಾಹಿನಿ ಚಿತ್ರ

ಆರೋಪಿ ಮುಕ್ತ ಶೇಖ್, ಇವರ ಸಹಚರರಾದ ಹಸಿಬುಲ್ ಶೇಖ್ ಮತ್ತು ಸಂಟು ಶೇಖ್ ಕಗ್ಗಲಿಪುರ ಪೊಲೀಸ್ ಠಾಣೆ ವ್ಯಾಪ್ತಿಯ ವೀರಸಂದ್ರ ಗ್ರಾಮದ ತಮ್ಮ ಮನೆಗೆ ಭೇಟಿ ನೀಡಿ ಒಡವೆ ಮಾಡಿಕೊಡುವುದಾಗಿ 550 ಗ್ರಾಂ ಗಟ್ಟಿ ಚಿನ್ನ ಪಡೆದು 30 ಗ್ರಾಂ ಚಿನ್ನ ಕಳ್ಳತನ ಮಾಡಿದ್ದಾರೆ ಎಂದು ಸಂತೋಷ್ ಅವರು ನ.29ರಂದು ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಕಗ್ಗಲಿಪುರ ಪೊಲೀಸರು ಪ್ರಕರಣದ ತನಿಖೆ ಕೈಗೊಂಡು, ಆರೋಪಿಗಳ ಪತ್ತೆಗಾಗಿ ಮಾಹಿತಿ ಸಂಗ್ರಹಿಸಿ, ಆರೋಪಿ ಮುಕ್ತ ಶೇಕ್ ಅವರನ್ನು ಡಿ.24ರಂದು ಬಂಧಿಸಿ ಇಲ್ಲಿಗೆ ಕರೆ ತಂದು ವಿಚಾರಣೆ ನಡೆಸಿದಾಗ ಆರೋಪಿಗಳು ಚಿನ್ನದ ವ್ಯಾಪಾರಿಗಳಿಂದ ಒಡವೆಗಳನ್ನು ವಿನ್ಯಾಸ ಮಾಡಿಕೊಡುವುದಾಗಿ ನಂಬಿಸಿ ವಂಚನೆ ಮಾಡಿರುವುದು ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹಸಿಬುಲ್ ಶೇಖ್ ಮತ್ತು ಸಂಟು ಶೇಖ್ ತಲೆಮರೆಸಿಕೊಂಡಿದ್ದು, ಇವರಿಬ್ಬರ ಪತ್ತೆ ವಿಶೇಷ ತಂಡ ರಚಿಸಲಾಗಿದ್ದು, ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

### 50 ಕುರಿ ಅನುಮಾನಾಸ್ಪದವಾಗಿ ಸಾವು

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ಕಾಚಹಳ್ಳಿಯಲ್ಲಿ ಸುಮಾರು 50 ಕುರಿಗಳು ರಾತ್ರಿ ಅನುಮಾನಾಸ್ಪದವಾಗಿ ಮೃತಪಟ್ಟಿವೆ. ಸಾವಿಗೆ ಕಾರಣ ಗೊತ್ತಾಗಿಲ್ಲ. ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆ ವೈದ್ಯರು ಸ್ಥಳಕ್ಕೆ ತೆರಳಿ ಎಲ್ಲಾ ಕುರಿಗಳಿಗೆ ಚಿಕಿತ್ಸೆ ನೀಡಿದ್ದಾರೆ. ಗ್ರಾಮದ ಜಾಫರ್ ಖಾನ್, ಖುರ್ಷಿದ್ ಮತ್ತು ಮಾಲಿಕ್ ಮೂರು ಜನ ಸುಮಾರು 200 ಕುರಿಗಳ ಮಂದೆಯನ್ನು ಬೆಳಗಿನಿಂದ ಸಂಜೆಯವರೆಗೆ ಹೊರಗಡೆ ಮೇಯಿಸಿಕೊಂಡು ಬಂದಿದ್ದಾರೆ. ಸಾಯಂಕಾಲ ಮನೆಗೆ ಬರುತ್ತಲೇ ಒಂದೊಂದಾಗಿ ಸುಮಾರು 50 ಕುರಿಗಳು ಸತ್ತಿವೆ. ಕೂಡಲೇ ಪಶು ವೈದ್ಯಕೀಯ ಇಲಾಖೆಯ ವೈದ್ಯರಿಗೆ ಮಾಹಿತಿ ನೀಡಿದ್ದಾರೆ.ವೈದ್ಯರು ಸ್ಥಳಕ್ಕೆ ಬಂದು ಉಳಿದ ಎಲ್ಲಾ ಕುರಿಗಳಿಗೆ ಚುಚ್ಚುಮದ್ದು ನೀಡಿದ್ದಾರೆ. ಬೆಳಗಳಿಗೆ ಯಾವುದಾದರೂ ರಾಸಾಯನಿಕ ಸಿಂಪಡಿಸಿದ್ದ ಹುಲ್ಲನ್ನು ತಿಂದಿರಬಹುದು ಅಥವಾ ನೀರನ್ನು ಕುಡಿದಿರಬಹುದು ಎಂಬ ಅನುಮಾನವಿದೆ ಎಂದು ಮಾಲೀಕ ಜಾಫರ್ ಖಾನ್ ತಿಳಿಸಿದರು.

ಸುಮಾರು 30–40 ವರ್ಷಗಳಿಂದ ಕುರಿಗಳನ್ನು ಸಾಕುವುದರಿಂದಲೇ ಜೀವನ ನಿರ್ವಹಣೆ ಮಾಡುತ್ತಿದ್ದೇವೆ. ಈಗಾಗಲೇ 50 ಕುರಿಗಳು ಸತ್ತಿವೆ. ಇನ್ನೂ ರಾತ್ರಿಯಲ್ಲಿ ಎಷ್ಟು ಸಾಯುತ್ತವೋ ಗೊತ್ತಿಲ್ಲ. ವೈದ್ಯರು ಬೆಳಿಗ್ಗೆ ಬಂದು ಮರಣೋತ್ತರ ಪರೀಕ್ಷೆ ನಡೆಸುವುದಾಗಿ ಹೇಳಿದ್ದಾರೆ. ಸರ್ಕಾರ ನೆರವಿಗೆ ಬಂದು ಪರಿಹಾರ ನೀಡಬೇಕು ಎಂದರು.

## ಮಂಡ್ಯದಲ್ಲಿ ಹೆಚ್ಚಿದ ವಾಹನ ದಟ್ಟಣೆ

• ಉದಯವಾಹಿನಿ, ಮಂಡ್ಯ

ನಗರದಲ್ಲಿ ಹೆಚ್ಚಿನ ವಾಹನ ದಟ್ಟಣೆ ಇರುವುದರಿಂದ ಮಂಡ್ಯ ದಕ್ಷಿಣ ಭಾಗಕ್ಕೆ ಬೈಪಾಸ್ 'ರಿಂಗ್ ರೋಡ್' ಪ್ರಸ್ತಾವ ಇರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ವಾಹನ ದಟ್ಟಣೆಯ ಕುರಿತು ಅಧ್ಯಯನ ನಡೆಸಿ ವರದಿ ನೀಡಲು ಎಫ್.ಪಿ. ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕುಮಾರ ಹೇಳಿದರು. ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ರಾಷ್ಟ್ರೀಯ ಹೆದ್ದಾರಿ ರಿಂಗ್ ರೋಡ್ ಸಂಬಂಧ ಆಯೋಜಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಎಫ್.ಪಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಂಸ್ಥೆಯವರು ನಗರದಲ್ಲಿ 5 ಕಡೆ ಸಿಸಿಟಿವಿ ಕ್ಯಾಮೆರಾ ಅಳವಡಿಸಿ ಪ್ರತಿನಿತ್ಯ ನಗರದಲ್ಲಿ ಸಂಚರಿಸುವ ವಾಹನಗಳ ದಟ್ಟಣೆಯ ಕುರಿತು ಮಾಹಿತಿ ಮತ್ತು ಅಂಕಿಅಂಶಗಳನ್ನು ಸಂಗ್ರಹಿಸಿರುತ್ತಾರೆ ಎಂದು ತಿಳಿಸಿದರು. ನಗರದಲ್ಲಿನ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು 'ರಿಂಗ್ ರೋಡ್' ನಿರ್ಮಿಸುವ ಕುರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಸದರಿ ವಾಹನ ದಟ್ಟಣೆ ವರದಿಗೆ ಅನುಮೋದನೆ ದೊರೆತ ಕೂಡಲೇ ವಿಸ್ತೃತ ಯೋಜನಾ ವರದಿ ತಯಾರಿಸಲು ಸೂಚಿಸಿದರು. ವಾಹನ ದಟ್ಟಣೆ ವರದಿ ಅನುಮೋದನೆಗೊಂಡ ನಂತರ ಡಿ.ಪಿ.ಆರ್. ಸಿದ್ಧಪಡಿಸಿ. ರಿಂಗ್ ರೋಡ್ ನಿರ್ಮಿಸಿದ ಪಕ್ಷದಲ್ಲಿ ಶೇಕಡಾ ಎಷ್ಟು ಪ್ರಮಾಣದಲ್ಲಿ ನಗರದ ಸಂಚಾರ ದಟ್ಟಣೆ ಆಗಲಿದೆ ಹಾಗೂ ರಸ್ತೆಯ ಉದ್ದ ಅಗಲದ ಕುರಿತು ಮಾಹಿತಿ ಸಂಗ್ರಹ ಮಾಡಲು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ಎಂದು ಹೇಳಿದರು.

## ಕಂದಾಯ ವಸೂಲಿಗೆ ಪ್ರತ್ಯೇಕ ಕಾರ್ಯಪಡೆ ರಚಿಸಿ: ಜಿಟಿಡಿ ಸೂಚನೆ

• ಉದಯವಾಹಿನಿ, ಮೈಸೂರು

ಗ್ರೇಡ್–1 ಮೈಸೂರು ಮಹಾನಗರಪಾಲಿಕೆ ಅಧಿಸೂಚನೆ ಯಾವುದೇ ಕ್ಷಣದಲ್ಲಿ ಹೊರಬೀಳುವ ಸಾಧ್ಯತೆ ಇದ್ದು, ನಗರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಆಸ್ತಿಗಳು, ಬಡಾವಣೆಗಳು ಸೇರಿದಂತೆ ಸಂಪೂರ್ಣ ಮಾಹಿತಿಯನ್ನು ಒಂದು ತಿಂಗಳಲ್ಲಿ ಸಿದ್ಧವಿಟ್ಟುಕೊಳ್ಳಬೇಕು. ಕಂದಾಯ ವಸೂಲಿಗೆ ಪ್ರತ್ಯೇಕ ಕಾರ್ಯಪಡೆ ರಚಿಸಬೇಕು ಎಂದು ಶಾಸಕ ಜಿ.ಟಿ. ದೇವೇಗೌಡ ಸೂಚಿಸಿದರು. ಇಲ್ಲಿನ ನಗರಪಾಲಿಕೆ ವಲಯ ಕಚೇರಿ–3ರಲ್ಲಿ ಶನಿವಾರ ನಡೆದ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ಪಾಲಿಕೆ ವಲಯ ಕಚೇರಿ, ಪಟ್ಟಣ ಪಂಚಾಯಿತಿ, ನಗರಸಭೆ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾ.ಪಂಗಳಿಂದ ಪಟ್ಟಣ ಪಂಚಾಯಿತಿ, ನಗರಸಭೆಯಾಗಿ ಮೇಲ್ದರ್ಜೆಗೇರಿಸಿದ ಬಳಿಕ ಸಾಕಷ್ಟು ಸಮಸ್ಯೆಗಳು ಸುಧಾರಣೆ ಆಗಿವೆ. ಆರಂಭದಲ್ಲಿ ಖಾತೆ ಕೊಡುತ್ತಿಲ್ಲ, ದುಡ್ಡು ಜಾಸ್ತಿ ಕೇಳುತ್ತಿದ್ದಾರೆ. ಕಂದಾಯ ದ್ವಿಗುಣ ಮಾಡಲಾಗಿದೆ, ಕಚೇರಿಗೆ ಅಲೆದಾಡಿಸಲಾಗುತ್ತಿದೆ ಎನ್ನುವ ದೂರುಗಳು ಬರುತ್ತಿದ್ದವು.

ಈಗ ಸಾಕಷ್ಟು ಸುಧಾರಿಸಿ ದೂರುಗಳು ಕಡಿಮೆಯಾಗಿವೆ ಎಂದರು. ಗ್ರೇಡ್–1 ಮೈಸೂರು ನಗರಪಾಲಿಕೆಯನ್ನಾಗಿ ಮಾಡಲು ತೀರ್ಮಾನ ಮಾಡಿರುವುದರಿಂದ ಸರ್ಕಾರ ಆದಷ್ಟು ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಬಹುದು ಎಂದರು.


ಉದಯವಾಹಿನಿ ಚಿತ್ರ

ಖಾಸಗಿ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿಕೊಂಡು ಮುಂದಿನ ತಿಂಗಳಿಗೆ ಒಂದು ವರ್ಷವಾಗಲಿದೆ. ಇಲ್ಲಿಯವರೆಗೆ ಏನೇನು ಆಗಿದೆ, ಮುಂದೆ ಏನೇನು ಕೆಲಸಗಳು ಆಗಬೇಕು, ಸಮಸ್ಯೆ ಪರಿಹಾರಕ್ಕೆ ಏನು ಕ್ರಮ ಕೈಗೊಳ್ಳಬೇಕು ಎಂಬುದನ್ನು ಗಮನಿಸಬೇಕು. ನಿವೇಶನಗಳು, ಮನೆಗಳಲ್ಲಿ ಎಷ್ಟು ಖಾತೆಗಳಾಗಿವೆ, ಎಷ್ಟು ಬಾಕಿ ಇವೆ ಎಂಬುದರ ಬಗ್ಗೆ ಮ್ಯಾಪ್ ಸಮೇತ ಒಂದು ಸಮಗ್ರ ವರದಿ ಸಿದ್ಧಪಡಿಸಿಟ್ಟುಕೊಳ್ಳಬೇಕು ಎಂದು ಸೂಚಿಸಿದರು. ನಗರಪಾಲಿಕೆಗೆ ಹಸ್ತಾಂತರವಾದ ಮೇಲೆ ಅಪಾರ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇರುತ್ತದೆ. ಅದನ್ನು ಸಮರ್ಥವಾಗಿ ನಿರ್ವಹಿಸಬೇಕಾಗುತ್ತದೆ. ಮುಂದೆ ವಲಯ ಕಚೇರಿಗಳನ್ನು ವಿಸ್ತರಿಸಿ ಅಧಿಕಾರಿಗಳನ್ನು ನೇಮಕ ಮಾಡಿದ ಮೇಲೆ ಯಥಾಸ್ಥಿತಿಯಲ್ಲಿ ಆಡಳಿತ ಸಾಗಬೇಕು. ಜನರಿಗೆ ಎಂದಿನಂತೆ ಸೌಲಭ್ಯಗಳು ದೊರೆಯುವಂತೆ ಆಗಬೇಕು ಎಂದರು. ಮುಡಾ ನಿರ್ಮಿಸಿದವು ಹಾಗೂ ಅನುಮೋದಿಸಿದ ಖಾಸಗಿ ಬಡಾವಣೆಗಳನ್ನು ಹಸ್ತಾಂತರಿಸುವಾಗ ಮೂಲ ಸೌಕರ್ಯಗಳನ್ನು ಕಲ್ಪಿಸದಿರುವ ಬಗ್ಗೆ ಮುಖ್ಯಮಂತ್ರಿ, ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರಲಾಗಿದೆ. ಶೀಘ್ರದಲ್ಲೇ ಸಭೆ ನಡೆಸಿ ಇತ್ಯರ್ಥಪಡಿಸುವ ಭರವಸೆಯನ್ನು ಅವರು ನೀಡಿದ್ದಾರೆ' ಎಂದು ತಿಳಿಸಿದರು.

**ಸಮಗ್ರ ವರದಿ ಸಿದ್ಧಪಡಿಸಿ**

**ಪ.ಪಂ. ಮತ್ತು ನಗರಸಭೆ ವ್ಯಾಪ್ತಿಯಲ್ಲಿ ಸರ್ಕಾರಿ ಆಸ್ತಿಗಳು, ಮನೆಗಳು, ಗ್ರಾಮಗಳು, ಬಡಾವಣೆಗಳು, ಶಾಲೆಗಳು, ಅಂಗನವಾಡಿ ಕಟ್ಟಡಗಳು, ಆಸ್ಪತ್ರೆಗಳು ಎಷ್ಟಿವೆ ಎಂಬುದನ್ನು ವರದಿ ಮಾಡಬೇಕು. ಅಂತೆಯೇ ಕುಡಿಯುವ ನೀರು, ಯುಜಿಡಿ, ಬೀದಿ ದೀಪ, ರಸ್ತೆ ಸಮಸ್ಯೆಗಳನ್ನು ಪಟ್ಟಿ ಮಾಡಿಕೊಂಡಿರಬೇಕು. ಈ ಕೆಲಸವಾದರೆ ವಲಯ ಕಚೇರಿ ಸ್ಥಾಪಿಸಿ ಸುಗಮವಾಗಿ ನಿರ್ವಹಣೆ ಮಾಡಿಕೊಂಡು ಹೋಗಲು ಸಾಧ್ಯವಾಗುತ್ತದೆ' ಎಂದು ತಿಳಿಸಿದರು.**

## ಹರೆಯದವರಿಗೆ ಪ್ರೇಮ ಗಾಳ; ಕೋಲಾರ ಜಿಲ್ಲೆಯಲ್ಲಿ ಹೆಚ್ಚುತ್ತಿವೆ ಪೋಕ್ಸೋ

• ಉದಯವಾಹಿನಿ, ಕೋಲಾರ

ಜಿಲ್ಲೆಯಲ್ಲಿ ಹದಿಹರೆಯದವರು ಪ್ರೇಮ ಪಾಶಕ್ಕೆ ಸಿಲುಕಿ, ದೈಹಿಕ ಆಕರ್ಷಣೆಗೆ ಒಳಗಾಗಿ ದಾರಿ ತಪ್ಪುತ್ತಿದ್ದು, ಪೋಕ್ಸೋ ಪ್ರಕರಣಗಳು ಹೆಚ್ಚುತ್ತಿವೆ. ಕಳೆದ ಎಂಟು ತಿಂಗಳಲ್ಲಿ 114 ಪೋಕ್ಸೋ ಪ್ರಕರಣ ದಾಖಲಾಗಿರುವುದು ಆತಂಕ ತಂದೊಡ್ಡಿದೆ. ಸುಂದರ ಭವಿಷ್ಯ ಕಟ್ಟಿಕೊಳ್ಳುವ ಸಮಯದಲ್ಲೇ ಪ್ರೀತಿಯ ಆಕರ್ಷಣೆಗೆ ಒಳಗಾಗಿ ಓಡಿ ಹೋಗಿ ಎಡವಟ್ಟು ಮಾಡಿಕೊಳ್ಳುತ್ತಿದ್ದಾರೆ, ನಂತರ ಪರಿತಪಿಸುತ್ತಿದ್ದಾರೆ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಶಾಲಾ ಕಾಲೇಜುಗಳಲ್ಲಿ ಅವಿರತವಾಗಿ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಯುತ್ತಿದ್ದರೂ ಹದಿಹರೆಯದ ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳು ನಿಲ್ಲುತ್ತಿಲ್ಲ.

ಪ್ರೇಮ ಪ್ರಕರಣದಲ್ಲಿ ಸಿಲುಕಿಯೋ, ಬಾಲ್ಯ ವಿವಾಹದಿಂದಲೋ ಹಾಗೂ ಇನ್ನಿತರ ಕಾರಣಗಳಿಂದಲೂ ಬಾಲಕಿಯರು ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರಕ್ಕೆ ಒಳಗಾಗುತ್ತಿರುವುದು ಗೊತ್ತಾಗುತ್ತಿದೆ. ಬಾಲಕಿಯರನ್ನು ಯುವಕರೋ, ಮತ್ಯಾರೋ ಪ್ರೀತಿಸಿ, ಲೈಂಗಿಕ ವಾಂಛೆಗೆ ಬಳಸಿಕೊಂಡು ಪೊಲೀಸ್ ಠಾಣೆ ಮೆಟ್ಟಿಲೇರುವ, ಜೈಲು ಪಾಲಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ.




ಪೋಕ್ಸೋ ಪ್ರಕರಣದಲ್ಲಿ ಸಿಲುಕಿದವರಿಗೆ ಸಾಕ್ಷ್ಯ ಕೊರತೆ ಸೇರಿದಂತೆ ವಿವಿಧ ಕಾರಣಗಳಿಂದ ಶಿಕ್ಷೆಯಾಗುವ ಪ್ರಮಾಣ ಕಡಿಮೆ ಆಗುತ್ತಿದೆ. ತನಿಖೆಗೆ ಸಂತ್ರಸ್ತರು ಹಾಗೂ ಕುಟುಂಬದಿಂದ ಸಹಕಾರ ಸಿಗದಿರುವುದೂ, ಪ್ರಕರಣ ಮುಂದುವರಿಸಿಕೊಂಡು ಹೋಗಲು ಹಿಂಜರಿಯುವುದೂ ಆರೋಪಿಗಳು ಬಚಾವ್ ಆಗಲು ದಾರಿ ಮಾಡಿಕೊಡುತ್ತಿದೆ. ಅನೇಕರು ನ್ಯಾಯಾಲಯದ ಹೊರಗೆ ಇತ್ಯರ್ಥಪಡಿಸಿಕೊಳ್ಳಲು ಮತ್ತು ರಾಜಿ ಮಾಡಿಕೊಳ್ಳಲು ಮುಂದಾಗುತ್ತಾರೆ. ಇದರಿಂದ ಪೋಕ್ಸೋ ಕಾಯ್ದೆ ಬಗ್ಗೆ ಭಯ ಇಲ್ಲದಂತಾಗಿದ್ದು, ಇಂಥ ಪ್ರಕರಣಗಳು ಹೆಚ್ಚಾಗಲು ಕಾರಣ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ.

ಕೆಲ ಪ್ರಕರಣಗಳಲ್ಲಿ ಆರೋಪಿಯು ಕುಟುಂಬದ ಸದಸ್ಯನೇ ಆಗಿರುತ್ತಾನೆ. ಅಂಥ ಸಂದರ್ಭಗಳಲ್ಲಿ ಕುಟುಂಬದ ಒತ್ತಡದಿಂದಾಗಿ ಪೋಷಕರು ಪ್ರಕರಣದಿಂದ ಹಿಂದೆ ಸರಿಯುತ್ತಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳುತ್ತಾರೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಯಲು 2012ರಲ್ಲಿ ಪೋಕ್ಸೋ ಕಾಯ್ದೆ ಜಾರಿ ಮಾಡಲಾಗಿದೆ. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದರೆ 20 ವರ್ಷದಿಂದ ಜೀವಾವಧಿ ಶಿಕ್ಷೆ ಮತ್ತು ದಂಡಕ್ಕೆ ಈ ಕಾಯ್ದೆಯಡಿ ಅವಕಾಶವಿದೆ.

ಜೈಲುಗಳಲ್ಲಿ ವಿಚಾರಣಾಧೀನ ಕೈದಿಗಳಲ್ಲಿ ಹೆಚ್ಚಿನವರು ಪೋಕ್ಸೋ ಕಾಯ್ದೆ ಪ್ರಕರಣದ ಆರೋಪ ಎದುರಿಸುತ್ತಿರುವವರೇ ಆಗಿದ್ದಾರೆ. ಕೋಲಾರ ಜಿಲ್ಲಾ ಕಾರಾಗೃಹದಲ್ಲಿ 165 ವಿಚಾರಣಾಧೀನ ಕೈದಿಗಳಿದ್ದು, ಶೇ 70ರಷ್ಟು ಮಂದಿ ಪೋಕ್ಸೋ ಪ್ರಕರಣದಲ್ಲಿ ಸಿಲುಕಿರುವವರೇ ಇದ್ದಾರೆ. ಅವರಲ್ಲಿ ಯುವಕರೇ ಹೆಚ್ಚಿದ್ದಾರೆ. ಕುರುಡು ಪ್ರೇಮಕ್ಕೆ ಸಿಲುಕಿ ದಾರಿ ತಪ್ಪುತ್ತಿದ್ದಾರೆ. ಅಪರಾಧ ಸಾಬೀತಾದರೆ ಕಠಿಣ ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂಬ ವಿಚಾರ ಗೊತ್ತಿದ್ದರೂ ಇಂಥ ಕೃತ್ಯ ಎಸಗುತ್ತಿದ್ದಾರೆ.

## ಮೈಸೂರಿನ ಬೊಮ್ಮೇನಹಳ್ಳಿ ಬಳಿ 2,113 ಎಕರೆಯಲ್ಲಿ ಮೆಗಾ ಟೌನ್‌ಶಿಪ್

● ಬೊಮ್ಮೇನಹಳ್ಳಿ ಸಮೀಪ 2,113 ಎಕರೆ ಪ್ರದೇಶದಲ್ಲಿ ಬೃಹತ್ ಟೌನ್‌ಶಿಪ್ ವಸತಿ ಯೋಜನೆ ಅನುಷ್ಠಾನಕ್ಕೆ ಮುಂದಾಗಿದೆ ಎಂಡಿಎ

• ಉದಯವಾಹಿನಿ, ಮೈಸೂರು

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಬೊಮ್ಮೇನಹಳ್ಳಿ ಸಮೀಪ ಇಲವಾಲ ಹೋಬಳಿಯಲ್ಲಿ ಸುಮಾರು 2,113 ಎಕರೆ ಪ್ರದೇಶದಲ್ಲಿ ಬೃಹತ್ ಟೌನ್‌ಶಿಪ್ ವಸತಿ ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಂಡಿದೆ. ಈ ಸಂಬಂಧ ಡಿಸೆಂಬರ್ 30ರಂದು ಅಧಿಕೃತ ಆದೇಶ ಹೊರಡಿಸಲಾಗಿದ್ದು, ಅದರಂತೆ ಎಂಡಿಎ ರೈತರೊಂದಿಗೆ ಮಾತುಕತೆಗೆ ಮುಂದಾಗಿದೆ.

ಯೋಜನೆಯು ರೈತರ ಸಹಭಾಗಿತ್ವದ 50:50 ಮಾದರಿಯಲ್ಲಿ ನಡೆಯಲಿದ್ದು, ತಮ್ಮ ಭೂಮಿಯನ್ನು ಬಿಟ್ಟುಕೊಡುವ ಭೂ ಮಾಲೀಕರಿಗೆ ಹಣಕಾಸಿನ ಹೂಡಿಕೆ ಇಲ್ಲದೆಯೇ ಅಭಿವೃದ್ಧಿಪಡಿಸಿದ ಸೈಟ್‌ಗಳಲ್ಲಿ ಶೇ. 50ರಷ್ಟು ನೀಡಲಾಗುವುದು. ಟೌನ್‌ಶಿಪ್‌ನಲ್ಲಿ ಅಗಲವಾದ ರಸ್ತೆಗಳು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕ, ಭೂಗತ ಒಳಚರಂಡಿ, ನೀರು ಸರಬರಾಜು, ಬೀದಿ ದೀಪಗಳು, ಸಮುದಾಯ ಭವನಗಳು, ಬಸ್ ನಿಲ್ದಾಣಗಳು, ಶಾಪಿಂಗ್ ಮಾಲ್‌ಗಳು, ಉದ್ಯಾನಗಳು ಮತ್ತು ನಾಗರಿಕ ಸೌಕರ್ಯಗಳೊಂದಿಗೆ ಅಭಿವೃದ್ಧಿ ಮಾಡಲಾಗುವುದು.

ಎರಡು ಸಾವಿರ ಎಕರೆ ಭೂಮಿ ದೊರೆತಲ್ಲಿ ಅಂದಾಜು 15ರಿಂದ 20 ಸಾವಿರ ನಿವೇಶನಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಿದೆ. ಸುಮಾರು 25ರಿಂದ 30 ವರ್ಷಗಳಿಂದಲೂ ಕಾಯುತ್ತಿರುವ ನಿವೇಶನಾಕಾಂಕ್ಷಿಗಳಿಗೆ ನಿವೇಶನ ನೀಡಲು ಸಾಧ್ಯವಾಗುತ್ತದೆ ಎಂದು ಅವರು ವಿವರಿಸಿದ್ದಾರೆ.

**20,000 ನಿವೇಶನ ಅಭಿವೃದ್ಧಿಯ ಗುರಿ**

**5 ಲಕ್ಷ ರೂ. ಮೌಲ್ಯದ ಎಂಡಿಎಂಎ ವಶ, ನಾಲ್ವರ ಬಂಧನ:** ಹೊಸ ವರ್ಷದ ಹೊತ್ತಲ್ಲೇ ಮೈಸೂರಿನಲ್ಲಿ ಸುಮಾರು ಐದು ಲಕ್ಷ ರೂ. ಮೌಲ್ಯದ ಎಂಡಿಎಂಎ ವಶಪಡಿಸಿಕೊಂಡು ನಾಲ್ವರನ್ನು ಬಂಧಿಸಲಾಗಿದೆ. ಆಲನಹಳ್ಳಿ ಠಾಣೆ ಹಾಗೂ ಸಿಸಿಬಿ ಪೊಲೀಸರ ಜಂಟಿ ಕಾರ್ಯಾಚರಣೆಯಲ್ಲಿ ರಾಜೀವ್‌ನಗರದ ನಯಾಜ್ ಪಾಷಾ (29), ವೆಂಕಟೇಶ್ವರ ಬಡಾವಣೆಯ ನವೀನ್ ಕುಮಾರ್ (36), ಉದಯಗಿರಿಯ ಫರೀದ್ ಪಾಷಾ (25), ಶಾಂತಿನಗರದ ತೌಹಿದ್ ಪಾಷಾ (31)ನನ್ನು ಬಂಧಿಸಿ, 77 ಗ್ರಾಂ 69 ಮಿಲಿ ಎಂಡಿಎಂಎ ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ.

ಆಲನಹಳ್ಳಿ ಪೊಲೀಸ್ ಇನ್‌ಸ್ಪೆಕ್ಟರ್ ಜಿ.ಎಸ್. ಸ್ವರ್ಣ, ಸಬ್‌ಇನ್ಸ್‌ಪೆಕ್ಟರ್ ರಮೇಶ್, ಅಪರಾಧ ವಿಭಾಗದ ಸಿಬ್ಬಂದಿಯನ್ನು ಒಳಗೊಂಡ ತಂಡ ಕಾರ್ಯಾಚರಣೆ ನಡೆಸಿತು. ಇವರು ವಿಶೇಷ ಗಸ್ತಿನಲ್ಲಿದ್ದಾಗ ಸಂಜೆ 5ರ ವೇಳೆಯಲ್ಲಿ ಕಾವೇರಿ ಎನ್‌ಕ್ಲೇವ್ ಲೇಔಟ್ ಮುಖ್ಯರಸ್ತೆ ಪಕ್ಕದ ಖಾಲಿ ಜಾಗದಲ್ಲಿ ಬಿಳಿಬಣ್ಣದ ಕಾರು ನಿಂತಿದ್ದನ್ನು ಗಮನಿಸಿ ಅದರ ಬಳಿ ತೆರಳಿದ್ದಾರೆ. ಅಷ್ಟರಲ್ಲಿ ಅಲ್ಲಿದ್ದ ಕಾರು ಚಲಿಸಲಾರಂಭಿಸಿದಾಗ ಪೊಲೀಸರು ಅಡ್ಡಗಟ್ಟಿ ನಿಲ್ಲಿಸಿದ್ದಾರೆ. ಈ ವೇಳೆ ಕಾರಿನಲ್ಲಿದ್ದ ನಾಲ್ವರು ಕೆಳಗಿಳಿದು ಓಡಲಾರಂಭಿಸಿದ್ದಾರೆ. ಆದರೆ ಪೊಲೀಸರು ಅವರನ್ನು ಬೆನ್ನತ್ತಿ ಹಿಡಿದು, ಪರಿಶೀಲನೆ ನಡೆಸಿದಾಗ ಕಾರಿನ ಡ್ಯಾಶ್‌ಬೋರ್ಡ್ ಹಾಗೂ ಒಬ್ಬನ ಪ್ಯಾಂಟ್‌ನಲ್ಲಿ ಎಂಡಿಎಂಎ ಪತ್ತೆಯಾಗಿದೆ. ಕಾರು, ಮಾದಕ ವಸ್ತು ಸಹಿತ ಆರೋಪಿಗಳನ್ನು ವಶಕ್ಕೆ ಪಡೆದು ಆಲನಹಳ್ಳಿ ಪೊಲೀಸ್ ಠಾಣೆಗೆ ಒಪ್ಪಿಸಲಾಗಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.



ಉದಯವಾಹಿನಿ ಚಿತ್ರ

**ನಿವೇಶನಗಳು ತಲೆ ಎತ್ತುವ ಸಾಧ್ಯತೆ**

**ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಬೊಮ್ಮೇನಹಳ್ಳಿ ಬಳಿ 2,113 ಎಕರೆ ಪ್ರದೇಶದಲ್ಲಿ ರೈತರ ಸಹಭಾಗಿತ್ವದ 50:50 ಮಾದರಿಯಲ್ಲಿ ಬೃಹತ್ ಟೌನ್‌ಶಿಪ್ ವಸತಿ ಯೋಜನೆ ಜಾರಿಗೊಳಿಸಲಿದೆ. ಈ ಯೋಜನೆಯಲ್ಲಿ ಮೂಲ ಭೂ ಮಾಲೀಕರಿಗೆ ಅಭಿವೃದ್ಧಿಪಡಿಸಿದ ಸೈಟ್‌ಗಳಲ್ಲಿ ಶೇಕಡಾ 50ರಷ್ಟು ನೀಡಲಾಗುತ್ತದೆ. ಸುಮಾರು 15–20 ಸಾವಿರ ನಿವೇಶನಗಳು ಇಲ್ಲಿ ತಲೆ ಎತ್ತುವ ಸಾಧ್ಯತೆ ಇದೆ.**

> ಅಭಿವೃದ್ಧಿಪಡಿಸಿದ ಸೈಟ್‌ಗಳಲ್ಲಿ ಅರ್ಧದಷ್ಟು ಮೂಲ ಭೂ ಮಾಲೀಕರಿಗೆ ಹಿಂದಿರುಗಿಸಲಾಗುವುದು. ನಾಗವಾಲ, ಬೊಮ್ಮೇನಹಳ್ಳಿ, ಕಮರವಳ್ಳಿ ಮತ್ತು ದೊಡ್ಡ ಮರಗೌಡನಹಳ್ಳಿ ಗ್ರಾಮಗಳ ಭೂ ಮಾಲೀಕರು ಯೋಜನೆಗೆ ಒಪ್ಪಿಗೆ ನೀಡುವಂತೆ ಮನವಿ ಮಾಡಲಾಗಿದೆ.
> –ರಕ್ಷಿತ್, ಎಂಡಿಎ ಆಯುಕ್ತ

ಅಂತರಾಳದಿಂದ..
EDITORIAL

# ಅರಣ್ಯ ಭೂಮಿ ಪರಭಾರೆ ಸಲ್ಲ; ಹೊಣೆ ಮರೆಯದಿರಲಿ ಸರ್ಕಾರ




**ಬೆಂಗಳೂರಿಗೆ ಹೊಂದಿಕೊಂಡಿರುವ ಮಾಚೋಹಳ್ಳಿಯ ಅರಣ್ಯ ಭೂಮಿಗೆ ಭಾರೀ ಬೆಲೆ ಇದೆ. ಅಲ್ಲಿಂದ ಹತ್ತು ಕಿ.ಮೀ. ದೂರದಲ್ಲಿರುವ ಕೃಷಿ ಭೂಮಿ ಎಕರೆಗೆ ರೂ.5 ಕೋಟಿಯಿಂದ ರೂ.15 ಕೋಟಿ ದರಕ್ಕೆ ಮಾರಾಟವಾಗುತ್ತಿರುವ ಮಾಹಿತಿ ಇದೆ. ಮಾಗಡಿ ರಸ್ತೆಗೆ ನೇರವಾಗಿ ಹೊಂದಿಕೊಂಡಿರುವ ಅರಣ್ಯ ಭೂಮಿಯ ಸುತ್ತಲೂ ವಸತಿ ನಿವೇಶನಗಳಿಗೆ ಸಾಕಷ್ಟು ಬೇಡಿಕೆ ಇದೆ. ನೈಸ್ ರಸ್ತೆಯ ವೃತ್ತದಿಂದ ಸುಮಾರು 1 ಕಿ.ಮೀ. ದೂರದಲ್ಲಿರುವ ಈ ಭೂಮಿಯ ಮೌಲ್ಯ ರೂ.2,500 ಕೋಟಿಗಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ. ಆದ್ದರಿಂದಲೇ ಎಲ್ಲರ ಕಣ್ಣೂ ಈ ಭೂಮಿಯ ಮೇಲೆ ಬಿದ್ದಿದೆ.**

ಜಾತಿ ಆಧಾರಿತ ಸಂಘಟನೆಗಳಿಗಲ್ಲದೆ ಸರ್ಕಾರಿ ಸಂಸ್ಥೆಗಳಿಗೂ ಬೆಂಗಳೂರಿನ ಹೊರವಲಯದಲ್ಲಿರುವ ಮಾಚೋಹಳ್ಳಿಯ 78 ಎಕರೆ ಅರಣ್ಯ ಭೂಮಿಯನ್ನು ಗುತ್ತಿಗೆ ನೀಡಿದ ರಾಜ್ಯ ಸರ್ಕಾರದ ಕ್ರಮವು ವಿವೇಚನಾರಹಿತವಾದುದು. ಅರಣ್ಯ ಭೂಮಿಯನ್ನು ಪರಭಾರೆ ಮಾಡದಂತೆ ಸುಪ್ರೀಂ ಕೋರ್ಟ್ ಸ್ಪಷ್ಟ ಸೂಚನೆ ಇದ್ದರೂ ಗುತ್ತಿಗೆ ಆದೇಶ ಹಿಂಪಡೆಯಲು ಸರ್ಕಾರ ಮೀನಮೇಷ ಎಣಿಸುತ್ತಿರುವುದನ್ನು ಗಮನಿಸಿದರೆ, ಅರಣ್ಯ ಸಂರಕ್ಷಣೆಯಲ್ಲಿ ಅದಕ್ಕೆ ಕಿಂಚಿತ್ತೂ ಕಾಳಜಿ ಇಲ್ಲ ಎಂದೇ ಭಾವಿಸಬೇಕಾಗುತ್ತದೆ. ಅರಣ್ಯ ಭೂಮಿಯ ಬಳಕೆ ಮತ್ತು ಹಂಚಿಕೆಯ ವಿಷಯದಲ್ಲಿ ಗೋದಾವರ್ಮನ್ ಪ್ರಕರಣವೂ ಸೇರಿದಂತೆ ಹಲವು ಪ್ರಕರಣಗಳ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನಗಳನ್ನು ನೀಡಿದೆ. ಅರಣ್ಯ ಭೂಮಿಯನ್ನು ಪರಭಾರೆ ಮಾಡದಂತೆ ಘಂಟಾಘೋಷವಾಗಿ ಹೇಳಿದೆ.

ಹೀಗಿದ್ದೂ, 2017ರಲ್ಲಿ ಆಗ ಅಸ್ತಿತ್ವದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರ, ಕೋರ್ಟ್ ಆದೇಶಗಳಿಗೆ ವಿರುದ್ಧವಾಗಿ ವಿವಿಧ ಜಾತಿ ಸಂಘಟನೆಗಳಿಗೆ ಅರಣ್ಯ ಭೂಮಿಯನ್ನು 30 ವರ್ಷಗಳಿಗೆ ಗುತ್ತಿಗೆ ನೀಡಿದೆ. ಹಂಚಿಕೆ ಮಾಡಲಾಗಿರುವ ಭೂಮಿಯನ್ನು ಈಗ ವಾಪಸ್ ಪಡೆಯಲು ಸರ್ಕಾರಕ್ಕೆ ಕಸಿವಿಸಿ ಆಗುತ್ತಿರುವಂತಿದೆ. ಸಮುದಾಯಗಳಿಗೆ ತಾನೇ ಹಂಚಿಕೆ ಮಾಡಿರುವ ಭೂಮಿಯನ್ನು ವಾಪಸ್ ಪಡೆದರೆ ಟೀಕೆಗೆ ಗುರಿಯಾಗಬೇಕಾಗುತ್ತದೆ ಎಂಬ ಭೀತಿ ಅದನ್ನು ಕಾಡುತ್ತಿರುವಂತಿದೆ. ಹೀಗಾಗಿ ಸಚಿವ ಸಂಪುಟದ ಮುಂದೆ ಈ ವಿಷಯ ಹಲವು ಬಾರಿ ಬಂದರೂ ನಿರ್ಣಯ ಕೈಗೊಳ್ಳದೆ ಮುಂದೂಡಲಾಗುತ್ತಿದೆ. ಅದು, ರಿಯಲ್ ಎಸ್ಟೇಟ್‌ನ ವಿಷವರ್ತುಲದ ಪಾಲಾಗುವ ಭೀತಿ ಇದೆ. ಜಾತಿ ಆಧಾರಿತ ಸಂಘಟನೆಗಳು, ಮಠ ಸೇರಿ 36 ಸಂಸ್ಥೆಗಳಿಗೆ ತಲಾ ಎರಡೂವರೆ ಎಕರೆ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹಂಚಿಕೆ ಮಾಡಿದ ಕ್ರಮವನ್ನು ಕೋರ್ಟ್‌ನಲ್ಲೂ ಪ್ರಶ್ನಿಸಲಾಗಿದೆ. ಹೀಗಾಗಿ ಹಂಚಿಕೆಯಾಗಿದ್ದ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲು ಯಾವ ಸಂಸ್ಥೆಗೂ ಸಾಧ್ಯವಾಗಿಲ್ಲ. ಈ ಭೂಮಿ, ಇನ್ನೂ ಅರಣ್ಯ ಇಲಾಖೆಯ ಸುಪರ್ದಿಯಲ್ಲಿದೆ ಎಂಬುದೊಂದೇ ಸದ್ಯದ ಸಮಾಧಾನದ ಸಂಗತಿ. ದೇಶದಲ್ಲಿ ಅರಣ್ಯ ನಾಶ ಹೆಚ್ಚುತ್ತಿದೆ ಎನ್ನುವ ಆತಂಕದ ಮಾತುಗಳು ಆಗಾಗ ಕೇಳಿಬರುತ್ತಲೇ ಇವೆ. ಅದಕ್ಕೆ ಸಮರ್ಥನೆ ಎನ್ನುವಂತೆ ಪರಿಸರದಲ್ಲಿ ಭಾರೀ ಏರುಪೇರು ಕಾಣುತ್ತಿದ್ದೇವೆ. ವಾತಾವರಣ ಬಿಸಿಯಾಗುತ್ತಿದೆ, ಮಳೆ ಋತುಗಳಲ್ಲೂ ವ್ಯತ್ಯಾಸಗಳಾಗುತ್ತಿವೆ.

ಇದ್ದ ಅರಣ್ಯವನ್ನು ಸಂರಕ್ಷಿಸಿಕೊಳ್ಳುವುದರ ಜತೆಗೆ ಮರ ಬೆಳೆಸುವುದಕ್ಕೆ, ಅರಣ್ಯಕರಣಕ್ಕೆ ಒತ್ತು ನೀಡುವ ಗುರುತರ ಹೊಣೆ ಸರ್ಕಾರದ ಮೇಲಿದೆ. ಆದರೆ, ತನ್ನ ಹೊಣೆಗಾರಿಕೆಯನ್ನು ಮರೆತು ಸರ್ಕಾರವು ಈ ರೀತಿ ಅರಣ್ಯ ಭೂಮಿಯನ್ನು ಪರಭಾರೆ ಮಾಡುತ್ತಾ ಹೋದರೆ ನಾಳಿನ ಪ್ರಜೆಗಳಿಗೆ ನಾವು ಎಂತಹ ಪರಿಸರವನ್ನು ಉಳಿಸಲು ಸಾಧ್ಯ? ಆಡಳಿತದ ಹೊಣೆ ಹೊತ್ತವರು ಆತ್ಮಾವಲೋಕನ ಮಾಡಿಕೊಳ್ಳಲು ಇದು ಸಕಾಲ. ಅರಣ್ಯಗಳ ಸ್ಥಿತಿಗತಿ ವರದಿಗಳ ಪ್ರಕಾರ, ಬೆಂಗಳೂರು ಸುತ್ತಲಿನ ಅರಣ್ಯದ ಪ್ರಮಾಣ ತೀವ್ರಗತಿಯಲ್ಲಿ ಕುಗ್ಗುತ್ತಿದೆ. 'ಹಸಿರೇ ಉಸಿರು, ಅರಣ್ಯವೇ ನಮ್ಮ ಜೀವಾಳ' ಎಂಬ ಆಕರ್ಷಕ ಘೋಷಣೆಗಳಿಂದ ಅರಣ್ಯ ಉಳಿಯುವುದಿಲ್ಲ, ಬೆಳೆಯುವುದಿಲ್ಲ. ಅದಕ್ಕೆ ಸರ್ಕಾರದ ಮನೋಭಾವ ಬದಲಾಗಬೇಕು. ಅರಣ್ಯ ರಕ್ಷಕನ ಸ್ಥಾನದಲ್ಲಿರುವ ಸರ್ಕಾರವೇ ಮುಂದೆ ನಿಂತು ಭಕ್ಷಕರಿಗೆ ಅನುಕೂಲ ಮಾಡಿಕೊಡುವ ಪ್ರವೃತ್ತಿ ಕೊನೆ ಆಗಬೇಕು. ಇರುವ ಅರಣ್ಯವನ್ನು ಜೋಪಾನವಾಗಿ ಉಳಿಸುವುದು ಮತ್ತಷ್ಟು ಬೆಳೆಸುವುದು ಎಲ್ಲರ ಸಾಮಾಜಿಕ ಹೊಣೆಗಾರಿಕೆಯೂ, ನಿರ್ವಹಿಸಲೇಬೇಕಾದ ನಾಗರಿಕ ಕರ್ತವ್ಯವೂ ಆಗಬೇಕು.

# ರಾಮಾಯಣ



ವಾಲಿಯನ್ನು ವಧಿಸುತ್ತೇನೆಂದು ಶ್ರೀ ರಾಮನ ಪ್ರತಿಜ್ಞೆ

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಆ ಮಾತನ್ನು ಕೇಳಿ ಶ್ರೀರಾಮನು ಸುಗ್ರೀವ, ನಿಮ್ಮಿಬ್ಬರಿಗೂ ಇಂಥ ವೈರವು ಬರಲು ನಿನಗೆ ಕಾರಣವೇನು ಕಾರಣವನ್ನು ನಾನು ತಿಳಿದು ಮುಂದಿನ ಕರ್ತವ್ಯವನ್ನು ನಿಶ್ಚಯಿಸುತ್ತೇನೆ. ವಾಲಿಯು ಮಾಡಿದ ಅವಮಾನವನ್ನು ಕೇಳಿ ನನ್ನ ಎದೆ ನಡುಗುತ್ತದೆ. ವರ್ಷಕಾಲದ ಮೇಘದಿಂದ ಜಲಪ್ರವಾಹವು ಹೆಚ್ಚಾಗುವಂತೆ ಪ್ರತಿನಿಮಿಷದಲ್ಲಿಯೂ ನನ್ನ ಕೋಪವು ಹೆಚ್ಚುತ್ತಿದೆ. ಸುಗ್ರೀವ, ನಾನು ಬಿಲ್ಲಿಗೆ ಹದೆಯನ್ನೇರಿಸುವುದಕ್ಕೆ ಮೊದಲೇ ನಿನ್ನ ವೃತ್ತಾಂತವನ್ನು ಹೇಳು. ನನ್ನ ಬಾಣಗಳನ್ನು ನೋಡಿದೆಯಲ್ಲ ಇನ್ನು ನಿನ್ನ ಶತ್ರುವಾದ ವಾಲಿಯು ಹತನಾಗುವನೆಂದು ನಂಬು ಎಂದು ನುಡಿದನು.

**ವಾಲಿಸುಗ್ರೀವರಿಗೆ ವಿರೋಧವು ಬಂದ ವೃತ್ತಾಂತ:** ನಂತರ ಸುಗ್ರೀವನು ಶ್ರೀರಾಮನಿಗೆ ತನಗೂ ವಾಲಿಗೂ ವೈರವು ಬಂದದ್ದಕ್ಕೆ ಕಾರಣವನ್ನು ವಿಸ್ತಾರವಾಗಿ ನಿರೂಪಿಸಿದನು: ಶ್ರೀರಾಮ, ನನ್ನ ಅಣ್ಣನಾದ ವಾಲಿಯು ಮಹಾಬಲವಂತನು. ಮಹಾಪರಾಕ್ರಮಿ. ಸಮಸ್ತ ಶತ್ರುಗಳನ್ನೂ ಜಯಿಸಿದವನು. ನಮ್ಮ ತಂದೆಗೆ ಬಹು ಅನುಕೂಲ ನಾದವನು. ಮೊದಲು ನನಗೂ ಅತ್ಯಂತ ಇಷ್ಟನಾಗಿದ್ದವನು. ನಮ್ಮ ತಂದೆಯು ಸ್ವರ್ಗಸ್ಥನಾದ ಮೇಲೆ ಮಂತ್ರಿಗಳೆಲ್ಲರೂ ಕೂಡಿ ವಾಲಿಯು ಜೇಷ್ಠ ಪುತ್ರನೆಂದು ಆತನಿಗೆ ಪಟ್ಟವನ್ನು ಕಟ್ಟಿ ಕಪಿರಾಜಾಧಿಪತ್ಯವನ್ನು ಕೊಟ್ಟರು. ಆತನು ಪರಂಪರಾಗತವಾಗಿ ಬಂದ ನಮ್ಮ ರಾಜ್ಯಾಧಿಪತ್ಯವನ್ನು ಪರಿಪಾಲಿಸಿಕೊಂಡಿರಲು ನಾನು ಆತನು ಹೇಳಿದಂತೆ ಕೇಳಿಕೊಂಡು ಆತನ ಸೇವಕನ ಹಾಗಿದ್ದೆನು. ಕೆಲವು ದಿವಸಗಳಾದ ಮೇಲೆ ಒಂದು ದಿನ ದುಂದುಭಿ ಎಂಬ ರಾಕ್ಷಸನ ಮಗನಾದ ಮಾಯಾವಿ ಎಂಬವನು ವಾಲಿಯೊಡನೆ ವೈರವನ್ನು ಬೆಳಸಿ ಆತನಿಗೆ ಅನೇಕ ಉಪದ್ರವಗಳನ್ನು ಮಾಡ ತೊಡಗಿದನು. ಆಗ ಒಂದು ದಿನ ಸಮಸ್ತ ಪ್ರಾಣಿಗಳೂ ಮೈಮರೆತು ನಿದ್ರೆ ಮಾಡುತ್ತಿದ್ದ ಅರ್ಧರಾತ್ರಿಯ ಸಮಯದಲ್ಲಿ ಕಿಷ್ಕಿಂಧಾಪಟ್ಟಣಕ್ಕೆ ಬಂದು ಆ ಪಟ್ಟಣದ ಬಾಗಿಲನ್ನು ಅಡ್ಡಗಟ್ಟಿ ಬೊಬ್ಬಿಟ್ಟು ಕೂಗಿ ವಾಲಿಯನ್ನು ಯುದ್ಧಕ್ಕೆ ಬರಹೇಳಿದನು. ಮಲಗಿದ್ದ ವಾಲಿಯು ಮಾಯಾವಿಯ ಭಯಂಕರವಾದ ಧ್ವನಿಯನ್ನು ಕೇಳಿ ಸಹಿಸಲಾರದೆ ಎದ್ದು ಅತ್ಯಂತ ಕೋಪಯುಕ್ತನಾಗಿ ಆ ರಾಕ್ಷಸ ನನ್ನು ಸಂಹರಿಸುವುದಕ್ಕಾಗಿ ಹೊರಟು ಬಂದನು. ನಾನು ನಮಸ್ಕಾರವನ್ನು ಮಾಡಿ ತಡೆದು ಬೇಡಿ ಕೊಂಡರೂ ಸ್ತ್ರೀಯರು ತಡೆದು ನಿಲ್ಲಿಸಿದರೂ ನಿಲ್ಲದೆ ನಮ್ಮನ್ನು ನೂಕಿಬಿಟ್ಟು ಕೋಪಾಟೋಪದಿಂದ ಅತಿವೇಗವಾಗಿ ಹೋಗುತ್ತಿದ್ದನು. ಹಿರಿಯಣ್ಣನೆಂಬ ವ್ಯಾಮೋಹದಿಂದ ನಾನು ಆತನ ಹಿಂದೆ ಹೋದೆನು, ಮಾಯಾವಿಯು ವಾಲಿಯನ್ನೂ ನನ್ನನ್ನೂ ನೋಡಿ ಅತಿಭಯದಿಂದ ಕಂಗೆಟ್ಟು ಓಡುತ್ತಿರಲು ನಾವಿಬ್ಬರೂ ಕಾಡುಮೇಡೆನ್ನದೆ ಅವನನ್ನು ಹಿಂದಟ್ಟಿಕೊಂಡು ಹೋದೆವು. ನಾವು ಹೋದ ಮಾರ್ಗವು ಚಂದ್ರನಿಂದ ಪ್ರಕಾಶಮಾನವಾಗಲು ಮಾಯಾವಿಯು ಅತಿ ವೇಗದಿಂದ ಒಂದು ಅತ್ಯಂತ ಘೋರಾರಣ್ಯವನ್ನು ಹೊಕ್ಕು ಅಲ್ಲಿದ್ದ ಗುಹೆಯೊಂದನ್ನು ಪ್ರವೇಶಿಸಿದನು. ವಾಲಿಯು ಆ ಗುಹೆಯನ್ನು ನೋಡಿ ಅತ್ಯಂತ ಕೋಪಕೆರಳಿ ನನ್ನನ್ನು ಕುರಿತು ಎಲೈ ಸುಗ್ರೀವ, ನೀನು ಈ ಗುಹೆಯ ಬಾಗಿಲನ್ನು ಕಾದುಕೊಂಡು ಜತನವಾಗಿರು ನಾನು ಗುಹೆಯ ಒಳ ಹೊಕ್ಕು ನನ್ನ ಶತ್ರುವಾದ ಮಾಯಾವಿಯನ್ನು ಕೊಂದು ಬರುತ್ತೇನೆ.

**ಮುಂದುವರಿಯುವುದು...**

# ಅಧಿಕಾರಿ, ನೌಕರರಿಗೆ ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ಪ್ರಧಾನ

## ಸಾರ್ವಜನಿಕರು ಎಲ್ಲೆಂದರಲ್ಲಿ ಕಸ ಹಾಕಬೇಡಿ, ಕಸ ಹಾಕಿದವರ ಕೈಯಲ್ಲಿ ಕಸ ತೆಗೆಸಿದಾಗ ಕಷ್ಟ ಗೊತ್ತಾಗುತ್ತದೆ: ಹಿರಿಯ ನಟಿ ಲಕ್ಷ್ಮೀ

• **ಉದಯವಾಹಿನಿ, ಬೆಂಗಳೂರು**

ಪುಟ್ಟಣ್ಣ ಚೆಟ್ಟಿ ಪುರಭವನ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಸಹಕಾರ ಸಂಘ ನಿಯಮಿತ 112ಸಂಸ್ಥಾಪನಾ ದಿನಾಚರಣೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ, ಜಿಬಿಎ ಅಧಿಕಾರಿ, ನೌಕರರಿಗೆ ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ಪ್ರಧಾನ ಸಮಾರಂಭ.

ಹಿರಿಯ ನಟಿಯರುಗಳಾದ ಶ್ರೀಮತಿ ಲಕ್ಷ್ಮಿ, ಶ್ರೀಮತಿ ವಿನಯಪ್ರಸಾದ್, ಸಹಾಯಕ ಆಯುಕ್ತರಾದ ಗಿರೀಶ್ ರವರು, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸಿ.ಎಸ್.ಷಡಕ್ಷರಿ, ಅಧ್ಯಕ್ಷರಾದ ಎ.ಅಮೃತ್ ರಾಜ್‌ರವರು, ಉಪಾಧ್ಯಕ್ಷರಾದ ಕೆ.ಜಿ.ರವಿರವರು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಟಿ ಶ್ರೀಮತಿ ಲಕ್ಷ್ಮೀರವರು ಮಾತನಾಡಿ ನಾನು ಅದೃಷ್ಣವಂತೆ, ನಿಮ್ಮನ್ನ ನೋಡಲು ಬಂದ್ದಿದೇನೆ. ನೀವು ನನ್ನನ ಟಿ.ವಿ.ಯಲ್ಲಿ ಪ್ರತಿದಿನ ನೋಡುತ್ತಿರ. ಯಾವತ್ತು ಜೀವನದಲ್ಲಿ ಒತ್ತಡದ ಜೀವನ ಮಾಡಬೇಡಿ. ಯಾರಿಂದ ಸಮಾಜ ಕೆಟ್ಟಿದೆ ಎಂದರೆ ಅದಕ್ಕೆ ಕಾರಣಕರ್ತರು ಯಾರು.

ಎಲ್ಲರು ಅಮೂಲ್ಯ ಇರುವುದರಲ್ಲಿ ಜೀವನ ಸಾಗಿಸಬೇಕು. ಶರೀರ ಮಾತ್ರ ನಮ್ಮ ಜೊತೆಯಲ್ಲಿ ಮಾತ್ರ ಇರುತ್ತದೆ. ಉತ್ತಮ ಆಹಾರ ಪದಾರ್ಥಗಳನ್ನು ಸೇವನೆ ಮಾಡಿ. ಸೌಂದರ್ಯ ಮುಖ್ಯವಲ್ಲ, ಮನಸ್ಸು ಸುಂದರವಾಗಿರಬೇಕು. ಇನ್ನೊಬ್ಬರಗೋಸ್ಕರ ನಾವು ಜೀವನ ಮಾಡಬಾರದು. ಪ್ರತಿಯೊಂದು ಮಕ್ಕಳಿಗೆ ತಾಯಿ ರಕ್ತ ಕುಡಿಸಿ ಬೆಳಸಿದ್ದಾಳೆ, ಧೈರ್ಯವಾಗಿ ಬದುಕು ಸಾಗಿಸಿ.

ಜೀವನದಲ್ಲಿ ನಗು ಎಂಬುದು ತಿಳಿದಿರುವುದು ಮನುಷ್ಯರಿಗೆ ಮಾತ್ರ, ಜನರು ನಗುವುದನ್ನ ಮರೆತ್ತಿದ್ದಾರೆ. ಪ್ರಕೃತಿ ದೇವರು ಎಂಬುದು ಮರೆತ್ತಿದ್ದಾರೆ.ನಗರದಲ್ಲಿ ಸಾರ್ವಜನಿಕರು ಎಲ್ಲೆಂದರಲ್ಲಿ ಕಸ ಹಾಕುತ್ತಾರೆ, ಹೇಳಿದರೆ ಎತ್ತಿಕೊಂಡು ಹೋಗುತ್ತಾರೆ ಎಂದು ಉಡಾಫೆ ಮಾತಾಡುತ್ತಾರೆ. ಕಸ ಬಿಸಾಡುವವರ ಕೈಯಲ್ಲಿ ಕಸ ಎತ್ತುವ ಕೆಲಸ ಮಾಡಿಸಬೇಕು ಆಗ ಅದರ ನೋವು ಕಷ್ಟ ತಿಳಿಯುತ್ತದೆ, ಪೌರ ಕಾರ್ಮಿಕರು ಎಷ್ಟು ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಎಲ್ಲರು ನಿಸ್ವಾರ್ಥದಿಂದ, ಶುದ್ಧ ಮನಸ್ಸಿನಿಂದ ಬಾಳಿ ಎಂದು ಹೇಳಿದರು. ಎ.ಅಮೃತ್ ರಾಜ್‌ರವರು ಮಾತನಾಡಿ ನಮ್ಮ ಸಹಕಾರ ಸಂಘವು 112ವರ್ಷ ಶತಮಾನ ಇತಿಹಾಸವಿರುವ ಸಂಘವಾಗಿದೆ.



ಉದಯವಾಹಿನಿ ಚಿತ್ರ

ಒಬ್ಬರಿಂದ, ಇನ್ನೊಬ್ಬರಿಗೆ ಸಹಕಾರ ನೀಡುವ ತತ್ವದ ಆಧಾರದ ಮೇಲೆ ನಮ್ಮ ಸಹಕಾರ ಸಂಘವು ಅಧಿಕಾರಿ, ನೌಕರರ ಏಳಿಗೆಗಾಗಿ ಶ್ರಮಿಸುತ್ತಿದೆ. ಕರ್ನಾಟಕದಲ್ಲಿ ಮೊದಲ ಬಾರಿಗೆ ಸಾಲು ಮರದ ತಿಮ್ಮಕ್ಕರವರ ಸವಿಸ್ಮರಣೆಯಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದೆ.

ಸಿ.ಎಸ್.ಷಡಕ್ಷರಿರವರು ಮಾತನಾಡಿ ನೌಕರರಿಗೆ ಆರ್ಥಿಕ ಸಹಕಾರ ನೀಡಲು ಸಹಕಾರ ಸಂಘ, ಶತಮಾನದ ಇತಿಹಾಸವಿದೆ. ನೂರು ಹನ್ನೇರಡು ವರ್ಷ ಪೂರೈಸಿರುವ ಸಂಘಕ್ಕೆ ಹಲವಾರು ಮಹನೀಯರುಗಳು ಕೊಡುಗೆ ನೀಡಿದ್ದಾರೆ.

> ಸಹಕಾರ ಸಂಘವು ನೌಕರರ ಸಂಕಷ್ಟ ಸಮಯದಲ್ಲಿ ನೆರವು ನೀಡುತ್ತಿದೆ. ಉಳಿಸಿ, ಬೆಳಸಿಕೊಂಡು ಹೋಗುವುದು ಬಹಳ ಕಷ್ಟ ಅದರು ನಮ್ಮ ಸಹಕಾರ ಸಂಘ 112ವರ್ಷ ದಾಟಿದೆ ಎಂದರೆ ಸಂತೋಷಕರವಾದ ವಿಷಯವಾಗಿದೆ. ಪಾಲಿಕೆಯ ಅಧಿಕಾರಿ, ನೌಕರರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಹ ನೀಡುವುದರಿಂದ ರಾಷ್ಟ್ರಕ್ಕೆ ಉತ್ತಮ ಸೇವೆ ವ್ಯಕ್ತಿಗಳಾಗಿ ರೂಪಗೊಳ್ಳುತ್ತಾರೆ.
> -ಗಿರೀಶ್,
> ಸಹಾಯಕ ಆಯುಕ್ತ

ನೌಕರರಿಗೆ ಹಲವಾರು ಸಮಸ್ಯೆಗಳು ಬರುತ್ತದೆ ಅದರೆ ಅವರ ಪರವಾಗಿ ಯಾವುದೇ ಮುಲಾಜಿಲ್ಲದೇ ಹೋರಾಟ ಮಾಡುತ್ತೇವೆ. ನೌಕರರು ನಮ್ಮ ಕುಟುಂಬದವರಂತೆ. 7ನೇ ವೇತನ ಆಯೋಗ ಜಾರಿಗೆ ಬರಲು ಜಿಬಿಎ -ಪಾಲಿಕೆಗಳ ಅಧಿಕಾರಿ, ನೌಕರರ ಸಹಕಾರ ನೀಡಿದರು.

ನಟಿ ವಿನಯ ಪ್ರಸಾದರವರು ಮಾತನಾಡಿ ಶಿಕ್ಷಣ, ಕಲೆ, ಚಲನಚಿತ್ರ ಎಲ್ಲಾ ರಂಗಗಳಲ್ಲಿ ಪ್ರೋತ್ಸಾಹ, ಸಹಕಾರ ನೀಡಿದಾಗ ಚಿಕ್ಕ ಮೊಳಕೆ, ದೊಡ್ಡ ಮರವಾಗಿ ಬೆಳಯುತ್ತದೆ.

ಪ್ರತಿಭಾವಂತ ಮಕ್ಕಳಿಗೆ ಉನ್ನತ ವ್ಯಾಸಂಗಕ್ಕೆ ಪ್ರೋತ್ಸಾಹ ನೀಡಬೇಕು , ಶಿಕ್ಷಣ ಕ್ಷೇತ್ರದಲ್ಲಿ ಅವರ ಸಾಧನೆ ರಾಜ್ಯ, ರಾಷ್ಟ್ರಕ್ಕೆ ಸದುಪಯೋಗವಾಗಲಿದೆ.

ಸಾಲು ಮರದ ತಿಮ್ಮಕ್ಕ ಪ್ರಶಸ್ತಿಯನ್ನು ಮುಖ್ಯ ಆರೋಗ್ಯಧಿಕಾರಿ ಡಾ||ನಿರ್ಮಲ ಬುಗ್ಗಿ, ಆರೋಗ್ಯಧಿಕಾರಿ ಡಾ||ಎ. ಎಸ್.ಬಾಲಸುಂದರ್, ಜಂಟಿ ಆಯುಕ್ತ ಕಂದಾಯ ಶ್ರೀಮತಿ ಲಕ್ಷ್ಮಿದೇವಿ ಆರ್, ಮುಖ್ಯ ಅಭಿಯಂತರಾದ ಬಸವರಾಜ್ ಎಸ್.ಕಬಾಡೆ, ಉಪ ಕಾನೂನು ಸಲಹೆಗಾರರಾದ ಮುನಿರಾಜು. ಎಂ.,ಸಹಾಯಕ ಕಾರ್ಯಪಾಲಕ ಅಭಿಯಂತರಾದ ಹೆಚ್.ಕೆ.ತಿಪ್ಪೇಶ್, ಸಹ ಕಂದಾಯ ಅಧಿಕಾರಿ ಎನ್.ಕೃಷ್ಣ, ವಿಷಯ ಪರಿವೀಕ್ಷಕರಾದ ಕುಮಾರ್, ಕಂದಾಯ ಪರಿವೀಕ್ಷಕರಾದ ಎಸ್.ಆರ್ಮುಗಂ, ಚಾಲಕರಾದ ಸಂಪತ್ ಕುಮಾರ್ ರವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಶ್ರೀ. ಸುಭಾಷ್ ಹೇಮಣ್ಣಾ ಚವ್ಹಾಣ,
ಸುಹೇಚ ಪರಮವಾಡಿ



## ನವ ವರುಷದ ಗಾನ ಹೊಸತನ ತರಲಿ ನವ ವರುಷ

ಹೊ ಳೆದು ಉದಯ ಚಂದ
ಹೊ ಸೆದು ಹೃದಯ ಬಂಧ
ಹೊ ಮ್ಮಲಿ ನವ ಹರುಷ
ಹೊ ಸತನ ತರಲಿ ವರುಷ
ಹೊ ಸತ್ತೊಸತು ಸುರಭಿಸಲಿ
ನವ ವರುಷ

ಸ ರಳತೆ ಅರಳಿ
ಸ ಕಲರಿಗೂ ಲೇಸಾಗಲಿ
ಸ ಮನ್ವಯತೆ ಮರಳಿ
ಸ ರ್ವೋದಯವಾಗಲಿ
ಸ ಮರಸ ಉಕ್ಕಿಸಲಿ
ನವ ವರುಷ

ತ ರುಲತೆಯೊಡಲು ಚಿಗುರೊಡೆದು
ತ ಮರೂಪವಳಿದು
ತ ಮಲೋಕ ಕಳೆದು
ತ ಮಗಿರುವ ಅಂಧವಳಿದು
ತ ಳಪಾಯ ಹಾಕಲಿ
ನವ ವರುಷ

ನ ವನವೀನ ನುಡಿಯೊಲಿದು
ನ ವೋದಯದ ಕುಡಿಯೊಡೆದು
ನ ರಕ ತೊಲಗಲಿ
ನ ರಳುವೆದೆಯಲಿ
ನ ಲಿವು ಮೂಡಿಸಲಿ
ನವ ವರುಷ

ತ ಲ್ಲಣವಡಗಿ
ತ ನುಮನ ತಣಿಯಲಿ
ತ ಕ್ಷಣ ಭವನೀಗಿ
ತ ಹಬಂದಿಗೆ ಬಾಳುಲಿಯಲಿ
ತ ರತರ ವೇದನೆ ನೀಗಲಿ
ನವ ವರುಷ

ರ ವಿ ತಾಪಕೆ ವರುಣ ಸುರಿದು
ರ ವಿ ಕಿರಣ ಬೀರುವಲಿ ರ ಮಣಿ ಇಳೆಗರ್ಭ
ಫಸಲೊಡೆದು ರ ಸಫಲಗಳನಿಯಲಿ
ಜೀವ ಸಂಕುಲಕೆ ರ ಕ್ಷೆಯ ಅಭಯ ತರಲಿ
ನವ ವರುಷ

ಲಿ ಖಿತವೆಮಗೆ ದೈವಾನುಗ್ರಹವು
ಲಿ ಪಿಕಾರನಾ ದೇವ ಸಲಹುವನು
ಲಿ ಪಿ ಅಳಿಯದಿದು ಸತ್ಯವೇದವು
ಲಿ ಲಾವ್ರೈಯದಿರು ನಿತ್ಯವೇದವನು
ಲಿ ಲಿ ಹೂವಿನಂತೆ ಸತ್ವದುಂಬಿಸು
ನವ ವರುಷ

# ನಿರಂತರಂ - ಸಂಗೀತ ಮತ್ತು ನೃತ್ಯೋತ್ಸವದ ಶುಭಾರಂಭ - ಯಶಶ್ವಿ ಕಾರ್ಯಕ್ರಮ



ಹೊಸವರ್ಷದ ಹೊಸ್ತಿಲಲ್ಲಿ, ನಾದ-ನೃತ್ಯಗಳ ವೈವಿಧ್ಯಪೂರ್ಣ ಸುಮನೋಹರ ಕಾರ್ಯಕ್ರಮಗಳಿಂದ 'ನಿರಂತರಂ' ಸಂಗೀತ- ನೃತ್ಯ ಸಂಸ್ಥೆಯ 'ಸಂಗೀತ ಸಂಭ್ರಮ'ದ ವರ್ಣರಂಜಿತ ಕಾರ್ಯಕ್ರಮಗಳು ಜನವರಿ 1 ನೇ ತಾ ನಿಂದ ಆರಂಭವಾಯಿತು. ಪ್ರತಿವರ್ಷವೂ ತಪ್ಪದೆ ನಡೆಯುವ 'ಸಂಗೀತ ಸಂಭ್ರಮ' ಸಂಸ್ಥೆಯ ನೇತೃತ್ವ ವಹಿಸಿರುವವರು ಪ್ರಖ್ಯಾತ ಸಂಗೀತ ವಿದುಷಿ ಡಾ. ಪುಸ್ತಕಂ ರಮಾ. ಈ ಸಂಸ್ಥೆಯು ಸಾರ್ಥಕ ಮೂರುದಶಕಗಳನ್ನು ಕ್ರಮಿಸಿದ್ದು, ಕಳೆದ ಹದಿನೈದು ವರ್ಷಗಳಿಂದ, ಹಿರಿಯ ಹಾಗೂ ಉದಯೋನ್ಮುಖ ಕಲಾವಿದರಿಗೆ ನಿರಂತರವಾಗಿ ವೇದಿಕೆಯನ್ನು ಒದಗಿಸುತ್ತ ಬಂದಿದೆ. ಅದರಂತೆ ನಗರದ ಸೇವಾಸದನದಲ್ಲಿ ಪ್ರಾರಂಭವಾದ ಕಾರ್ಯಕ್ರಮದ ಉದ್ಘಾಟನೆಯನ್ನು - ಶ್ರೀ ಚಿರಂಜೀವಿ ಸಿಂಗ್ ಐ.ಎ.ಎಸ್. ಇವರು ದೀಪ ಬೆಳಗಿಸಿ ನೆರವೇರಿಸಿದರು. ಪ್ರಾರಂಭಕ್ಕೆ ಸಂಗೀತ ಸಂಭ್ರಮದ ಕಲಾವಿದರಿಂದ ಸಮೂಹ ಗೀತೆಗಳು, ರಾಜ್ಯ ಶ್ರೀ ಜೋಸ್ಯರ್ ಶ್ರೀಕಾಂತ್ ಕರ್ನಾಟಕ ಸಂಗೀತ ನಡೆಯಿತು. ಅನಂತರ ಅಮೆರಿಕೆಯ ಕು. ಶ್ರೇಯಾ ಶ್ರೀರಾಮ್ ಅವರಿಂದ ಮನಮೋಹಕ ಭರತನಾಟ್ಯ ಕಾರ್ಯಕ್ರಮ ಕಣ್ಮನ ತುಂಬಿತು. ಭಾರೀ ಕರತಾಡನ ಪಡೆದ ಇನ್ನೊಂದು ಕಾರ್ಯಕ್ರಮವೆಂದರೆ, ಜನಪ್ರಿಯ ಸಿನಿಮಾ ಗೀತೆಗಳಿಗೆ ಕರೋಕೆಯೊಂದಿಗೆ ಧ್ವನಿ ಗೂಡಿಸಿದ ಗಾಯಕರಾದ ವಿ. ದೀಪ್ತಿ ಶ್ರೀನಾಥ್, ಕು. ಸಾಕ್ಷಿ ಜಗನ್ನಾಥ್ ಮತ್ತು ವಿ. ಭಾರ್ಗವ್ ಹೆಚ್.ಸಿ. ಅವರ ಸುಮಧುರ ಗಾಯನ ಲವಲವಿಕೆಯ ಉತ್ಸಾಹವನ್ನು ಸಿಂಚನಗೊಳಿಸಿತು. ನಂತರ- ಮೈಸೂರಿನ ಡಾ. ಕೃಪಾ ಫಡ್ಕೆ ಮತ್ತು ತಂಡದವರಿಂದ ದಿವಾಕರ ಹೆಗಡೆ ವಿರಚಿತ 'ಗೀತಾಮೃತಧುಹೆ ನಮಃ' ಎಂಬ ಕಣ್ಮನ ಸೂರೆಗೊಂಡ ಹೃದಯಸ್ಪರ್ಶಿ ನೃತ್ಯ ನಾಟಕ, ಸೊಗಸಾದ ನೃತ್ಯ ಸಂಯೋಜನೆ, ನರ್ತಕಿಯರ ನುರಿತ ಅಭಿನಯ, ಮನಮೋಹಕ ಆಂಗಿಕಾಭಿನಯ, ಮನೋಜ್ಞ ನರ್ತನ, ರಮ್ಯ ದೃಶ್ಯ ಚಿತ್ರಣಗಳಿಂದ ಅನನ್ಯವೆನಿಸಿತು. ಡಾ. ಕೃಪಾ ಅವರು ಅರ್ಜುನನಾಗಿ ಅಭಿನಯಿಸಿ ತಮ್ಮ ಪ್ರಬುದ್ಧ ಅಭಿನಯದಿಂದ ಮನಸೂರೆಗೊಂಡರು. ಕೃಷ್ಣನು ಉಪದೇಶ ನೀಡುವ ಸಂದರ್ಭದಲ್ಲಿ, ಅರ್ಜುನನ ಮನವನ್ನು ಒಲಿಸಲು, ಯುದ್ಧ ಮಾಡಲು ಪ್ರೇರೇಪಿಸಲು ಪೂರಕವಾಗಿ ಹೆಣೆದ ರಾಮಾಯಣ- ಮಹಾಭಾರತದ ವಿವಿಧ ಸಂಚಾರಿ ಕಥಾನಕಗಳು ಹಿನ್ನಲೆಯಲ್ಲಿ ನಡೆಯುತ್ತಾ ಸಾಗಿದ ತಂತ್ರ, ಕಲಾತ್ಮಕ- ಅದ್ಭುತ ದೃಶ್ಯಾವಳಿಗಳು ಪರಿಣಾಮಕಾರಿಯಾಗಿದ್ದವು. 'ನಿರಂತರಂ' ಆಯೋಜಿಸಿದ್ದ ಮೊದಲ ದಿನದಸಂಗೀತ- ನೃತ್ಯೋತ್ಸವದ ಕಾರ್ಯಕ್ರಮ ಕಲಾರಸಿಕರನ್ನು ಆಕರ್ಷಿಸುವಲ್ಲಿ ಅತ್ಯಂತ ಯಶಸ್ವಿಯಾಯಿತು.



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

# ಅಕ್ಷರದವ್ವ ಸಾವಿತ್ರಿಬಾಯಿ



**ಬಿ.ವಿ.ಹಿರೇಮಠ**

ಬೆಳಗಿತು ಜ್ಯೋತಿ ಮಹಾರಾಷ್ಟ್ರದ ಮಣ್ಣಲಿ ಜಾತಿ ಭೇದದ ಕತ್ತಲೆ ಸೀಳುವ ಹಾದಿಯಲಿ ಸಾವಿತ್ರಿ ಎಂಬ ಹೆಸರೇ ಒಂದು ಚೈತನ್ಯ ನೀ ತಂದೆ ಹೆಣ್ಣುಕುಲದ ಬದುಕಿಗೆ ಲಾವಣ್ಯ ...

ಅಕ್ಷರ ಕಲಿಯದ ಕಾಲದಿ ಅಕ್ಷರ ಕಲಿತವಳು ನಿಂದನೆಗಳ ಸುರಿಮಳೆಯಲಿ ಎದೆಯೊಡ್ಡಿ ನಿಂತವಳು ಹೆಗಲ ಮೇಲಿನ ಸೀರೆಯಲ್ಲಿ ಕಲೆಗಳಿರಬಹುದು ಆದರೆ ನಿನ್ನ ಕನಸಿನಲ್ಲಿ ಕೋಟಿ ಸೂರ್ಯರ ಬೆಳಕಿತ್ತು ...

ಪತಿ ಜ್ಯೋತಿಬಾರ ಹೆಗಲಿಗೆ ಹೆಗಲಾಗಿ ನಿಂತು ಕ್ರಾಂತಿಯ ಕಿಡಿಯನ್ನು ಹಳ್ಳಿ ಹಳ್ಳಿಗೆ ಹಚ್ಚಿ ಶೋಷಿತರ ದನಿಯಾಗಿ, ಜ್ಞಾನದ ದೀಪವಾಗಿ ತೆರೆದೆ ನೀ ಶಾಲೆ ಬಡ ಮಕ್ಕಳ ಪಾಲಿನ ಗುಡಿಯಾಗಿ ...

ಸತಿ ಪದ್ಧತಿಯ ಅಳಿಸಿ, ಶಿಕ್ಷಣದ ಹಾದಿ ತೋರಿಸಿ ವಿಧವೆಯರ ಬಾಳಿಗೆ ಆಸರೆಯ ನೆರಳಾಗಿ ಪ್ಲೇಗ್ ರೋಗದ ನಡುವೆಯೂ ಸೇವೆಯ ಪಥ ಬಿಡದೆ ಮಕ್ಕಳಿಗಾಗಿ ಪ್ರಾಣವನ್ನೇ ಅರ್ಪಿಸಿದ ಅಪ್ರತಿಮ ತಾಯಿ ...

ಅಂದು ನೀ ಬಿತ್ತಿದ ಅಕ್ಷರವೆಂಬ ಸಣ್ಣ ಬೀಜ ಇಂದು ಹೆಮ್ಮರವಾಗಿ ಮಹಿಳಾ ಶಕ್ತಿಯಾಗಿದೆ ಅಕ್ಷರದವ್ವ ನಿನಗೆ ಕೋಟಿ ನಮನಗಳು ನಮ್ಮ ಪ್ರತಿ ಸಾಧನೆಯಲ್ಲೂ ನಿನ್ನದೇ ನೆನಪುಗಳು ...

# ಹೇರ್‌ಫಾಲ್ ಕಡಿಮೆ ಮಾಡುವ ಸೂಪರ್ ಫುಡ್‌ಗಳು

**ಕುಂಬಳಕಾಯಿ ಬೀಜಗಳು:** ಸತು, ಫೈಟೊಸ್ಟೆರಾಲ್‌ಗಳಲ್ಲಿ ಸಮೃದ್ಧವಾಗಿರುವ ಕುಂಬಳಕಾಯಿ ಬೀಜಗಳು ಕೂದಲಿನ ಆರೋಗ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕುಂಬಳಕಾಯಿ ಬೀಜಗಳು ಟೆಸ್ಟೋಸ್ಟೆರಾನ್ ಆಗಿ ಪರಿವರ್ತಿಸುವುದನ್ನು ನಿಧಾನ ಗೊಳಿಸುತ್ತದೆ, ಸತುವು ಸಮತೋಲಿತ ಹಾರ್ಮೋನ್ ಕಾರ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಈ ಬೀಜಗಳನ್ನು ಹಾಗೆ ತಿನ್ನಬಹುದು, ಇಲ್ಲವೇ ಸ್ಮೂಥಿ, ಸಲಾಡ್‌ಗಳಲ್ಲಿ ಬಳಸಬಹುದು.

**ಟೊಮೆಟೊ :** ಟೊಮೆಟೊದಲ್ಲಿ ಕೂದಲ ಬೆಳವಣಿಗೆಗೆ ಸಹಾಯ ಮಾಡುವ ಅಂಶ ಅಂದರೆ ಅದುವೇ ಲೈಕೋಪೀನ್. ಇದು 5-ಆಲ್ಫಾ ರಿಡಕ್ಟೇಸ್ ಚಟುವಟಿಕೆಯನ್ನು ಕಡಿಮೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಕೂದಲು ಕಿರುಚೀಲಗಳಿಗೆ ಉತ್ಕರ್ಷಣ ನಿರೋಧಕ ಬೆಂಬಲವನ್ನು ಒದಗಿಸುತ್ತದೆ. ಸಲಾಡ್, ಸೂಪ್, ಕರ್ರಿ, ಗೊಜ್ಜು ರೂಪದಲ್ಲಿ ಟೊಮೆಟೊವನ್ನು ಆಹಾರದಲ್ಲಿ ಸೇರಿಸಿಕೊಳ್ಳುವುದರಿಂದ ಕೂದಲು ಸೊಂಪಾಗುತ್ತದೆ.

**ಗ್ರೀನ್ ಟೀ :** ಗ್ರೀನ್ ಟೀ ಯಲ್ಲಿರುವ ಪ್ರಮುಖ ಪೋಷಕಾಂಶ ಎಪಿಗಲ್ಲೊಕಾಟೆಚಿನ್ ಗ್ಯಾಲೇ ಈ ಅಂಶವು 5-ಆಲ್ಫಾ ರಿಡಕ್ಟೇಸ್ ಚಟುವಟಿಕೆಯನ್ನು ಕಡಿಮೆ ಮಾಡುತ್ತದೆ ಮತ್ತು ನೆತ್ತಿಯ ರಕ್ತ ಪರಿಚಲನೆಯನ್ನು ಬೆಂಬಲಿಸಿ ಕೂದಲನ್ನು ಪೋಷಣೆ ಮಾಡುತ್ತದೆ.

**ಕ್ಯಾರೆಟ್:** ವಿಟಮಿನ್ ಎ ನಲ್ಲಿ ಸಮೃದ್ಧವಾಗಿರುವ ಕ್ಯಾರೆಟ್ ನೆತ್ತಿಯ ಆರೋಗ್ಯ ಮತ್ತು ಮೇದೋಗ್ರಂಥಿಗಳ ಸ್ರಾವ ಸಮತೋಲನವನ್ನು ಬೆಂಬಲಿಸುತ್ತದೆ.



# ಹಿಂಸೆ ಮತ್ತು ಕ್ರೀಡೆ ಎರಡೂ ಏಕಕಾಲದಲ್ಲಿ ನಡೆಯಲು ಸಾಧ್ಯವಿಲ್ಲ

## ಶಾರುಖ್ ಖಾನ್ ಗೆ ಕ್ಷಮೆ ಇಲ್ಲ ! – ಹಿಂದೂ ಜನಜಾಗೃತಿ ಸಮಿತಿ

ಪಾಕಿಸ್ತಾನದ ವಿಷಯದಲ್ಲಿ ನೀರು ಮತ್ತು ರಕ್ತ ಏಕಕಾಲದಲ್ಲಿ ಹರಿಯಲು ಸಾಧ್ಯವಿಲ್ಲ ಎಂಬ ನಿಲುವನ್ನು ಭಾರತ ಸರ್ಕಾರ ಹೇಗೆ ತೆಗೆದುಕೊಂಡಿತ್ತೋ, ಅದೇ ನಿಲುವನ್ನು ಈಗ ಬಾಂಗ್ಲಾದೇಶದ ವಿರುದ್ಧವೂ ತೆಗೆದುಕೊಳ್ಳಬೇಕಿದೆ. ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಅಮಾನವೀಯ ದೌರ್ಜನ್ಯಗಳನ್ನು ಮರೆತು, ಬಾಂಗ್ಲಾದೇಶಿ ಆಟಗಾರರಿಗೆ ಭಾರತದ ನೆಲದಲ್ಲಿ 'ರೆಡ್ ಕಾರ್ಪೆಟ್' ಸ್ವಾಗತ ನೀಡುವುದನ್ನು ನಾವು ಎಂದಿಗೂ ಸಹಿಸುವುದಿಲ್ಲ. ಐಪಿಎಲ್‌ನ ಎಲ್ಲಾ ತಂಡದ ಮಾಲೀಕರು ಇದೇ ನಿಲುವನ್ನು ತೆಗೆದುಕೊಳ್ಳಬೇಕಿತ್ತು; ಆದರೆ 'ಬಿಸಿಸಿಐ' ನಿರ್ಧಾರದ ನಂತರ ಬಾಂಗ್ಲಾದೇಶದ ಆಟಗಾರ ಮುಸ್ತಫಿಜುರ್ ರೆಹಮಾನ್ ಅವರನ್ನು ಕೈಬಿಡಲಾಗಿದೆ.

> ಭಾರತದ ನೆಲದಲ್ಲಿ 'ರೆಡ್ ಕಾರ್ಪೆಟ್'

ಹಿಂಸೆ ಮತ್ತು ಕ್ರೀಡೆಯನ್ನು ಏಕಕಾಲದಲ್ಲಿ ನಡೆಸಲು ಸಾಧ್ಯವಿಲ್ಲ' ಎಂಬ ಸಂದೇಶವನ್ನು ಭಾರತ ಸರ್ಕಾರ ಬಾಂಗ್ಲಾದೇಶಕ್ಕೆ ನೀಡಬೇಕು. ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಒಬ್ಬನೇ ಒಬ್ಬ ಆಟಗಾರನಿಗೂ ಭಾರತದ ನೆಲದಲ್ಲಿ ಆಡಲು ಅವಕಾಶ ನೀಡುವುದು ಹಿಂದೂಗಳ ಗಾಯದ ಮೇಲೆ ಉಪ್ಪು ಸವರುವಂತಾಗುತ್ತದೆ. ಆದ್ದರಿಂದ ಈ ದೇಶಗಳ ಆಟಗಾರರು ಭಾರತದಲ್ಲಿ ಆಡುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಎಂದು ಹಿಂದೂ ಜನ ಜಾಗೃತಿ ಸಮಿತಿ ಆಗ್ರಹಿಸಿದೆ.

ಬಾಂಗ್ಲಾದೇಶಿ ಮತ್ತು ಪಾಕಿಸ್ತಾನಿ ಆಟಗಾರರಿಗೆ ಭಾರತದ ನೆಲದಲ್ಲಿ ಆಡಲು ಅನುಮತಿ ನೀಡಬಾರದು ಎಂದು ಆಗ್ರಹಿಸಿ ಹಿಂದೂ ಜನ ಜಾಗೃತಿ ಸಮಿತಿಯು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ 22 ಡಿಸೆಂಬರ್ 2025 ರಂದು ಪ್ರಧಾನಮಂತ್ರಿ, ಕೇಂದ್ರ ಗೃಹ ಸಚಿವರು ಮತ್ತು ಬಿಸಿಸಿಐ ಅಧ್ಯಕ್ಷರಿಗೆ ಮನವಿ ಸಲ್ಲಿಸಿತ್ತು. ಬಾಂಗ್ಲಾದೇಶಿ ಆಟಗಾರ ಮುಸ್ತಫಿಜುರ್ ರೆಹಮಾನ್ ಅವರನ್ನು 'ಕೋಲ್ಕತ್ತಾ ನೈಟ್ ರೈಡರ್ಸ್' ತಂಡದಿಂದ ಕೈಬಿಡಬೇಕೆಂದು ಸಮಿತಿಯು ಕೆಲವು ದಿನಗಳ ಹಿಂದೆಯೇ ಒತ್ತಾಯಿಸಿತ್ತು. ಈ ಕುರಿತು ಇಂದು ಬಿಸಿಸಿಐ ನಿರ್ಧಾರ ಕೈಗೊಂಡಿದೆ.



ಬಿಸಿಸಿಐನ ಈ ಕ್ರಮವನ್ನು ನಾವು ಸ್ವಾಗತಿಸುತ್ತೇವೆ; ಆದರೆ ಈ ನಿಲುವನ್ನು ಮೊದಲು ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಮಾಲೀಕರು ತೆಗೆದುಕೊಳ್ಳಬೇಕಿತ್ತು. ಶಾರುಖ್ ಖಾನ್ ಅಂತಹ ಯಾವುದೇ ನಿಲುವನ್ನು ಸ್ವತಃ ತೆಗೆದುಕೊಳ್ಳಲಿಲ್ಲ. ಅವರಿಗೆ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಕ್ಕಿಂತ ತನ್ನ ತಂಡ, ವ್ಯವಹಾರ ಮತ್ತು ಅದರಿಂದ ಬರುವ ಆದಾಯವೇ ಮುಖ್ಯವೆಂದು ತೋರುತ್ತದೆ, ಇದು ಅತ್ಯಂತ ಖಂಡನೀಯ. ಬಾಂಗ್ಲಾದೇಶಿ ಆಟಗಾರರನ್ನು ಪ್ರೋತ್ಸಾಹಿಸುವುದು ಎಂದರೆ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸಾಚಾರಕ್ಕೆ ಪರೋಕ್ಷ ಬೆಂಬಲ ನೀಡಿದಂತೆಯೇ ಸರಿ. ಆದ್ದರಿಂದ ನಾವು ಶಾರುಖ್ ಖಾನ್ ಅವರನ್ನು ಬಹಿರಂಗವಾಗಿ ಖಂಡಿಸುತ್ತೇವೆ ಮತ್ತು ಅವರು ದೇಶದ ಜನತೆಯ ಎದುರು ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸುತ್ತೇವೆ. ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ.

ಇದಲ್ಲದೆ ಕಾನೂನು ಬಾಹಿರವಾಗಿ ನುಸುಳುತ್ತಿರುವ ಬಾಂಗ್ಲಾದೇಶಿಗಳಿಂದ ಭಾರತದ ಕಾನೂನು ಸುವ್ಯವಸ್ಥೆ ಹದಗೆಡುತ್ತಿದೆ. ಮಾನವ ಅಕ್ರಮ ಸಾಗಣೆ, ಮಾದಕ ದ್ರವ್ಯ ಜಾಲ, ವೇಶ್ಯಾವಾಟಿಕೆ ಮುಂತಾದ ಅಪರಾಧ ಕೃತ್ಯಗಳು ಹೆಚ್ಚುತ್ತಿವೆ. ಆದ್ದರಿಂದ ಬಾಂಗ್ಲಾದೇಶಿ ನುಸುಳುಕೋರರನ್ನು ಪತ್ತೆಹಚ್ಚಿ ಅವರನ್ನು ಅವರ ದೇಶಕ್ಕೆ ವಾಪಸ್ ಅಟ್ಟಬೇಕು ಎಂದು ಸಮಿತಿ ಹೇಳಿದೆ.

ಅಸಭ್ಯ ಶಿಕ್ಷಕರ ಮೇಲೆ ಕ್ರಮಕ್ಕೆ ಹಿಂದೇಟು! ಪ್ರಕರಣದಲ್ಲಿ 'ಕಾಣದ ಕೈಗಳ ಆಟವೋ? ಅಧಿಕಾರಿಗಳ ಮೌನವೋ?

# ಕುರುಡು ಕಾಂಚಾಣಕ್ಕೆ ಮಣಿದರೇ ಅಧಿಕಾರಿಗಳು?

• ಉದಯವಾಹಿನಿ ಕೆಂಭಾವಿ

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಶಿಕ್ಷಕರು ಹಾಗೂ ಅತಿಥಿ ಶಿಕ್ಷಕರು ಶೈಕ್ಷಣಿಕ ಪ್ರವಾಸದ ಸಂದರ್ಭದಲ್ಲಿ ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸಿರುವ ಘಟನೆ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಶಿಕ್ಷಣ ಇಲಾಖೆ ಹಾಗೂ ಮಕ್ಕಳ ಹಕ್ಕುಗಳ ಆಯೋಗದಿಂದ ದೂರುಗಳು ದಾಖಲಾಗಿದ್ದರೂ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಅಧಿಕಾರಿಗಳು ವಿಳಂಬ ಮಾಡುತ್ತಿರುವುದು ಹಲವು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ.

ಶಿಕ್ಷಣ ಇಲಾಖೆಗೆ ಹಿಡಿದ ಗ್ರಹಣ

**ಘಟನೆಯ ಹಿನ್ನೆಲೆ:** ಇತ್ತೀಚೆಗೆ ನಡೆದ ಶೈಕ್ಷಣಿಕ ಪ್ರವಾಸದ ಸಂದರ್ಭದಲ್ಲಿ, ಶಿಕ್ಷಕರು ಪ್ರವಾಸದ ಮಾರ್ಗಸೂಚಿಗಳನ್ನು ಗಾಳಿಗೆ ತೂರಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಪ್ರಮುಖವಾಗಿ, ಮಹಿಳಾ ವಿದ್ಯಾರ್ಥಿನಿಯರ ಜೊತೆ ಶಿಕ್ಷಕರು ಸ್ವಿಮಿಂಗ್ ಪೂಲ್‌ನಲ್ಲಿ ಜಲಕ್ರೀಡೆಯಾಡುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಈ ವಿಡಿಯೋಗಳು ಪೋಷಕರಲ್ಲಿ ಮುಜುಗರ ಹಾಗೂ ಆತಂಕವನ್ನು ಉಂಟುಮಾಡಿದ್ದು, ಶಿಕ್ಷಕ ವೃತ್ತಿಯ ಘನತೆಗೆ ಕುಂದು ತರುವಂತಿವೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ತನಿಖಾ ವರದಿ ಸಲ್ಲಿಕೆಯಾದರೂ ಕ್ರಮವಿಲ್ಲ:** ಘಟನೆಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಈಗಾಗಲೇ ಶಾಲೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ಘಟನೆಯ ಸಂಪೂರ್ಣ ವರದಿಯನ್ನು ಉಪನಿರ್ದೇಶಕರಿಗೆ (ಡಿಡಿಪಿಐ) ಸಲ್ಲಿಸಲಾಗಿದೆ. ಆದರೆ, ಇಲಾಖೆಯು ಕೇವಲ ನೋಟಿಸ್ ನೀಡುವ ಮೂಲಕ ಪ್ರಕರಣವನ್ನು ತಣ್ಣಗಾಗಿಸಲು ಪ್ರಯತ್ನಿಸುತ್ತಿದೆಯೇ ಎಂಬ ಪ್ರಶ್ನೆ ಎದ್ದಿದೆ.

**ಮಕ್ಕಳ ಆಯೋಗದ ಮಧ್ಯಪ್ರವೇಶ:** ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ. ಈ ಕುರಿತು ಯಾದಗಿರಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುವ ಆಯೋಗವು, ತಪ್ಪಿತಸ್ಥ ಶಿಕ್ಷಕರ ವಿರುದ್ಧ ದಾಖಲಾದ ಈಋಖ ಪ್ರತಿ ಹಾಗೂ ಶಿಕ್ಷಣ ಇಲಾಖೆಯ ತನಿಖಾ ವರದಿಯನ್ನು ಸಲ್ಲಿಸಲು ಸೂಚಿಸಿದೆ. ಆದರೂ ಜಿಲ್ಲಾಡಳಿತದ ಮೌನ ಪೋಷಕರ ಅಸಮಾಧಾನಕ್ಕೆ ಕಾರಣವಾಗಿದೆ.



ಉದಯವಾಹಿನಿ ಚಿತ್ರ

> ಬಾಲಕಿಯರ ಶಾಲೆಯಲ್ಲಿ ನಡೆದ ಈ ಘಟನೆ ಅತ್ಯಂತ ನಾಚಿಕೆಗೇಡಿನ ಸಂಗತಿ. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮವಾಗಬೇಕು. ನಾವು ಈಗಾಗಲೇ ಬಿಇಒ, ಡಿಡಿಪಿಐ ಹಾಗೂ ಜಿ.ಪಂ ಸಿಇಒ ಅವರಿಗೆ ಮನವಿ ಸಲ್ಲಿಸಿದ್ದೇವೆ. ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು.
> – ಶಿವಶರಣ ಯಾಳಗಿ, ಸಂಚಾಲಕರು, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕೆಂಭಾವಿ.

**'ಕಾಣದ ಕೈಗಳ ಹಸ್ತಕ್ಷೇಪದ ಶಂಕೆ:** ಅಸಭ್ಯ ವರ್ತನೆ ತೋರಿದ ಶಿಕ್ಷಕರನ್ನು ರಕ್ಷಿಸಲು ಕೆಲವು ಪ್ರಭಾವಿ ವ್ಯಕ್ತಿಗಳು ಹಾಗೂ ರಾಜಕೀಯ ಮುಖಂಡರು ತೆರೆಯ ಮರೆಯಲ್ಲಿ ಪ್ರಯತ್ನಿಸುತ್ತಿದ್ದಾರೆ ಎಂಬ ಮಾತುಗಳು ಪಟ್ಟಣದಲ್ಲಿ ಕೇಳಿಬರುತ್ತಿವೆ. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಹಚ್ಚುವ ಕೆಲಸವಾಗುತ್ತಿದೆ ಎಂದು ಸಂಘಟನೆಗಳ ಮುಖಂಡರು ದೂರಿದ್ದಾರೆ.

ಶಿಕ್ಷಕರೇ ಮಕ್ಕಳ ಬಾಳಿಗೆ ದಾರಿದೀಪವಾಗಬೇಕಾದ ಈ ಕಾಲದಲ್ಲಿ, ಇಂತಹ ವರ್ತನೆಗಳು ಸಮಾಜಕ್ಕೆ ತಪ್ಪು ಸಂದೇಶ ರವಾನಿಸುತ್ತಿವೆ. ಶಿಕ್ಷಣ ಇಲಾಖೆಯು ಈ ಕಾಣದ ಕೈ'ಗಳ ಪ್ರಭಾವಕ್ಕೆ ಒಳಗಾಗದೆ, ಶಿಸ್ತುಕ್ರಮ ಜರುಗಿಸುವ ಮೂಲಕ ಇತರ ಶಾಲೆಗಳಿಗೂ ಎಚ್ಚರಿಕೆಯ ಸಂದೇಶ ನೀಡಬೇಕಿದೆ.

> ನಮಗೆ ಮಕ್ಕಳ ಭವಿಷ್ಯ ಮುಖ್ಯ. ಈ ಪ್ರಕರಣದಿಂದ ಶಾಲೆಯ ಶೈಕ್ಷಣಿಕ ವಾತಾವರಣಕ್ಕೆ ಧಕ್ಕೆಯಾಗಿದೆ. ಶಿಕ್ಷಣ ಇಲಾಖೆಯು ರಾಜಕಾರಣಕ್ಕೆ ಮಣಿಯದೆ, ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಕೂಡಲೇ ಕ್ರಮ ಕೈಗೊಂಡು ಶಾಲೆಯಲ್ಲಿ ಸುಗಮ ಕಲಿಕೆಗೆ ವ್ಯವಸ್ಥೆ ಮಾಡಬೇಕು. –ಶಂಕರ ಕಿರಣಗಿ,
> ಪೋಷಕರು, ಕೆಂಭಾವಿ.

## ಕಾರ್ಮಿಕರ ಮಕ್ಕಳಿಗೆ ಶ್ರಮಿಕ ವಸತಿ ಶಾಲೆ ದಾವಣಗೆರೆ ಜಿಲ್ಲೆಗೆ ಎರಡು ಶಾಲೆ ಮಂಜೂರು

• ಉದಯವಾಹಿನಿ ದಾವಣಗೆರೆ


ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ರಾಜ್ಯ ಸರ್ಕಾರ ಶ್ರಮಿಕ ವಸತಿ ಶಾಲೆ ನಿರ್ಮಾಣಕ್ಕೆ ಮುಂದಾಗಿದ್ದು, ಜಿಲ್ಲೆಗೆ ಎರಡು ಶಾಲೆಗಳು ಮಂಜೂರಾಗಿವೆ. ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುರ್ಚಘಟ್ಟ ಹಾಗೂ ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೊಗ್ಗನೂರು ಬಳಿ ಇದಕ್ಕಾಗಿ ಸ್ಥಳ ಗುರುತಿಸಲಾಗಿದೆ.

ರಾಜ್ಯದ ಪ್ರತಿ ಜಿಲ್ಲೆಗೆ ಮೊದಲ ಹಂತದಲ್ಲಿ 31 ಶಾಲೆಗಳನ್ನು ಮಂಜೂರು ಮಾಡಿದಾಗ ದಾವಣಗೆರೆ ತಾಲ್ಲೂಕಿನ ತುರ್ಚಘಟ್ಟ ಬಳಿ ಸ್ಥಳ ಗುರುತಿಸಲಾಗಿತ್ತು. 2ನೇ ಹಂತದಲ್ಲಿ 11 ಶಾಲೆಗಳನ್ನು ಹಂಚಿಕೆ ಮಾಡಿದಾಗ ದಾವಣಗೆರೆ ತಾಲ್ಲೂಕಿಗೇ ಮತ್ತೊಂದು ಶಾಲೆ ಲಭ್ಯವಾಗಿದ್ದು, ಕೊಗ್ಗನೂರು ಬಳಿ ಶಾಲೆ ನಿರ್ಮಿಸಲು ನಿರ್ಧರಿಸಲಾಗಿದೆ. ಎರಡು ಕಡೆ ತಲಾ 6 ಎಕರೆ ಭೂಮಿಯನ್ನು ಕಂದಾಯ ಇಲಾಖೆ ಒದಗಿಸಿಕೊಟ್ಟಿದೆ.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಾದರಿಯಲ್ಲಿ ಶ್ರಮಿಕ ವಸತಿ ಶಾಲೆ ನಿರ್ಮಾಣಕ್ಕೆ ಯೋಜನೆ ರೂಪಿಸಿದೆ. ಇದಕ್ಕೆ ರೂ. 1,530 ಕೋಟಿ ಅನುದಾನವನ್ನು ಮಂಡಳಿ ಮೀಸಲಿಟ್ಟಿದೆ. 6ನೇ ತರಗತಿಯಿಂದ ಪಿಯುಸಿವರೆಗೆ ಉಚಿತ ಶಿಕ್ಷಣ ದೊರೆಯಲಿದೆ. ಕಲ್ಯಾಣ ಮಂಡಳಿಯ ನೋಂದಾಯಿತ ಕಾರ್ಮಿಕರ ಮಕ್ಕಳಿಗೆ ಮಾತ್ರ ಈ ಸೌಲಭ್ಯ ಸಿಗಲಿದೆ.'ಆರ್ಥಿಕವಾಗಿ ದುರ್ಬಲರಾಗಿರುವ ಕಟ್ಟಡ ಕಾರ್ಮಿಕರು ಸಾಮಾನ್ಯವಾಗಿ ವಲಸೆ ಪ್ರವೃತ್ತಿ ಹೊಂದಿರುತ್ತಾರೆ. ರಾಜ್ಯದ ಇತರೆ ನಗರ ಹಾಗೂ ಹೊರ ರಾಜ್ಯಗಳಿಗೂ ವಲಸೆ ಹೋಗುತ್ತಾರೆ. ಬದುಕು ಸಾಗಿಸುವ ಅನಿವಾರ್ಯತೆಯಲ್ಲಿ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವುದು ಕಡಿಮೆ. ಇಂತಹ ಕಾರ್ಮಿಕು ವಲಸೆ ಹೋದರೂ ಅವರ ಮಕ್ಕಳು ವಸತಿ ಶಾಲೆಯಲ್ಲಿ ಓದಲು ಅನುಕೂಲವಾಗಲಿದೆ. ಕಾರ್ಮಿಕರ ಮಕ್ಕಳು ಶಿಕ್ಷಣ ವಂಚಿತರಾಗುವುದು ತಪ್ಪಲಿದೆ' ಎಂದು ಕಾರ್ಮಿಕ ಇಲಾಖೆಯ ಮೂಲಗಳು ವಿವರಿಸಿವೆ.

ಪ್ರತಿ ತರಗತಿಗೆ 50 ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲಾಗುತ್ತದೆ. ಪ್ರತಿ ವಸತಿ ಶಾಲೆಯಲ್ಲಿ ಅಂದಾಜು 300ರಿಂದ 350 ವಿದ್ಯಾರ್ಥಿಗಳು ವ್ಯಾಸಂಗ ಮಾಡಲಿದ್ದಾರೆ. ಇಷ್ಟು ವಿದ್ಯಾರ್ಥಿಗಳಿಗೆ ಅಗತ್ಯವಿರುವ ಶಾಲಾ ಕಟ್ಟಡ, ಹಾಸ್ಟೆಲ್ ನಿರ್ಮಾಣ ಮಾಡಲಾಗುತ್ತದೆ. ತರಗತಿ ಕೊಠಡಿ, ಪ್ರಯೋಗಾಲಯ, ಕ್ರೀಡಾಂಗಣ, ಗ್ರಂಥಾಲಯ, ಕಚೇರಿ, ಶಿಕ್ಷಕರಿಗೆ ಪ್ರತ್ಯೇಕ ವಸತಿ ಸಮುಚ್ಚಯ ಇರಲಿದೆ.

ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಸಹಳ್ಳಿ ಬಳಿ 3 ಎಕರೆ ಭೂಮಿ ಲಭ್ಯವಾಗಿತ್ತು. ವಸತಿ ಶಾಲೆಗೆ ಕನಿಷ್ಠ 6 ಎಕರೆ ಅಗತ್ಯ ಇರುವುದರಿಂದ ಕೊಗ್ಗನೂರು ಬಳಿ ಸ್ಥಳ ಗುರುತಿಸಲಾಯಿತು. ಕಂದಾಯ ಇಲಾಖೆ ಈ ಭೂಮಿಯನ್ನು ಕಾರ್ಮಿಕ ಇಲಾಖೆಯ ಹೆಸರಿಗೆ ಖಾತೆ ಮಾಡಿಕೊಟ್ಟಿದೆ. ಮುಂದಿನ ತೀರ್ಮಾನಗಳನ್ನು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಕೈಗೊಳ್ಳಲಿದೆ' ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಎಸ್.ಆರ್. ಅರವಿಂದ್ ತಿಳಿಸಿದರು.



> ಶ್ರಮಿಕ ವಸತಿ ಶಾಲೆಗಳಿಗೆ ಸ್ಥಳ ಗುರುತಿಸಲಾಗಿದೆ. ಭೂಮಿ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡಿದೆ. ಶಾಲೆಯ ರೂಪುರೇಷ ಇನ್ನಷ್ಟೇ ಸಿದ್ದವಾಗಬೇಕಿದೆ
> –ಎಸ್.ಆರ್. ಅರವಿಂದ್, ಕಾರ್ಮಿಕ ಅಧಿಕಾರಿ

## ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಡಿಪಿಇಪಿ ಶಾಲೆಗೆ ವೀರಾಗ್ರಣಿ


ಉದಯವಾಹಿನಿ ಚಿತ್ರ

• ಉದಯವಾಹಿನಿ ಗದಗ

ತಾಲ್ಲೂಕಿನ ಸೊರಟೂರು ಗ್ರಾಮದ ಸರಕಾರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚಿಗೆ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ನೆರವೇರಿತು.

ಈ ಕಾರ್ಯಕ್ರಮದಲ್ಲಿ ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನ ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಸೊರಟೂರು ಗ್ರಾಮದ ಡಿ ಪಿ ಇ ಪಿ ಶಾಲೆಯ ಮಕ್ಕಳಿಗೆ ಹೆಚ್ಚು ಪ್ರಶಸ್ತಿಗಳು ಲಭಿಸಿದವು . ಒಂದರಿಂದ ನಾಲ್ಕನೆಯ ತರಗತಿ ಮಕ್ಕಳ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ವಿದ್ಯಾರ್ಥಿಗಳಾದ ಕಥೆ ಹೇಳುವುದು– ಶ್ರೇಯಾ ಮಾರುತಿ ಮಲ್ಲಾಡದ. ಕಂಠಪಾಠ ಇಂಗ್ಲಿಷ್ – ಅಮರಿಜ್ವಾನ ಅಣ್ಣಿಗೇರಿ. ಧಾರ್ಮಿಕ ಪಠಣ ಸಂಸ್ಕೃತ– ಭಾಗ್ಯ ಪ್ರಕಾಶ್ ಮುಳಗುಂದ. ಧಾರ್ಮಿಕ ಪಠಣ ಅರೇಬಿಕ್– ಆಲಿಯಾ ಕೆರೆಕೋಪ. ದೇಶಭಕ್ತಿ ಗೀತೆ– ಪ್ರತಿಭಾ ಕುಸ್ಲಾಪುರ. ಚದ್ಮವೇಷ –ಸಿಂಚನಾ ಶಿವಾನಂದ ಮಾಯಪ್ಪನವರ. ಚಿತ್ರಕಲೆ – ಇಶಾದ ಬಾಬು ಖಾನ್ ಅವರ. ಅಭಿನಯ ಗೀತೆ –ಸುಪ್ರಿಯಾ ಲಮಾಣಿ. ಕ್ಲೇ ಮಾಡ್ಲಿಂಗ– ನಿವೇದಿತಾ ಕರಿಗೌಡ್ರ. ಭಕ್ತಿ ಗೀತೆ– ನೇತ್ರಾವತಿ ಅಡ್ನೂರ. ಐದರಿಂದ ಏಳನೆಯ ತರಗತಿಯ ಸ್ಪರ್ಧೆಯಲ್ಲಿ ಕಂಠಪಾಠ ಕನ್ನಡ– ಚೈತ್ರ ಜೋಗೇರ. ಕಂಠಪಾಠ ಇಂಗ್ಲಿಷ್ –ರಿಜ್ವಾನ್ ಸಂಶಿ. ಕಂಠಪಾಠ ಹಿಂದಿ –ಶಬನಾ ಸರ್ಕಸ್ ನವರ. ಧಾರ್ಮಿಕ ಪಠಣ ಸಂಸ್ಕೃತ– ಮಾನಸಾ ಬಾಗೇವಾಡಿ. ದೇಶಭಕ್ತಿ ಗೀತೆ –ವಿದ್ಯಾ ಹಲವಾಗಲಿ. ಕಥೆ ಹೇಳುವುದು– ಮಲ್ಲಮ್ಮ ದೇವಿ ಹಾಳ. ಅಭಿನಯ ಗೀತೆ– ವೈಷ್ಣವಿ ಓಂಕಾರಿ. ಕ್ಲೇ ಮಾಡ್ಲಿಂಗ– ಕಾರ್ತಿಕ್ ಸರಾಪುರ. ಆಶುಭಾಷಣ– ಶ್ರೀನಿವಾಸ್ ಚೆನ್ನವೀರ ಶೆಟ್ಟರ. ಈ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಈ ವಿದ್ಯಾರ್ಥಿಗಳಿಗೆ ಶಾಲಾ ಮುಖ್ಯೋಪಾಧ್ಯಯರಾದ ಮಹಾಂತೇಶ್ ಶಿಲಿಯಪ್ಪನವರ. ಹಾಗೂ ಶಿಕ್ಷಕರು ಎಸ್ ಡಿ ಎಂ ಸಿ ಅಧ್ಯಕ್ಷರು ಸದಸ್ಯರು ಗ್ರಾಮಸ್ಥರು ಶಿಕ್ಷಣ ಪ್ರೇಮಿಗಳು ಅಭಿನಂದಿಸಿದ್ದಾರೆ.

## ಲೋಕಾಯುಕ್ತರಿಂದ ಕಡತಗಳ ಪರಿಶೀಲನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿಟಗುಪ್ಪಾ

ತಹಶೀಲ್ದಾರ್ ಮತ್ತು ತಾಲ್ಲೂಕ ಕಾರ್ಯನಿರ್ವಾಹಕ ದಂಡಾಧಿಕಾರಿ ಕಾರ್ಯಾಲಯದಲ್ಲಿ ಲೋಕಾಯುಕ್ತ ತಂಡ ಭೇಟಿ ನಿಡಿ ಪರಿಶೀಲನೆ. ಲೋಕಾಯುಕ್ತ ಅಧಿಕಾರಿಗಳ ತಂಡ ಪಟ್ಟಣಕ್ಕೆ ವಿವಿಧ ಕಚೇರಿಗಳಿಗೆ ಭೇಟಿ ನೀಡಿದರು.

ತಹಶೀಲ್ದಾರ್ ಕಚೇರಿಯಲ್ಲಿ ಸಿಬ್ಬಂದಿಗಳು ಜೊತೆ ಮಾತನಾಡಿ ಅವರವರ ದಿನಚರಿಯ ಕಾರ್ಯ ವೈಖರಿಯ ಬಗ್ಗೆ ಮಾಹಿತಿ ಪಡೆದರು. ಮತ್ತು ಪುರಸಭೆ ಕಚೇರಿಗೆ ಭೇಟಿ ನೀಡಿ ಪುರಸಭೆ ಮುಖ್ಯ ಅಧಿಕಾರಿ ಕೊಟಡಿಯಲ್ಲಿ ಸಿಭಧಿಯವರ ಡ್ರೆಸ್ ಕೋಡ್ ಕುರಿತು ಅಸಮಾಧಾನ ವ್ಯಕ್ತಪಡಿಸಿದರು

ತಹಶೀಲ್ದಾರ್ ಮಂಜುನಾಥ್ ಪಾಂಚಾಳರೊಂದಿಗೆ ಕಚೇರಿಯ ದಿನನಿತ್ಯದ ಕಾರ್ಯಕಲಾಪಗಳ ಬಗ್ಗೆ ವಿವರಣೆ ಪಡೆದಿದ್ದಾರೆಂದು ಹೇಳಲಾಗುತ್ತಿದೆ ಕಡತಗಳನ್ನು ಪರಿಶೀಲಿಸಿದ ಬಳಿಕ ಸಾರ್ವಜನಿಕರಿಗೆ ತೊಂದರೆ ಆಗದತೇ ತಮ್ಮ ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳಬೇಕು ಎಂದು ಸಿಬ್ಬಂದಿಗಳಿಗೆ ಸೂಚನೆ ನೀಡಿದಾರೆಂದು ಹೇಳಲಾಗುತಿದೆ, ಲೋಕಾಯುಕ್ತರು ತಾಲ್ಲೂಕ ದಂಡಾಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತಿರುವಾಗ ರೈತನೊಬ್ಬ ತಮ್ಮ ಹೊಲದ ಸಮಸ್ಯೆ ಸರ್ವೆಯರ್ ಪ್ರಶಾಂತ್ ನಮ್ಮ ಕೆಲಸ ಮಾಡಿಕೊಡಲು ಸತಾಯಿಸುತ್ತಿದ್ದಾರೆ ಎಂದು ಲೋಕಾಯುಕ್ತರ ಸಮ್ಮುಖದಲ್ಲಿ ತಹಶೀಲ್ದಾರ್ ಅವರಿಗೆ ಸಮಸ್ಯೆ ಹೇಳಿದ್ದಾರೆ.

ಪುರಸಭೆ ಕಚೇರಿಯ ಸಿಬ್ಬಂದಿಗಳ ಕಾರ್ಯವೈಖರಿಯನ್ನು ಕಂಡ ಲೋಕಾಯುಕ್ತ ಅಧಿಕಾರಿಗಳು ಸಿಬ್ಬಂದಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

## ಕೇಂದ್ರ ಕಾರಾಗೃಹಕ್ಕೆ ಡಿಜಿಪಿ ಅಲೋಕಕುಮಾರ ಭೇಟಿ, ತಪಾಸಣೆ

• ಉದಯವಾಹಿನಿ ಕಲಬುರಗಿ

ನಗರ ಹೊರವಲಯದ ಕೇಂದ್ರ ಕಾರಾಗೃಹದ ಒಳಗಡೆ ಕೈದಿಗಳು ಇಸ್ಪೀಟ್ ಆಡುವುದು, ಮದ್ಯಪಾನ ಹಾಗೂ ಸಿಗರೇಟ್ ಸೇವಿಸುತ್ತ ಐಷಾರಾಮಿ ಜೀವನ ನಡೆಸುತ್ತಿರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರು ಇಂದು ಕಾರಾಗೃಹಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ನಗರದ ಹೊರವಲಯದಲ್ಲಿರುವ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದ ಡಿಜಿಪಿ, ಜೈಲಿನ ಪ್ರತಿಯೊಂದು ಬ್ಯಾರಕ್‌ಗಳನ್ನು ಕೂಲಂಕುಷವಾಗಿ ತಪಾಸಣೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ. ಜೈಲಿನಲ್ಲಿ ಅಕ್ರಮ ವಸ್ತುಗಳ ಸರಬರಾಜು ಹೇಗೆ ನಡೆಯುತ್ತಿದೆ ಹಾಗೂ ಕೈದಿಗಳ ಐಷಾರಾಮಿ ಜೀವನ ನಡೆಸಲು ಹೇಗೆ ಸಾಧ್ಯ ಎಂಬ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದಾರೆ.

**ವಿಡಿಯೋ ವೈರಲ್:** ಇತ್ತೀಚೆಗಷ್ಟೇ ಕಲಬುರಗಿ ಜೈಲಿನ ಒಳಗಡೆ ಕೈದಿಗಳು ಇಸ್ಪೀಟ್ ಆಡುವುದು, ಮದ್ಯಪಾನ ಹಾಗೂ ಸಿಗರೇಟ್ ಸೇವಿಸುತ್ತ ಐಷಾರಾಮಿ ಜೀವನ ನಡೆಸುತ್ತಿರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಈ ಘಟನೆಯು ರಾಜ್ಯ ಕಾರಾಗೃಹ ಇಲಾಖೆಯಲ್ಲಿ ಸಂಚಲನ ಮೂಡಿಸಿದಲ್ಲದೆ, ಜೈಲಿನ ಭದ್ರತೆಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆಗೆ ಗುರಿಯಾಗಿತ್ತು. ಈ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಲು ಡಿಜಿಪಿ ಅಲೋಕ್ ಕುಮಾರ್ ಅವರು ಅಖಾಡಕ್ಕಿಳಿದಿದ್ದಾರೆ.

ಜೈಲಿನೊಳಗೆ ಮೊಬೈಲ್, ಅಮಲು ಪದಾರ್ಥ ಹಾಗೂ ಇನ್ನಿತರೆ ನಿಷೇಧಿತ ವಸ್ತುಗಳು ಪತ್ತೆಯಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಡಿಜಿಪಿ ಅವರ ಈ ದಿಢೀರ್ ಭೇಟಿಯು ಜೈಲು ಸಿಬ್ಬಂದಿ ಹಾಗೂ ಕೈದಿಗಳಲ್ಲಿ ನಡುಕ ಹುಟ್ಟಿಸಿದೆ. ಪರಿಶೀಲನೆ ಸಂದರ್ಭದಲ್ಲಿ ಕಾರಾಗೃಹ ಇಲಾಖೆ ಎಐಜಿ ಆನಂದ ರೆಡ್ಡಿ, ಉತ್ತರ ವಲಯ ಡಿಐಜಿ ಪಿ.ಶೇಷಾ, ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ, ಜೈಲು ಅಧೀಕ್ಷಕಿ ಡಾ.ಅನಿತಾ ಸೇರಿ ಅನೇಕರು ಇದ್ದರು.


ಉದಯವಾಹಿನಿ ಚಿತ್ರ

**ನಾಲ್ವರ ವಿರುದ್ಧ ಪ್ರಕರಣ ದಾಖಲು**

ನಗರದ ಹೊರ ವಲಯದಲ್ಲಿರುವ ಕೇಂದ್ರ ಕಾರಾಗೃಹದಲ್ಲಿ ಕೈದಿಗಳು ಅಕ್ರಮವಾಗಿ ಜೂಜಾಟ, ಮದ್ಯ, ಸಿಗರೇಟ್ ಸೇದುವುದು ಸೇರಿದಂತೆ ಹಲವು ಅನೈತಿಕ ಚಟುವಟಿಕೆಗಳ ನಡೆಸುತ್ತಿರುವ ವಿಡಿಯೋ ವೈರಲ್ ಆದ ಬಳಿಕ ಇಲ್ಲಿನ ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತೆರವು ಹೆಸರಲ್ಲಿ ಬಡವರಿಗೆ ಕಿರುಕುಳ ನೀಡಿದರೆ ಸುಮ್ಮನಿರಲ್ಲ : ಆರಗ

• ಉದಯವಾಹಿನಿ ತೀರ್ಥಹಳ್ಳಿ

ಕಾಂಗ್ರೆಸ್ ನಾಯಕರ ಅಣತಿಯಂತೆ ತಹಶೀಲ್ದಾರ್ ಸಾಗುವಳಿ ಜಮೀನು, ವಾಸದ ಮನೆ ತೆರವು ಮಾಡುವಂತೆ ಆದೇಶ ಹೊರಡಿಸುತ್ತಿದ್ದಾರೆ. ತೆರವು ಹೆಸರಿನಲ್ಲಿ ಬಡವರಿಗೆ ಕಿರುಕುಳ ನೀಡಿದರೆ ಬಿಜೆಪಿ ಸುಮ್ಮನಿರುವುದಿಲ್ಲ ಎಂದು ಶಾಸಕ ಆರಗ ಜ್ಞಾನೇಂದ್ರ ಎಚ್ಚರಿಕೆ ನೀಡಿದರು.

ಬಿಜೆಪಿ ಕಾರ್ಯಕರ್ತರು ತಾಲ್ಲೂಕು ಕಚೇರಿಗೆ ದಿಢೀರ್ ಮುತ್ತಿಗೆ ಹಾಕಿ ಧರಣಿ ನಡೆಸಿ ಅವರು ಮಾತನಾಡಿ, ರಾಜ್ಯ ಸರ್ಕಾರ ರೈತರನ್ನು ಕಂದಾಯ ಇಲಾಖೆ ಮೂಲಕ ಬಲವಂತವಾಗಿ ಒಕ್ಕಲೆಬ್ಬಿಸಲು ಹೊರಟಿದೆ.

ಶ್ರೀಮಂತರು, ಬಲಾಢ್ಯರು, ಕಾಂಗ್ರೆಸ್ ನಾಯಕರು ಹೇಳುವ ಕೆಲಸವನ್ನು ಚಾಚೂತಪ್ಪದೆ ಮಾಡುತ್ತಿರುವ ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ಹೋರಾಟ ಅನಿವಾರ್ಯವಾಗಿದೆ ಎಂದು ಹೇಳಿದರು. ತಾಲ್ಲೂಕು ಕಚೇರಿಯಲ್ಲಿ ಬ್ರೋಕರ್ ಹಾವಳಿ ಹೆಚ್ಚಾಗಿದೆ. ಇದಕ್ಕೆ ಕಡಿವಾಣ ಹಾಕುವಂತೆ ಹಲವು ಬಾರಿ ಸೂಚಿಸಿದ್ದೇನೆ. ಕಚೇರಿ ದಾಖಲೆಗಳನ್ನು ಕಳವು ಮಾಡುತ್ತಿದ್ದಾರೆ. ಕೆಲವೆ ದಿನದಲ್ಲಿ ಅವರುಗಳ ಪಟ್ಟಿ ಬಿಡುಗಡೆ ಮಾಡುತ್ತೇನೆ.


ಉದಯವಾಹಿನಿ ಚಿತ್ರ

ಹನಸ ಗ್ರಾಮದಲ್ಲಿ ಕೇವಲ 11ವರೆ ಗುಂಟೆ ಮನೆ ಕಟ್ಟಿದ ಜಾಗ ತೆರವಿಗೆ ಆದೇಶ ಮಾಡಲಾಗಿದೆ. ಪರಿಸ್ಥಿತಿ ಅವಲೋಕಿಸಿ ಕ್ರಮ ಯಾಕೆ ಕೈಗೊಳ್ಳುತ್ತಿಲ್ಲ ಎಂದು ಪ್ರಶ್ನಿಸಿದರು. ಕೋಣಂದೂರು ಸಮೀಪದ ಹುಕ್ಕೋಡು ಗ್ರಾಮದಲ್ಲಿ ಬಡ ಕುಟುಂಬಕ್ಕೆ ಬಗರ್ ಹುಕುಂ ಸಾಗುವಳಿ ಸಕ್ರಮ ಯೋಜನೆಯಡಿ ಜಮೀನು ಮಂಜೂರು ಮಾಡಲಾಗಿದೆ. ಆ ಸ್ಥಳಕ್ಕೆ ತಹಶೀಲ್ದಾರ್ ತೆರಳಿ ಕುಟುಂಬಕ್ಕೆ ಬೆದರಿಕೆ ಹಾಕಿದ್ದಾರೆ. ಇನ್ಮುಂದೆ ಪ್ರತಿ ದಿನ ತಾಲ್ಲೂಕು ಕಚೇರಿಗೆ ಬಿಜೆಪಿ ಮುತ್ತಿಗೆ ಹಾಕಲಿದೆ ಎಂದು ಎಚ್ಚರಿಕೆ ನೀಡಿದರು.

ಮೇಳಿಗೆ ಗ್ರಾಮದಲ್ಲಿ ಹೂವಪ್ಪ ನಾಯಕ್ ಪೂರ್ವಿಕರ ಕಾಲದಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅವರ ಖಾತೆ ಜಮೀನು ಪಕ್ಕದಲ್ಲಿ 1 ಎಕರೆ ಸರ್ಕಾರಿ ಜಾಗ ತೆರವಿಗೆ ಆದೇಶ ನೀಡಿ 192 (ಎ) ಅನ್ವಯ ಪ್ರಕರಣ ದಾಖಲಿಸಲಾಗುತ್ತಿದೆ. ಕಾಯ್ದೆಯನ್ನೇ ಬಿಜೆಪಿ ಸರ್ಕಾರ ಕಿತ್ತು ಹಾಕಿದೆ. ನಗರ ಪ್ರದೇಶಕ್ಕೆ ಮಾತ್ರ ಅನ್ವಯಿಸುವಂತೆ ಕಾಯ್ದೆ ಜಾರಿ ಮಾಡಲಾಗಿದೆ ಎಂದರು.

''ನನ್ನ ತಂದೆ ಹೆಸರಿಗೆ ಜಾಗ ಮಂಜೂರಾಗಿದ್ದು ಈಗ ಅವರು ಹೃದಯ ಸಂಬಂಧಿ ರೋಗಕ್ಕೆ ಒಳಗಾಗಿದ್ದಾರೆ. ಜಾಗಕ್ಕೆ ಬಂದ ನೀವು ಭವಿಷ್ಯ ಹಾಳಾಗುತ್ತೆ ಎಂದು ಬೆದರಿಕೆ ಹಾಕಿದ್ದೀರಿ. ಯಾವ ಅರ್ಥದಲ್ಲಿ ಈ ಮಾತು ಹೇಳಿದ್ರಿ. ಬಡವರು ಬದುಕುವುದು ತಪ್ಪಾ ಎಂದು ಮೇಳಿಗೆ ಗ್ರಾಮದ ಯುವತಿಯೊಬ್ಬರು ಪ್ರಶ್ನಿಸಿದರು. ನಾನು ಕಾನೂನು ಪ್ರಕಾರವೇ ಕೆಲಸ ಮಾಡಬೇಕಿದೆ. ಕೇಳಿದ ಪ್ರಶ್ನೆಗೆ ಕಾನೂನು ಪ್ರಕಾರವೇ ಉತ್ತರಿಸುತ್ತಿದ್ದೇನೆ. ಜಂಬುವಳ್ಳಿ ಗ್ರಾಮದಲ್ಲಿ ಯಾರಿಗೂ ಜಾಗ ಒತ್ತುವರಿಗೆ ಅವಕಾಶ ನೀಡಿಲ್ಲ. ಮೇಳಿಗೆ ಗ್ರಾಮದಲ್ಲಿ ಹೂವಪ್ಪ ನಾಯಕ್ ಅವರು ಸುಮಾರು 2ವರೆ ಎಕರೆ ಜಾಗ ಒತ್ತುವರಿ ಹೊಂದಿದ್ದಾರೆ. ದೂರಿನ ಹಿನ್ನೆಲೆಯಲ್ಲಿ ಕ್ರಮ ಜರುಗಿಸಲಾಗಿದೆ ಎಂದು ತಹಶೀಲ್ದಾರ್ ಎಸ್.ರಂಜಿತ್ ಪ್ರತಿಭಟನಕಾರರಿಗೆ ತಿಳಿಸಿದರು.

# ಒಂದೇ ದಿನ 3 ಕೋಟಿ ರೂ. ತೆರಿಗೆ ಸಂಗ್ರಹಿಸಿದ ವಿಜಯನಗರ ಜಿ.ಪಂ

## ಗ್ರಾ.ಪಂ.ಗಳಲ್ಲಿ ಒಂದೇ ದಿನ ತೆರಿಗೆ ವಸೂಲಾತಿಯಲ್ಲಿ ಗುರಿ ಮೀರಿದ ಸಾಧನೆ ಮಾಡಲಾಗಿದೆ: ಅಕ್ರಂ ಅಲಿ ಷಾ

• ಉದಯವಾಹಿನಿ ವಿಜಯನಗರ


ಜಿಲ್ಲಾ ಪಂಚಾಯಿತಿ ಆಡಳಿತ , ಒಂದೇ ದಿನ 3,07,70,832 ರೂ. ತೆರಿಗೆ ಸಂಗ್ರಹಿಸುವ ಮೂಲಕ ರಾಜ್ಯದಲ್ಲೇ ದಾಖಲೆ ಬರೆದಿದೆ.

**ಬಳ್ಳಾರಿ:** 137 ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ವಸೂಲಾತಿಯ ಪ್ರಮಾಣ ಹೆಚ್ಚಿಸುವ ಉದ್ದೇಶದೊಂದಿಗೆ ಜಿ.ಪಂ. ಸಿಇಒ ಮಾರ್ಗದರ್ಶನದಲ್ಲಿ 2025, ಡಿ.24ರಂದು ಬೆಳಗ್ಗೆ 6ರಿಂದ ಸಂಜೆ 7ರವರೆಗೆ 2 ಕೋಟಿ ರೂ. ತೆರಿಗೆ ಸಂಗ್ರಹದ ಗುರಿಯೊಂದಿಗೆ ವಿಶೇಷ ತೆರಿಗೆ ವಸೂಲಾತಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಗುರಿ ಮೀರಿದ ಸಾಧನೆ ಮೆರೆಯುವ ಮೂಲಕ ಜಿ.ಪಂ. ಆಡಳಿತ ಮಾದರಿ ಹೆಜ್ಜೆ ಇರಿಸಿದೆ.

**3 ಹಂತಗಳಲ್ಲಿ ಮೇಲ್ವಿಚಾರಣೆ:** ತೆರಿಗೆ ಅಭಿಯಾನವನ್ನು ಯಶಸ್ವಿಗೊಳಿಸಲು ಜಿಲ್ಲೆಯ ತಾಲ್ಲೂಕು ಪಂಚಾಯತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ಒಳಗೊಂಡಂತೆ ಎಲ್ಲಾ ಸಿಬ್ಬಂದಿಗೆ ಜಿಲ್ಲಾ ಪಂಚಾಯತಿಯಲ್ಲಿ ಸಭೆ ನಡೆಸಿ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಪ್ರತಿ ತಾಲ್ಲೂಕಿಗೆ ಜಿ.ಪಂ, ಉಪ ಕಾರ್ಯದರ್ಶಿ ಒಳಗೊಂಡಂತೆ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನು ನೇಮಿಸಿ ಅವರಿಗೆ ತಾಲ್ಲೂಕಿನ ಕನಿಷ್ಠ 5 ಗ್ರಾ.ಪಂಗಳಿಗೆ ಭೇಟಿ ನೀಡುವಂತೆ ತಿಳಿಸಲಾಗಿತ್ತು. ಮತ್ತೊಂದೆಡೆ ತಾ.ಪಂ.ಗಳ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕರು (ಪಂ.ರಾಜ್) ಮತ್ತು (ಗ್ರಾ.ಉ.) ಅವರು ಕನಿಷ್ಠ 10 ಗ್ರಾ.ಪಂಗಳಿಗೆ ಭೇಟಿ ನೀಡಿ ನಿಗದಿತ ಗುರಿ ಸಾಧಿಸಲು ವಿಶೇಷ ತೆರಿಗೆ ವಸೂಲಾತಿ ಅಭಿಯಾನದ ಯಶಸ್ಸಿಗೆ ಸೂಚಿಸಲಾಗಿತ್ತು.

ಗ್ರಾಮ ಪಂಚಾಯತಿಗಳಲ್ಲಿ ಮೇಲ್ವಿಚಾರಣೆಗಾಗಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿತ್ತು. ಗ್ರಾ.ಪಂ. ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಪಿಡಿಒ, ಕಾರ್ಯದರ್ಶಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ತೆರಿಗೆ ವಸೂಲಾತಿಗಾರರು, ಡಾಟಾ ಎಂಟ್ರಿ ಆಪರೇಟರ್‌ಗಳು, ನೀರುಗಂಟಿಗಳು, ಅರಿವು ಕೇಂದ್ರದ ಮೇಲ್ವಿಚಾರಕರು, ಎನ್‌ಆರ್ ಎಲ್‌ಎಂ ಸಿಬ್ಬಂದಿಯನ್ನು ಸದಸ್ಯರನ್ನಾಗಿ ನೇಮಿಸಿ, ಗ್ರಾಮಗಳನ್ನು ಹಂಚಿಕೆ ಮಾಡಿ ಪ್ರತಿ ಗ್ರಾಮದಲ್ಲಿ ತೆರಿಗೆ ಸಂಗ್ರಹಿಸಲು ಅಗತ್ಯ ಕ್ರಮ ವಹಿಸುವಂತೆ ತಿಳಿಸಲಾಗಿತ್ತು.

**ತೆರಿಗೆ ಬಾಕಿದಾರರ ಪಟ್ಟಿ ಮೊದಲೇ ಸಿದ್ಧ:** ಪ್ರತಿ ಗ್ರಾಮದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಬಾಕಿ ಇರುವವರ ಪಟ್ಟಿಯನ್ನು ಮೊದಲೇ ಸಿದ್ಧಪಡಿಸಲಾಗಿತ್ತು. ಹಂಚಿಕೆಯಾದ ಗ್ರಾಮವಾರು ತಂಡಕ್ಕೆ ಮೂರು ದಿನ ಮುಂಚೆಯೇ ಪಟ್ಟಿಯನ್ನು ನೀಡಿ ಸಂಬಂಧಪಟ್ಟ ತೆರಿಗೆದಾರರಿಗೆ ಕಡ್ಡಾಯವಾಗಿ ಬಾಕಿ ತೆರಿಗೆ ಪಾವತಿಸಲು ತಗಾದೆ ನೋಟೀಸ್ ನೀಡಲಾಗಿತ್ತು. ಇವರೆಲ್ಲರ ಕಾರ್ಯಕ್ಕೆ ಸ್ಥಳಿಯ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರೂ ಸಹಕಾರ ನೀಡಿದ ಫಲದಿಂದ ತೆರಿಗೆ ವಸೂಲಾತಿಯಲ್ಲಿ ಅಗಾಧ ಸಾಧನೆ ಮಾಡಲಾಗಿದೆ.



ಉದಯವಾಹಿನಿ ಚಿತ್ರ

- ವಿಜಯನಗರ ಜಿಲ್ಲೆ ಪಂಚಾಯಿತಿ ಆಡಳಿತ ಒಂದೇ ದಿನದಲ್ಲಿ 3ಲಕ್ಷಕ್ಕೂ ಅಧಿಕ ತೆರಿಗೆ ವಸೂಲಿವಿಶೇಷ ಅಭಿಯಾನದ ಮೂಲಕ ರಾಜ್ಯದಲ್ಲೇ ದಾಖಲೆ ಬರೆದ ಗ್ರಾಮೀಣ ಆಡಳಿತ
- ಗುರಿ ಮೀರಿ ತೆರಿಗೆ ಸಂಗ್ರಹ ಮಾಡಿದ ಗ್ರಾಮೀಣ ಆಡಳಿತ ಅಧಿಕಾರಿಗಳು

> ವಿಜಯನಗರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ವಸೂಲಾತಿಯ ಪ್ರಮಾಣ ಹೆಚ್ಚಿಸುವ ಸಲುವಾಗಿ ವಿಶೇಷ ತೆರಿಗೆ ವಸೂಲಾತಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾದ್ಯಂತ ಗ್ರಾ.ಪಂ.ಗಳಲ್ಲಿ ಒಂದೇ ದಿನ ತೆರಿಗೆ ವಸೂಲಾತಿಯಲ್ಲಿ ಗುರಿ ಮೀರಿದ ಸಾಧನೆ ಮಾಡಲಾಗಿದೆ. ಎಲ್ಲರ ನಿರಂತರ ಪರಿಶ್ರಮ ಇದಕ್ಕೆ ಕಾರಣ.
> –ಅಕ್ರಂ ಅಲಿ ಷಾ ಸಿಇಒ, ಜಿ.ಪಂ.,
> ವಿಜಯನಗರ

ದಾಖಲೆ ಬರೆದ ಗ್ರಾಮೀಣ ಆಡಳಿತ


ಉದಯವಾಹಿನಿ
ಪ್ರಾದೇಶಿಕ
ಭಾನುವಾರ
04 ಜನವರಿ 2026


## ಮಿನಿ ನ್ಯೂಸ್

### ಜ. 11ರಂದು ಪರಮಾನುಭವ ಬೋಧೆ ಸಮಾರೋಪ ಸಮಾರಂಭ

• ಉದಯವಾಹಿನಿ ಬಸವನಬಾಗೇವಾಡಿ

ಶ್ರೀ ಮನ್ನಿಜಗುಣ ಶಿವಯೋಗಿವರ್ಯರಿಂದ ವಿರಚಿತವಾದ ಪರಮಾನುಭವ ಬೋಧೆ ಗ್ರಂಥದ ಸತ್ಸಂಗವನ್ನು ಓಂ ನಮ: ಶಿವಾಯ ಆನ್‌ಲೈನ್ ಗ್ರೂಪ್‌ನಲ್ಲಿ ಕಳೆದ 16 ತಿಂಗಳು ಕಾಲ ಸರಾಗವಾಗಿ ನಡೆದು ಬಂದ ಹಿನ್ನಲೆಯಲ್ಲಿ ಸಮಾರೋಪ ಸಮಾರಂಭವನ್ನು ಜ. 11 ರಂದು ಬೆಳಿಗ್ಗೆ 10 ಗಂಟೆಯಿಂದ ಮೂರು ಗಂಟೆಗಳ ಕಾಲ ಪಟ್ಟಣದ ಕಾಳಿಕಾದೇವಿ ದೇವಸ್ಥಾನದ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ. ಸಮಾರಂಭದಲ್ಲಿ ಬೆನಕನಹಳ್ಳಿಯ ದೇವಾನಂದ ಶರಣರು, ಪಟ್ಟಣದ ಸಿದ್ದಲಿಂಗ ಶ್ರೀಗಳು, ನರಸಲಗಿಯ ಶ್ರೀಕಾಂತ ಗುರೂಜಿ, ಶರಣಾನಂದಾರೂಢರು ಸೇರಿದಂತೆ ನಾನಾ ಶ್ರೀಗಳು ಆಗಮಿಸಿ ಸತ್ಸಂಗ ನಡೆಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತರು ಸತ್ಸಂಗ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಗ್ರೂಫ್ ಅಧ್ಯಕ್ಷ ಎಚ್. ಬಿ ನರಸರೆಡ್ಡಿ ಹಾಗೂ ಶಂಕ್ರಣ್ಣ ಶರಣರು ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

### ಕಿರಿಕಿರಿ ಉಂಟು ಮಾಡಿದ ವಿಚಾರಣಾ ಕೇಂದ್ರ

• ಉದಯವಾಹಿನಿ ಮುಧೋಳ

ನಗರದಲ್ಲಿ ಬಸ್ ನಿಲ್ದಾಣದಲ್ಲಿ ಬಸ್ ವೇಳೆ ಹಾಗೂ ಇತರ ಮಾಹಿತಿ ವಿಚಾರಿಸಲು ಇರುವ ವಿಚಾರಣಾ ಕೇಂದ್ರ ಅವೈಜ್ಞಾನಿಕವಾಗಿದ್ದು ಜನಸಾಮಾನ್ಯರಿಗೆ ಸಮಸ್ಯೆ ಉಂಟು ಮಾಡಿದೆ. ಕಂಟ್ರೋಲರ್ ಬಳಿ ಯಾವುದೇ ಮಾಹಿತಿ ಕೇಳಲು ಅರ್ಧದಷ್ಟು ಬಗ್ಗಿ ನಿಂತರೇ ಮಾತ್ರ ಮಾತನಾಡಿದ್ದು ಸರಿಯಾಗಿ ಕೇಳಿಸುತ್ತದೆ. ಹಾಗೂ ಕಂಟ್ರೋಲರ್ ಹೇಳಿದ್ದು ಪ್ರಯಾಣಿಕರಿಗೆ ಕೇಳಿಸುತ್ತದೆ. ಸುತ್ತೆಲ್ಲ ಗ್ಲಾಸ್ ಹಾಕಿರುವುದರಿಂದ ನಿಂತು ಮಾತನಾಡಿದರೆ ಪರಸ್ಪರ ಮಾತು ಕೇಳಿಸುವುದಿಲ್ಲ.

ನಿತ್ಯ ಸಾವಿರಾರು ಪ್ರಯಾಣಿಕರು ಆಗಮಿಸುವ ನಿಲ್ದಾಣದಲ್ಲಿ ಹೀಗೆ ಬಗ್ಗಿ ನಿಂತು ಮಾತನಾಡಲು ಮಹಿಳೆಯರು, ವೃದ್ದರು ನಿತ್ಯ ಕಿರಿಕಿರಿ ಅನುಭವಿಸುತ್ತಿದ್ದಾರೆ. ಮಹಿಳೆಯರೇ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರಿದ್ದು, ಬಗ್ಗಿ ನಿಂತು ವಿಚಾರಿಸಬೇಕಾದ ಕಾರಣ ಸಮಸ್ಯೆ ಎದುರಿಸುತ್ತಿದ್ದಾರೆ. ಕೆಎಸ್‌ಆರ್‌ಟಿಸಿಯ ಜಿಲ್ಲೆಯ ಅಧಿಕಾರಿಗಳಿಗೆ, ಸ್ಥಳೀಯ ಡಿಪೊ ವ್ಯವಸ್ಥಾಪಕರಿಗೆ ಹಲವು ಬಾರಿ ಹೇಳಿದರೂ ಯಾವುದೇ ಪ್ರಯೋಜನವಾಗಿಲ್ಲ. ಒಂದು ತಿಂಗಳಲ್ಲಿ ಇದನ್ನು ಸರಿಪಡಿಸದಿದ್ದರೆ ಹೋರಾಟ ಮಾಡಲಾಗುವುದು ಎಂದು ಭೀಮ ಆರ್ಮಿ ಮುಖಂಡ ಸುನೀಲ ಕಂಬೋಗಿ ಹಾಗೂ ಸಮಾಜ ಸೇವಕ ಹಣಮಂತ ಅಡವಿ ತಿಳಿಸಿದ್ದಾರೆ.

### ತಂಬಾಕು ಬೆಲೆ ತಾರತಮ್ಯಕ್ಕೆ ಖಂಡನೆ: ಸಂಸದರ ಕಚೇರಿ ಮುಂದೆ ಧರಣಿ 5ಕ್ಕೆ

• ಉದಯವಾಹಿನಿ ಅರಕಲಗೂಡು

ತಂಬಾಕು ಬೆಲೆ ತಾರತಮ್ಯವನ್ನು ಸರಿಪಡಿಸುವಂತೆ ಅಗ್ರಹಿಸಿ ಜ.5ರಂದು ಹಾಸನದಲ್ಲಿ ಸಂಸದರ ಕಚೇರಿ ಮುಂದೆ ಧರಣಿ ಹಮ್ಮಿಕೊಂಡಿರುವುದಾಗಿ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಯೋಗಣ್ಣ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಂಬಾಕಿಗೂ ವಿಮೆ ಸೌಲಭ್ಯ, ಆರೋಗ್ಯ ವಿಮೆ ಯೋಜನೆ ಜಾರಿಯಾಗಬೇಕು. ಈ ಬಗ್ಗೆ ಸಂಸದರ ಗಮನ ಸೆಳೆಯಲು ಸಂಸದರ ಕಚೇರಿ ಮುಂದೆ ಧರಣಿ ಹಮ್ಮಿಕೊಂಡಿರುವುದಾಗಿ ಹೇಳಿದರು. ತಂಬಾಕು ಮಾರುಕಟ್ಟೆ ಆರಂಭವಾಗಿ ಮೂರು ತಿಂಗಳು ಕಳೆದರೂ ಬೆಲೆಯಲ್ಲಿ ಹೆಚ್ಚಳವಾಗಿಲ್ಲ.

320 ಕ್ಕೆ ಪ್ರಾರಂಭವಾದ ಬೆಲೆ ರೂ. 275 –280 ರ ಸರಾಸರಿ ಬೆಲೆಯಲ್ಲಿ ಮಾರಾಟವಾಗುತ್ತಿದೆ. ಅಂಧ್ರಪ್ರದೇಶದಲ್ಲಿ 145 ಮಿಲಿಯನ್‌ಗೆ ಬದಲು 250 ಮಿಲಿಯನ್ ತಂಬಾಕು ಬೆಳೆದರೂ ರೂ.450 ಗರಿಷ್ಠ ಬೆಲೆ ಕಂಡುಕೊಂಡಿದೆ. ಈ ಬೆಲೆ ತಾರತಮ್ಯದ ವಿರುದ್ಧ ರಾಜ್ಯದ ಸಂಸದರಾಗಲಿ, ವಾಣಿಜ್ಯ ಇಲಾಖೆಯಾಗಲಿ ಮಾತನಾಡುತ್ತಿಲ್ಲ. ದೇಶಕ್ಕೆ ಒಂದೇ ತಂಬಾಕು ಮಂಡಳಿಯಾದರೂ ಈ ದರ ತಾರತಮ್ಯವೇಕೆ ಎಂದು ಪ್ರಶ್ನಿಸಿದರು.

ಕೆಲವರು ನಾವು ತಾಲ್ಲೂಕು ರೈತ ಸಂಘದ ಅಧ್ಯಕ್ಷ ಎಂದು ಸ್ವಯಂ ಘೋಷಿಸಿಕೊಂಡು ಸಂಘವನ್ನು ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ತಾಲ್ಲೂಕು ರೈತ ಸಂಘದ ಅಧ್ಯಕ್ಷ ಯೋಗಣ್ಣ ಆರೋಪಿಸಿದರು. ರೈತ ಸಂಘದ ಜಿಲ್ಲಾ ಸಂಚಾಲಕ ಬಂದಿಗನಹಳ್ಳಿ ರವಿ, ಸದಸ್ಯರಾದ ಮಂಜುನಾಥ್, ರಮೇಶ್, ಅಣ್ಣಾಜಪ್ಪ, ನಟರಾಜ್, ಈರೇಗೌಡ ಗೋಷ್ಠಿಯಲ್ಲಿದ್ದರು.

### ಸಕಾಲದಲ್ಲಿ ಜನನ, ಮರಣ ಪ್ರಮಾಣ ಪತ್ರಕ್ಕೆ ಕ್ರಮವಹಿಸಿ: ಜಿಲ್ಲಾಧಿಕಾರಿ

• ಉದಯವಾಹಿನಿ ಕೊಪ್ಪಳ

ಬದುಕಿರುವ ಪ್ರತಿಯೊಬ್ಬ ವ್ಯಕ್ತಿಗೆ ಜನನ ಪ್ರಮಾಣ ಪತ್ರ ಅಗತ್ಯವಾದ ದಾಖಲೆಯಾಗಿದೆ ಮತ್ತು ವ್ಯಕ್ತಿಯ ಮರಣದ ನಂತರ ಕುಟುಂಬದವರಿಗೆ ಮರಣ ಪ್ರಮಾಣಪತ್ರ ಉಪಯುಕ್ತವಾದ ದಾಖಲೆಯಾಗಿದ್ದು, ಜನನ ಮತ್ತು ಮರಣ ಪ್ರಮಾಣ ಪತ್ರಗಳು ಜನರಿಗೆ ಸಕಾಲದಲ್ಲಿ ಸಿಗುವಂತಾಗಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಸಾಂಖ್ಯಿಕ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ನಾಗರಿಕ ನೋಂದಣಿ ಪದ್ಧತಿಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ ಜನನ ಮರಣ ನೋಂದಣಿ ಕಡ್ಡಾಯವಾಗಿದೆ. ನಿಗದಿತ ಅವಧಿಯೊಳಗೆ ಶುಲ್ಕವಿಲ್ಲದೆ ನೋಂದಣಿ ಮಾಡಲು ಅವಕಾಶವಿದ್ದು, ಆ ಅವಧಿಯೊಳಗೆ ಜನನ ಮರಣ ಮಾಹಿತಿಯು ಸಂಬಂಧಿಸಿದ ತಂತ್ರಾಶದಲ್ಲಿ ದಾಖಲಿಸಬೇಕು ಎಂದರು.

ಜನನ–ಮರಣ ನೋಂದಣಿಯನ್ನು ಅಧಿನಿಯಮ ಮತ್ತು ನಿಯಮಗಳಂತೆ ಹಾಗೂ 2024ರ ತಿದ್ದುಪಡಿ ನಿಯಮದಂತೆ ಅನುಷ್ಠಾನಕ್ಕೆ ಕ್ರಮವಹಿಸಬೇಕು. ಶೇ.100 ರಷ್ಟು ಜನನ, ಮರಣ ಮತ್ತು ನಿರ್ಜೀವ ಜನನಗಳ ಘಟನೆಗಳನ್ನು ನೋಂದಾವಣೆ ಆಗಿರುವ ಬಗ್ಗೆ ಪರಿಶೀಲನೆ ಕೈಗೊಳ್ಳಬೇಕು. ವಿಳಂಬ ನೋಂದಣಿ ಘಟನೆಗಳನ್ನು ತಡೆಯುವ ಬಗ್ಗೆಯೂ ಸಹ ಕ್ರಮ ವಹಿಸಬೇಕು. ಶೇ. 100ರಷ್ಟು ವರದಿ ಸಾಮರ್ಥ್ಯ ಸಾಧಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಪ್ರಕಾಶ ಪಿ. ದೇಶಪಾಂಡೆ ಮಾತನಾಡಿ ಜನನ, ಮರಣ ಮತ್ತು ನಿರ್ಜೀವ ಜನನಗಳ ನೋಂದಣಿ ಕಡ್ಡಾಯವಾಗಿರುತ್ತದೆ.

21 ದಿವಸ ಗಳೊಳಗಾಗಿ ಯಾವುದೇ ಶುಲ್ಕವಿಲ್ಲದೆ ಜನನ ಮರಣ ನೋಂದಣಿ ಮಾಡಲಾಗುವುದು ಎಂದರು. ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪಿ.ವೈ ಶೆಟ್ಟಪ್ಪನವರ, ತಾಲ್ಲೂಕು ಯೋಜನಾಧಿಕಾರಿ ರಾಜಾಸಾಬ ನದಾಫ್ ಪಾಲ್ಗೊಂಡಿದ್ದರು.

# ಅಮೆರಿಕದಲ್ಲಿ ಐಸಿಸ್ ಮಾದರಿ ಭಯೋತ್ಪಾದಕ ದಾಳಿ ಸಂಚು ವಿಫಲ



ದಾಳಿಗೆ ಐಸಿಸ್‌ನಿಂದ ಪ್ರೇರಣೆ

**ವಾಷಿಂಗ್ಟನ್:** ಹೊಸ ವರ್ಷದ ಮುನ್ನಾದಿನದಂದು ಅಮೆರಿಕದ ಉತ್ತರ ಕ್ಯಾರೊಲಿನಾದಲ್ಲಿ ಯೋಜಿಸಲಾಗಿದ್ದ, ಸಂಭಾವ್ಯ ಐಸಿಸ್ ಪ್ರೇರಿತ ದಾಳಿಯನ್ನು ವಿಫಲಗೊಳಿಸಲಾಗಿದೆ ಎಂದು ಎಫ್‌ಬಿಐ ಘೋಷಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 18 ವರ್ಷದ ಯುವಕನೋರ್ವನನ್ನು ವಶಕ್ಕೆ ಪಡೆಯಲಾಗಿದೆ. ಕ್ರಿಶ್ಚಿಯನ್ ಸ್ಟರ್ಡಿವಂಟ್ ಎಂದು ಗುರುತಿಸಲಾದ ಶಂಕಿತನನ್ನು ತಿಂಗಳುಗಳ ಕಾಲ ನಡೆಸಿದ ತನಿಖೆಯ ನಂತರ ಹೊಸ ವರ್ಷದ ಮುನ್ನಾದಿನದಂದು ವಶಕ್ಕೆ ಪಡೆಯಲಾಗಿದೆ ಎಂದು ಎಫ್‌ಬಿಐ ಮಾಹಿತಿ ನೀಡಿದೆ. ಕಳೆದ ಅಕ್ಟೋಬರ್‌ನಲ್ಲಿ ಎಫ್‌ಬಿಐ ಅಮೆರಿಕದ ಮಿಶಿಗನ್‌ನಲ್ಲಿ ನಡೆಯುತ್ತಿದ್ದ ಹಾಲೋವಿನ್ ಕಾರ್ಯಕ್ರಮದ ವೇಳೆ ಭಯೋತ್ಪಾದಕ ದಾಳಿ ಸಂಚು ವಿಫಲ ಮಾಡಿತ್ತು.

ಕ್ರಿಶ್ಚಿಯನ್ ಸ್ಟರ್ಡಿವಂಟ್ ಮೇಲೆ ಜನವರಿ 2022ರಿಂದಲೇ ಕಣ್ಣಿಟ್ಟಿದ್ದ ಎಫ್‌ಬಿಐ, ಆತ ವಿದೇಶದಲ್ಲಿ ಐಸಿಸ್ ಸದಸ್ಯರೊಂದಿಗೆ ಸಂಪರ್ಕದಲ್ಲಿದ್ದ ಬಗ್ಗೆ ಖಚಿತ ಮಾಹಿತಿಗಳನ್ನು ಕಲೆಹಾಕಿತ್ತು. ಸಂಪೂರ್ಣವಾಗಿ ಕಪ್ಪು ಬಟ್ಟೆ ಧರಿಸಿ ಸುತ್ತಿಗೆಯಿಂದ ದಾಳಿ ಮಾಡುವ ಐಸಿಸ್ ಮಾದರಿಯನ್ನು ಅನುಸರಿಸಲು ಸ್ಟರ್ಡಿವಂಟ್ ನಿರ್ಧರಿಸಿದ್ದ ಎಂದು ಎಫ್‌ಬಿಐ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡಿದ ಹೇಳಿಕೆಯಲ್ಲಿ, ಎಫ್‌ಬಿಐ ಮತ್ತು ನಮ್ಮ ಕಾನೂನು ಜಾರಿ ಪಾಲುದಾರರು ಉತ್ತರ ಕ್ಯಾರೊಲಿನಾದಲ್ಲಿ ಹೊಸ ವರ್ಷದ ಮುನ್ನಾದಿನದಂದು ಸಂಭಾವ್ಯ ಭಯೋತ್ಪಾದಕ ದಾಳಿಯನ್ನು ವಿಫಲಗೊಳಿಸಿದ್ದಾರೆ. ಈ ದಾಳಿಗೆ ಐಸಿಸ್‌ನಿಂದ ನೇರವಾಗಿ ಪ್ರೇರಣೆ ಪಡೆಯಲಾಗಿತ್ತು. ಆದರೆ ನಮ್ಮ ಧೀರ ರಕ್ಷಕರು ಯೋಜನೆಯನ್ನು ವಿಫಲಗೊಳಿಸಿದ್ದಾರಲ್ಲದೇ, ಓರ್ವ ಶಂಕಿತ ಆರೋಪಿಯನ್ನು ಬಂಧಿಸಿದ್ದಾರೆ ಎಂದು ಎಫ್‌ಬಿಐ ನಿರ್ದೇಶಕ ಕಾಶ್ ಪಟೇಲ್ ಹೇಳಿದ್ದಾರೆ. ಬಂಧಿತ ಕ್ರಿಶ್ಚಿಯನ್ ಸ್ಟರ್ಡಿವಂಟ್ ಮನೆಯಿಂದ ಸುತ್ತಿಗೆಗಳು ಮತ್ತು ಚಾಕುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಆರೋಪಿಯು ತನ್ನ ದಾಳಿಯ ಯೋಜನೆಗಳನ್ನು ಆನ್‌ಲೈನ್‌ನಲ್ಲಿ ಉಗ್ರಗಾಮಿಯಂತೆ ನಟಿಸಿದ ಎಫ್‌ಬಿಐ ಏಜೆಂಟ್‌ನೋರ್ವನೊಂದಿಗೆ ಹಂಚಿಕೊಂಡಿದ್ದ ಎಂದು ನ್ಯಾಯಾಲಯಕ್ಕೆ ಮಾಹಿತಿ ನೀಡಿಲಾಗಿದೆ.

ಕಳೆದ ಒಂದು ವರ್ಷದಿಂದ ಈ ದಾಳಿಗೆ ತಯಾರಿ ನಡೆಸುತ್ತಿದ್ದ ಕ್ರಿಶ್ಚಿಯನ್ ಸ್ಟರ್ಡಿವಂಟ್, ನಾರ್ಥ್ ಕ್ಯಾರೊಲಿನಾದಲ್ಲಿ ಡಿ.31ರ ಸಂಜೆ ಹೊಸ ವರ್ಷಾಚರಣೆಗೆ ಸೇರುವ ಗುಂಪಿನ ಮೇಲೆ ಕ್ರೂರವಾಗಿ ದಾಳಿ ಮಾಡುವ ಯೋಜನೆ ರೂಪಿಸಿದ್ದ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಅಮೆರಿಕದಲ್ಲಿ ಗುಪ್ತವಾಗಿ ಕಾರ್ಯಾಚರಣೆ ನಡೆಸುತ್ತಿರುವ ಐಸಿಸ್, ಹದಿಹರೆಯದ ಯುವಕರನ್ನು ಬ್ರೈನ್ ವಾಶ್ ಮಾಡಿ ಅವರಿಂದ ಭಯೋತ್ಪಾದಕ ದಾಳಿಗಳನ್ನು ನಡೆಸಲು ಸಂಚು ರೂಪಿಸುತ್ತಿದೆ. ಅಮೆರಿಕದಲ್ಲಿರುವ ಅಐಸಿಸ್ ನೆಟ್‌ವರ್ಕ್‌ನ್ನು ಧ್ವಂಸ ಮಾಡಲು ಎಫ್‌ಬಿಐ ನಿರಂತರವಾಗಿ ಪ್ರಯತ್ನಿಸುತ್ತಿದ್ದು, ಕಾಶ್ ಪಟೇಲ್ ಎಫ್‌ಬಿಐ ನಿರ್ದೇಶಕ ಹುದ್ದೆಗೆ ಆಯ್ಕೆಯಾದ ಬಳಿಕ ಈ ಪ್ರಯತ್ನಗಳಿಗೆ ಮತ್ತಷ್ಟು ವೇಗ ನೀಡಲಾಗಿದೆ.

ಫೆಡರಲ್ ಏಜೆನ್ಸಿಯ ಎಲ್ಲಾ ಘಟಕಗಳು ಐಸಿಸ್ ಪರ ಸಹಾನುಭೂತಿ ಉಳ್ಳವರನ್ನು ಬೇಟೆಯಾಡುವುದರಲ್ಲಿ ನಿರತವಾಗಿದ್ದು, ಅವರ ದುಷ್ಟ ಯೋಜನೆಗಳನ್ನು ವಿಫಲಗೊಳಿಸುತ್ತಿದ್ದಾರೆ. ನಾರ್ಥ್ ಕ್ಯಾರೊಲಿನ್ ಐಸಿಸ್ ಮಾದರಿಯ ದಾಳಿಯನ್ನು ತಪ್ಪಿಸಿದ್ದು, ಎಫ್‌ಬಿಐನ ಯಶಸ್ಸು ಎಂದು ಬಣ್ಣಿಸಲಾಗಿದ್ದು, ಈ ಕಾರ್ಯಾಚರಣೆಯಲ್ಲಿ ಪೂರಕವಾಗಿ ಕೆಲಸ ಮಾಡಿದ ಎಲ್ಲಾ ಘಟಕಗಳಿಗೂ ಕಾಶ್ ಪಟೇಲ್ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

## ಮಿನಿ ನ್ಯೂಸ್

### ಆರ್ಥಿಕ ಕುಸಿತ, ಹಣದುಬ್ಬರ: ಇರಾನ್ ಸರ್ಕಾರದ ವಿರುದ್ಧ ಭುಗಿಲೆದ್ದ ಆಕ್ರೋಶ

**ದುಬೈ:** ಇರಾನ್‌ನಲ್ಲಿ ಆರ್ಥಿಕತೆಯ ಕುಸಿತದಿಂದ ಸರ್ಕಾರದ ವಿರುದ್ಧ ಜನರ ಆಕ್ರೋಶ ಭುಗಿಲೆದ್ದಿದೆ. ಕಳೆದ ಒಂದು ವಾರದಿಂದ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಮೃತಪಟ್ಟವರ ಸಂಖ್ಯೆ 10ಕ್ಕೇರಿದೆ. ಆರ್ಥಿಕ ಕುಸಿತ, ಹಣದುಬ್ಬರ, ಬೆಲೆಯೇರಿಕೆ ಮತ್ತು ನಿರುದ್ಯೋಗ ಸಮಸ್ಯೆಗಳು ಯುವಜನರನ್ನು ಬೀದಿಗಿಳಿಯುವಂತೆ ಮಾಡಿದೆ. ರಾಜಧಾನಿ ಟೆಹರಾನ್‌ನಲ್ಲಿ ಆರಂಭವಾದ ಪ್ರತಿಭಟನೆ ಇದೀಗ ಇತರ ಕೆಲವು ನಗರಗಳಿಗೂ ವ್ಯಾಪಿಸಿದೆ. ಟೆಹರಾನ್ ಅಲ್ಲದೆ ಕೌಮ್ ಮತ್ತು ಹರ್ಸಿನ್ ಪಟ್ಟಣಗಳಲ್ಲಿ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಕೆರ್ಮನ್‌ಶಾ ಪ್ರಾಂತ್ಯದಲ್ಲಿ ಭದ್ರತಾ ಪಡೆಯ ಸಿಬ್ಬಂದಿಯೊಬ್ಬರು ಗುಂಡೇಟಿಗೆ ಬಲಿಯಾಗಿದ್ದಾರೆ. ಇರಾನ್‌ನ ಒಟ್ಟು 31 ಪ್ರಾಂತ್ಯಗಳಲ್ಲಿ 22 ಪ್ರಾಂತ್ಯಗಳಿಗೆ ಪ್ರತಿಭಟನೆಯ ಕಾವು ಹಬ್ಬಿದೆ. ಈ ಪ್ರಾಂತ್ಯಗಳ 100ಕ್ಕೂ ಅಧಿಕ ತಾಣಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ ಎಂದು ಅಮೆರಿಕ ಮೂಲದ ಮಾನವ ಹಕ್ಕುಗಳ ಸಂಘಟನೆ ತಿಳಿಸಿದೆ.

### ಸ್ವದೇಶಿ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸಿರುವ ಕ್ಷಿಪಣಿ ಪರೀಕ್ಷೆ ಯಶಸ್ವಿ

**ಇಸ್ಲಾಮಾಬಾದ್:** ಪಾಕಿಸ್ತಾನವು ಸ್ವದೇಶಿ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸಿರುವ, ತೈಮೂರ್ ಕ್ಷಿಪಣಿ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದೆ ಎಂದು ಅಲ್ಲಿನ ಸೇನೆ ಶನಿವಾರ ತಿಳಿಸಿದೆ. 600 ಕಿ.ಮೀ ದೂರದವರೆಗಿನ ಗುರಿಗಳನ್ನು ಹೊಡೆದುರುಳಿಸಬಲ್ಲ ಈ ಕ್ಷಿಪಣಿಯ ಯಶಸ್ವಿ ಪರೀಕ್ಷೆಯು ರಾಷ್ಟ್ರೀಯ ಬಾಹ್ಯಾಕಾಶ. ರಕ್ಷಣಾ ಸಾಮರ್ಥ್ಯಗಳ ಪ್ರಗತಿಯ ಮತ್ತೊಂದು ಮೈಲಿಗಲ್ಲಾಗಿದೆ ಎಂದು ಸೇನೆಯು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ. ಸಾಂಪ್ರದಾಯಿಕ ಸಿಡಿತಲೆಗಳನ್ನು ಹೊತ್ತೊಯ್ಯಬಲ್ಲ ಕ್ಷಿಪಣಿಯು ಸಮುದ್ರ, ಭೂಮಿ ಮೇಲಿನ ಗುರಿಗಳನ್ನು ನಿಖರವಾಗಿ ನಾಶಪಡಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದಿದೆ. ಶತ್ರುಗಳ ವಾಯು ಮತ್ತು ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳನ್ನು ಪರಿಣಾಮಕಾರಿಯಾಗಿ ತಪ್ಪಿಸಲು ತೈಮೂರ್ ಕ್ಷಿಪಣಿಯನ್ನು ಅತ್ಯಂತ ಕಡಿಮೆ ಎತ್ತರದಲ್ಲಿ ಹಾರುವಂತೆ ವಿನ್ಯಾಸಗೊಳಿಸಲಾಗಿದೆ.

### ಹಲ್ಲೆಗೊಳಗಾಗಿದ್ದ ಹಿಂದೂ ಉದ್ಯಮಿ ಸಾವು: ತಿಂಗಳೊಳಗೆ 5ನೇ ಘಟನೆ

**ಢಾಕಾ:** ಮೂರು ದಿನಗಳ ಹಿಂದೆ ಕ್ರೂರವಾಗಿ ಹಲ್ಲೆಗೊಳಗಾಗಿದ್ದ ಹಿಂದೂ ಉದ್ಯಮಿಯೊಬ್ಬರು ಚಿಕಿತ್ಸೆ ಫಲಿಸದೇ ಶನಿವಾರ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಖೋಕೇನ್‌ಚಂದ್ರದಾಸ್ ಮೃತರು. ಡಿಸೆಂಬರ್‌ನಿಂದ ಈವರೆಗೆ ಒಂದು ತಿಂಗಳ ಅವಧಿಯಲ್ಲಿ ಹತ್ಯೆಗೀಡಾದ ಹಿಂದೂ ಸಮುದಾಯದ ಐದನೇ ವ್ಯಕ್ತಿ ಇವರು. ಬಾಂಗ್ಲಾದೇಶದ ಮೂಲಭೂತವಾದಿ ಗುಂಪುಗಳು ಅಲ್ಪಸಂಖ್ಯಾತರನ್ನು ಬೆದರಿಸಲು ಪ್ರಯತ್ನಿಸುತ್ತಿರುವುದು ಇದರಿಂದ ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ಬಾಂಗ್ಲಾದೇಶ ಹಿಂದೂ, ಬೌದ್ಧ, ಕ್ರಿಶ್ಚಿಯನ್ ಏಕತಾ ಮಂಡಳಿಯ ವಕ್ತಾರರಾದ ಕಾಜೋಲ್ ದೇಬ್‌ನಾಥ್ ಹೇಳಿದ್ದಾರೆ.


ಶರಿಯತ್‌ಪುರ ಜಿಲ್ಲೆಯ ದಾಮುದ್ಯದ ಬಜಾರ್‌ಬಳಿ ರಾತ್ರಿ ಈ ಕೃತ್ಯ ನಡೆದಿತ್ತು. ಅಂಗಡಿ ಮುಚ್ಚಿ ಮನೆಗೆ ತೆರಳುತ್ತಿದ್ದ ಖೋಕೇನ್ ಚಂದ್ರದಾಸ್ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿದ ದುಷ್ಕರ್ಮಿಗಳು, ಬೆಂಕಿ ಹಚ್ಚಿ ಪರಾರಿಯಾಗಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ಢಾಕಾದ ಆಸ್ಪತ್ರೆಗೆ ದಾಖಲಿಸಿದ್ದರು. ಮೂರು ದಿನಗಳ ಕಾಲ ಜೀವನ್ಮರಣದ ಹೋರಾಟದ ನಂತರ ಚಂದ್ರದಾಸ್ ಶನಿವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ ಎಂದು ದೇಬ್‌ನಾಥ್ ಖಚಿತಪಡಿಸಿದ್ದಾರೆ.

### ತನಿಖೆಗೆ ಕಾಲಮಿತಿಯು ಅಸಾಧಾರಣ ಕ್ರಮವಷ್ಟೇ, ನಿಯಮವಲ್ಲ: ಸುಪ್ರೀಂ


**ನವದೆಹಲಿ:** ಕೆಲವೊಮ್ಮೆ ತನಿಖೆಯನ್ನು ಪೂರ್ಣಗೊಳಿಸುವುದಕ್ಕೆ ನ್ಯಾಯಾಲಯಗಳು ತನಿಖಾ ಸಂಸ್ಥೆಗೆ ಕಾಲಮಿತಿ ನಿಗದಿ ಮಾಡುತ್ತವೆ. ಇದು ಅಸಾಧಾರಣ ಕ್ರಮವೇ ಹೊರತು ಸಾಮಾನ್ಯ ನಿಯಮವೇನಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ದಾಖಲೆಗಳನ್ನು ತಿರುಚಿ ಶಸ್ತ್ರಾಸ್ತ್ರ ಪರವಾನಗಿ ಪಡೆದ ಪ್ರಕರಣದಲ್ಲಿ ಆರೋಪಿಗೆ ಬಲವಂತದ ಕ್ರಮದಿಂದ ರಕ್ಷಣೆ ನೀಡಿ ಹಾಗೂ ಆತನ ವಿರುದ್ಧದ ತನಿಖೆಯನ್ನು 90 ದಿನಗಳ ಒಳಗಾಗಿ ಪೂರ್ಣಗೊಳಿಸುವಂತೆ ಉತ್ತರ ಪ್ರದೇಶ ಪೊಲೀಸರಿಗೆ ಸೂಚಿಸಿ ಅಲಹಾಬಾದ್ ಹೈಕೋರ್ಟ್ ನೀಡಿರುವ ಆದೇಶ ಪರಿಶೀಲನೆ ವೇಳೆ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ಹೇಳಿದೆ.

ಒಂದು ವೇಳೆ, ಕಾಲಮಿತಿ ನಿಗದಿ ಮಾಡದಿದ್ದಲ್ಲಿ ಪ್ರತಿಕೂಲ ಪರಿಣಾಮಗಳು ಕಂಡು ಬರಬಹುದು. ಇಂತಹ ಸಂದರ್ಭಗಳಲ್ಲಿ ತನಿಖೆ ಪೂರ್ಣಗೊಳಿಸುವುದಕ್ಕೆ ಕಾಲಮಿತಿ ನಿಗದಿ ಮಾಡಿ ನ್ಯಾಯಾಲಯಗಳು ಆದೇಶಿಸುತ್ತವೆ. ಸಂವಿಧಾನದ 21ನೇ ವಿಧಿಯು ಪ್ರತಿಯೊಬ್ಬರಿಗೂ ತ್ವರಿತ ವಿಚಾರಣೆಯ ಹಕ್ಕು ನೀಡಿದೆ ಎಂದು ಪೀಠ ಹೇಳಿದೆ.

# ಹಿರಿಯ ನಾಗರಿಕರ ಮನೆ ಬಾಗಿಲಿಗೆ ಆರೋಗ್ಯ ಸೇವೆ ಜಾರಿ: ನಿತೀಶ್ ಘೋಷಣೆ



**ಪಟ್ನಾ:** ಹಿರಿಯ ನಾಗರಿಕರ ಮನೆ ಬಾಗಿಲಿಗೆ ಆರೋಗ್ಯ ಸೇವೆ ಕಲ್ಪಿಸುವ ಯೋಜನೆಯನ್ನು ಜಾರಿಗೊಳಿಸಲು ಆದೇಶಿಸಿರುವುದಾಗಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಶನಿವಾರ ಹೇಳಿದ್ದಾರೆ. ಈ ಕುರಿತಂತೆ ಎಕ್ಸ್ ಪೋಸ್ಟ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ನಿತೀಶ್, ಅಗತ್ಯವಿರುವ ಹಿರಿಯ ನಾಗರಿಕರಿಗೆ ಶುಶ್ರೂಷಕರ ನೆರವು, ಮನೆಯಲ್ಲೇ ರಕ್ತದೊತ್ತಡ, ಇಸಿಜಿ ಹಾಗೂ ಇತರ ಪರೀಕ್ಷೆ ಹಾಗೂ ಇತರ ರೀತಿಯ ವೈದ್ಯಕೀಯ ನೆರವು ಸೇರಿದಂತೆ ಅಗತ್ಯ ಆರೋಗ್ಯ ಸೇವೆಗಳು ಅಗತ್ಯವಿರುವ ಸಮಯದಲ್ಲಿ ಅವರ ಮನೆಗಳಲ್ಲೇ ಸಿಗುವಂತೆ ನೋಡಿಕೊಳ್ಳುವುದು ನಮ್ಮ ಪ್ರಯತ್ನವಾಗಿದೆ ಎಂದು ತಿಳಿಸಿದ್ದಾರೆ. ಸಾತ್ ನಿಶ್ಚಯ್ ಅಡಿಯಲ್ಲಿ ಬರುವ ಹಿರಿಯ ನಾಗರಿಕರ ಆರೋಗ್ಯ ಸೇವೆಯನ್ನು ಆದ್ಯತೆ ಆಧಾರದ ಮೇಲೆ ಜಾರಿ ಮಾಡುವಂತೆ ಆರೋಗ್ಯ ಇಲಾಖೆಗೆ ಸೂಚಿಸಿದ್ದಾರೆ. ಆರೋಗ್ಯ ಸಂಬಂಧಿತ ಸೌಲಭ್ಯಗಳು ರಾಜ್ಯದ ಹಿರಿಯ ನಾಗರಿಕರಿಗೆ ಅವರ ಮನೆಗಳಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳಲು ತ್ವರಿತವಾಗಿ ಕಾರ್ಯೋನ್ಮುಖವಾಗುವಂತೆ ಆರೋಗ್ಯ ಇಲಾಖೆಗೆ ನಿರ್ದೇಶನ ನೀಡಲಾಗಿದೆ ಎಂದು ಅವರು ಬರೆದಿದ್ದಾರೆ. ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ, ನಾವು ಸಮಾಜದ ಎಲ್ಲಾ ವರ್ಗಗಳ ಜನರ ಉನ್ನತಿಗಾಗಿ ಮತ್ತು ನ್ಯಾಯಯುತ ಅಭಿವೃದ್ಧಿಯ ತತ್ವದಿಂದ ಮಾರ್ಗದರ್ಶಿಸಲ್ಪಟ್ಟ ಪ್ರತಿಯೊಂದು ವಲಯದ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದೇವೆ. ನಾವು ಇಡೀ ಬಿಹಾರವನ್ನು ನಮ್ಮ ಕುಟುಂಬವೆಂದು ಪರಿಗಣಿಸಿದ್ದೇವೆ ಎಂದಿದ್ದಾರೆ.



ಬಿಹಾರವನ್ನು ಅಭಿವೃದ್ಧಿ ಹೊಂದಿದ ರಾಜ್ಯವನ್ನಾಗಿ ಮಾಡಲು ರಾಜ್ಯ ಸರ್ಕಾರ 'ಸಾತ್ ನಿಶ್ಚಯ್ -3' ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ ಎಂದು ಅವರು ಹೇಳಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ ಸಾತ್ ನಿಶ್ಚಯ್ -3 ಜಾರಿಗೆ ಬಿಹಾರ ಸಚಿವ ಸಂಪುಟವು ಇತ್ತೀಚೆಗೆ ಅನುಮೋದನೆ ನೀಡಿತ್ತು.

# ಭಾರತಕ್ಕೆ ಅಚಲ ಬೆಂಬಲದ ಶಪಥ

## ಕಾಂಟ್ಯಾಕ್ಟ್ ಧುರಂಧರ್ ಕೋಡ್‌ವರ್ಡ್; ಪಾಕ್-ಚೀನಾದಲ್ಲಿ ಗಡ್‌ಬಡ್



**ಹೊಸದಿಲ್ಲಿ:** 2026ರ ಹೊಸ ವರ್ಷದ ಮೊದಲ ದಿನ ಅಂದರೆ ಜನವರಿ 1ನೇ ತಾರೀಕು, ಭಾರತ ಉಪಖಂಡದಾದ್ಯಂತ ಹೈವೋಲ್ಟೇಜ್ ವಿದ್ಯುತ್ ಸಂಚಾರವಾದ ಅನುಭವ. ರಿಪಬ್ಲಿಕ್ ಆಫ್ ಬಲೂಚಿಸ್ತಾನದ ಪ್ರತಿನಿಧಿ ಮೀರ್ ಯಾರ್ ಬಲೂಚ್ ಭಾರತಕ್ಕೆ ಬರೆದ ಪತ್ರ, ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಚೀನಾದ ರಾಜಕಾರಣದಲ್ಲಿ ಸಣ್ಣದೊಂದು ಕಂಪನ ಸೃಷ್ಟಿಸುವಲ್ಲಿ ಯಶಸ್ವಿಯಾಗಿದೆ. ಭಾರತವನ್ನು ಸುತ್ತುವರೆಯುವ ಪಾಕಿಸ್ತಾನ, ಚೀನಾ ಮತ್ತು ಬಾಂಗ್ಲಾದೇಶಗಳ ಹುನ್ನಾರವನ್ನು ಮೀರ್ ಯಾರ್ ಬಲೂಚ್ ತಮ್ಮ ಪತ್ರದಲ್ಲಿ ಸವಿಸ್ತಾರವಾಗಿ ವಿವರಿಸಿದ್ದಾರೆ.


### ಮೀರ್ ಪತ್ರದಲ್ಲೇನಿದೆ?

**ಹೊಸ ವರ್ಷದಂದು ಭಾರತದ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್ ಅವರನ್ನು ಉಲ್ಲೇಖಿಸಿ ಪತ್ರ ಬರೆದಿರುವ ಮೀರ್ ಯಾರ್ ಬಲೂಚ್, ಚೀನಾ ಮತ್ತು ಪಾಕಿಸ್ತಾನ ನಡುವಿನ ಸಂಬಂಧಗಳು ಗಟ್ಟಿಯಾಗುತ್ತಿರುವ ಬಗ್ಗೆ ಭಾರತವನ್ನು ಎಚ್ಚರಿಸಿದ್ದಾರೆ. ಇಷ್ಟೇ ಅಲ್ಲದೇ ಬಲೂಚಿಸ್ತಾನ ಪ್ರದೇಶದಲ್ಲಿ ಚೀನಾ ತನ್ನ ಸೈನ್ಯವನ್ನು ನಿಯೋಜಿಸುವ ಸಾಧ್ಯತೆಯ ಕುರಿತೂ ಅವರು ಸೂಕ್ಷ್ಮ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ.**

ಭಾರತಕ್ಕೆ ಈ ಮೂರೂ ರಾಷ್ಟ್ರಗಳ ದುಷ್ಟ ಯೋಜನೆ ಬಗ್ಗೆ ಸಂಪೂರ್ಣ ತಿಳುವಳಿಕೆ ಇದೆಯಾದರೂ, ಮೀರ್ ಯಾರ್ ಬಲೂಚ್ ಅವರ ಪತ್ರ ಮತ್ತೊಂದು ಸುತ್ತಿನ ಕಾರ್ಯತಂತ್ರ ರಚನೆಗೆ ಪೂರಕವಾಗಿದೆ. ಹೌದು, ಭಾರತದಲ್ಲಿ ಈಗ ಎಲ್ಲಿ ನೋಡಿದರೂ ಮೀರ್ ಯಾರ್ ಬಲೂಚ್ ಅವರ ಪತ್ರದ್ದೇ ಸುದ್ದಿ. ತಮ್ಮ ಪತ್ರದಲ್ಲಿ ಭಾರತ ಸರ್ಕಾರ ಮತ್ತು ಜನತೆಗೆ, ಬಲೂಚಿಸ್ತಾನ ಜನರ ಪರವಾಗಿ ಹೊಸ ವರ್ಷದ ಶುಭಾಶಯ ತಿಳಿಸಿರುವ ರಿಪಬ್ಲಿಕ್ ಆಫ್ ಬಲೂಚಿಸ್ತಾನದ ಪ್ರತಿನಿಧಿ, ಬಲೂಚಿಸ್ತಾನವು ಭಾರತದೊಂದಿಗೆ ಅಚಲವಾಗಿ ನಿಲ್ಲುವ ಭರವಸೆ ನೀಡಿದ್ದಾರೆ.

**ಯಾಕಿಷ್ಟು ಸದ್ದು?:** ಮೀರ್ ಯಾರ್ ಬಲೂಚ್ ಅವರು ರಿಪಬ್ಲಿಕ್ ಆಫ್ ಬಲೂಚಿಸ್ತಾನದ ಪ್ರತಿನಿಧಿ ಮಾತ್ರವಲ್ಲ, ಬಲೂಚಿಸ್ತಾನದ ಮಾನವ ಹಕ್ಕುಗಳ ಸಂರಕ್ಷಕ ಕೂಡ ಹೌದು. ಬಲೂಚಿಸ್ತಾನದ ಸ್ವಾತಂತ್ರ್ಯ ಹೋರಾಟ, ಬಲೂಚಿ ಜನರ ಮೇಲೆ ಪಾಕಿಸ್ತಾನ ಸೇನೆಯ ದೌರ್ಜನ್ಯ ಕುರಿತು ಮೀರ್ ಯಾರ್ ಬಲೂಚ್ ಇಡೀ ಜಗತ್ತಿಗೆ ಮನವರಿಕೆ ಮಾಡಿಕೊಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಬಲೂಚಿಸ್ತಾನ ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಂತ ಪ್ರಮುಖ ಪಾತ್ರ ನಿರ್ವಹಿಸುತ್ತಿರುವ ಮೀರ್ ಯಾರ್ ಬಲೂಚ್, ಭಾರತದೊಂದಿಗೆ ಬಲೂಚಿ ಜನರ ಒಗ್ಗಟ್ಟಿನ ಬಗ್ಗೆ ಮಾತನಾಡುವ ಮೂಲಕ ಇಡೀ ಜಗತ್ತಿನ ಗಮನ ಸೆಳೆದಿದ್ದಾರೆ. ತಮ್ಮ ಪತ್ರದಲ್ಲಿ ಪಾಕಿಸ್ತಾನ-ಚೀನಾ ಸಂಬಂಧಗಳ ಬಗ್ಗೆಯೂ ರಿಪಬ್ಲಿಕ್ ಆಫ್ ಬಲೂಚ್ ಪ್ರತಿನಿಧಿ, ಭಾರತದೊಂದಿಗೆ ಸೂಕ್ಷ್ಮವಾದ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ. ಭಾರತದಲ್ಲಿ ಬಲೂಚಿಸ್ತಾನ ಸ್ವಾತಂತ್ರ್ಯದ ಬಗ್ಗೆ ಸಹಾನುಭೂತಿ ಇದೆ.

ಭಾರತ ಮೊದಲಿನಿಂದಲೂ ಬಲೂಚಿಸ್ತಾನದಲ್ಲಿ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆ ವಿರುದ್ಧ ಧ್ವನಿ ಎತ್ತುತ್ತಲೇ ಇದೆ. ಬಲೂಚಿಸ್ತಾನದ ವಿಷಯದಲ್ಲಿ ಪಾಕಿಸ್ತಾನವು ಹಲವು ಬಾರಿ ಜಾಗತಿಕ ವೇದಿಕೆಗಳಲ್ಲಿ ನಗ್ನವಾಗಿದೆ. ಈ ಹಿನ್ನೆಲೆಯಲ್ಲಿ ಭಾರತಕ್ಕೆ ಮೀರ್ ಯಾರ್ ಬಲೂಚ್ ಅವರು ಬರೆದಿರುವ ಪತ್ರ ಭಾರೀ ಸದ್ದು ಮಾಡುತ್ತಿದೆ. 60 ಮಿಲಿಯನ್ ಬಲೂಚ್ ಜನರ ಇಚ್ಛೆಯಿಲ್ಲದೆ ಚೀನಾದ ಸೈನಿಕರು ಬಲೂಚಿಸ್ತಾನದ ನೆಲದಲ್ಲಿರುವುದು, ಭಾರತ ಮತ್ತು ಬಲೂಚಿಸ್ತಾನದ ಭವಿಷ್ಯಕ್ಕೆ ಊಹಿಸಲಾಗದ ಬೆದರಿಕೆ ಮತ್ತು ಸವಾಲನ್ನು ಒಡ್ಡುತ್ತದೆ. ಬಲೂಚಿಸ್ತಾನದ ರಕ್ಷಣೆ ಮತ್ತು ಸ್ವಾತಂತ್ರ್ಯ ಪಡೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಮೀರ್ ಯಾರ್ ಬಲೂಚ್ ತಮ್ಮ ಪತ್ರದಲ್ಲಿ ಸೂಚ್ಯವಾಗಿ ಉಲ್ಲೇಖಿಸಿದ್ದಾರೆ.



ತಮ್ಮ ಪತ್ರದಲ್ಲಿ ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ ಯೋಜನೆ ವಿಸ್ತರಣೆ ಬಗ್ಗೆಯೂ ಕಳವಳ ವ್ಯಕ್ತಪಡಿಸಿರುವ ಮೀರ್ ಯಾರ್ ಬಲೂಚ್, ಪಾಕಿಸ್ತಾನ, ಚೀನಾದ ನಡುವಿನ CPEC ಹಂತ ತಲುಪಿದೆ. ಇದರಿಂದ ಭಾರತ ಮತ್ತು ಬಲೂಚಿಸ್ತಾನ ಸ್ಪಷ್ಟ ಬೆದರಿಕೆಗಳನ್ನು ಎದುರಿಸಲಿವೆ. ಹೀಗಾಗಿ ಬಲೂಚಿಸ್ತಾನ ಮತ್ತು ಭಾರತದ ನಡುವೆ ಸಹಕಾರದ ಅವಶ್ಯಕತೆ ಹೆಚ್ಚಿದೆ ಎಂದು ಕರೆ ನೀಡಿದ್ದಾರೆ.

### ಭಾರತ ಪ್ರತಿಕ್ರಿಯೆ ನೀಡಲಿದೆಯೇ?

**ಮೀರ್ ಯಾರ್ ಬಲೂಚ್ ಅವರು ಬರೆದ ಪತ್ರಕ್ಕೆ ಭಾರತ ಇದುವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಭಾರತ ಇದನ್ನು ತನ್ನ ಕಾರ್ಯತಂತ್ರದ ಸ್ವರೂಪವನ್ನು ನಿರ್ಧರಿಸಿಕೊಳ್ಳಲು ಬಳಸಿಕೊಳ್ಳಲಿದೆ. ಮೀರ್ ಯಾರ್ ಬಲೂಚ್ ಅವರಿಗೆ ಭಾರತ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರತಿಕ್ರಿಯೆ ನೀಡಬಹುದು. ಜೊತೆಗೆ ಪಾಕಿಸ್ತಾನ-ಚೀನಾದ ನಡುವಿನ ಸಂಬಂಧಗಳನ್ನು ಸೂಕ್ಷ್ಮವಾಗಿ ಅವಲೋಕನ ಮಾಡಲಿದೆ. ಬಲೂಚಿಸ್ತಾನ ಪಾಕಿಸ್ತಾನದ ಎದುರು ತಲೆಬಾಗುವುದಿಲ್ಲ ಎಂಬ ಸತ್ಯ ಭಾರತಕ್ಕೆ ಗೊತ್ತಿದೆ. ಹೀಗಾಗಿ ಅತ್ಯಂತ ಪ್ರಮುಖ ಘಟ್ಟದಲ್ಲಿ ಸ್ವೀಕರಿಸಿರುವ ಈ ಪತ್ರದ ಬಗ್ಗೆ ಭಾರತ ಖಂಡಿತವಾಗಿಯೂ ಸೂಕ್ತ ಕ್ರಮ ಕೈಗೊಳ್ಳಲಿದೆ.**

# ಸಮವಸ್ತ್ರ, ದೈಹಿಕ ವ್ಯಾಯಾಮಗಳ ಹೊರತಾಗಿಯೂ ಆರ್‌ಎಸ್‌ಎಸ್ ಅರೆಸೈನಿಕ ಸಂಘಟನೆಯಲ್ಲ

**ಭೋಪಾಲ್:** ಸಮವಸ್ತ್ರ, ದೈಹಿಕ ವ್ಯಾಯಾಮಗಳ ಹೊರತಾಗಿಯೂ, ಸಂಘವು ಅರೆಸೈನಿಕ ಸಂಘಟನೆಯಲ್ಲ, ಬಿಜೆಪಿಯನ್ನು ನೋಡಿ ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ಸಹ ದೊಡ್ಡ ತಪ್ಪು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ರಾಷ್ಟ್ರೀಯ ಸ್ವಯಂಸೇವಾ ಸಂಘವು ಸಮಾಜವನ್ನು ಒಗ್ಗೂಡಿಸಲು ಮತ್ತು ಭಾರತವು ಮತ್ತೆ ವಿದೇಶಿ ಶಕ್ತಿಯ ಹಿಡಿತಕ್ಕೆ ಸಿಲುಕದಂತೆ ನೋಡಿಕೊಳ್ಳಲು ಅಗತ್ಯವಾದ ಗುಣ ಮತ್ತು ಸದ್ಗುಣಗಳನ್ನು ತುಂಬಲು ಕೆಲಸ ಮಾಡುತ್ತದೆ ಎಂದು ಇಲ್ಲಿ ಪ್ರಮುಖರ ಸಭೆಯನ್ನುದ್ದೇಶಿಸಿ ಮಾತನಾಡಿದರು.



ನಾವು ಸಮವಸ್ತ್ರ ಧರಿಸುತ್ತೇವೆ, ಮೆರವಣಿಗೆಯಲ್ಲಿ ನಡೆಯುತ್ತೇವೆ ಮತ್ತು ದಂಡ ಹಿಡಿದು ವ್ಯಾಯಾಮ ಮಾಡುತ್ತೇವೆ. ಆದರೆ ಯಾರಾದರೂ ಅದನ್ನು ಅರೆಸೈನಿಕ ಸಂಘಟನೆ ಎಂದು ಭಾವಿಸಿದರೆ, ಅದು ತಪ್ಪಾಗುತ್ತದೆ ಎಂದು ಅವರು ಹೇಳಿದರು.

ಗಮನಾರ್ಹವಾಗಿ, ಆರ್‌ಎಸ್‌ಎಸ್ ಅನ್ನು ಜನಸಂಘ, ಅದರ ಉತ್ತರಾಧಿಕಾರಿ ಬಿಜೆಪಿಯ ಮಾತೃ ಸಂಘಟನೆ ಎಂದು ವ್ಯಾಪಕವಾಗಿ ಪರಿಗಣಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ, ಜನರು ಸರಿಯಾದ ಮಾಹಿತಿಯನ್ನು ಸಂಗ್ರಹಿಸಲು ಆಳವಾಗಿ ಹೋಗುವುದಿಲ್ಲ. ಅವರು ಮೂಲಕ್ಕೆ ಹೋಗುವುದಿಲ್ಲ. ಅವರು ವಿಕಿಪೀಡಿಯಾಕ್ಕೆ ಹೋಗುತ್ತಾರೆ. ಅಲ್ಲಿ ಎಲ್ಲವೂ ನಿಜವಲ್ಲ. ವಿಶ್ವಾಸಾರ್ಹ ಮೂಲಗಳಿಗೆ ಹೋಗುವವರು ಸಂಘದ ಬಗ್ಗೆ ತಿಳಿದುಕೊಳ್ಳುತ್ತಾರೆ ಎಂದು ಅವರು ಹೇಳಿದರು. ಈ ತಪ್ಪು ಕಲ್ಪನೆಗಳಿಂದಾಗಿ, ಆರ್‌ಎಸ್‌ಎಸ್‌ನ ಪಾತ್ರ ಮತ್ತು ಧ್ಯೇಯವನ್ನು ವಿವರಿಸುವುದು ಅಗತ್ಯವಾಯಿತು ಎಂದು ಸಂಘದ ಶತಮಾನೋತ್ಸವದ ಸಂದರ್ಭದಲ್ಲಿ ದೇಶಾದ್ಯಂತ ಪ್ರವಾಸ ಮಾಡಿದ ಭಾಗವತ್ ಅವರು ಹೇಳಿದರು. ಸಂಘವು ಸ್ವಯಂಸೇವಕರನ್ನು ಬೆಳೆಸುತ್ತದೆ ಮತ್ತು ಭಾರತದ ಪರಮ ವೈಭವಕ್ಕಾಗಿ ಕೆಲಸ ಮಾಡಲು ಮೌಲ್ಯಗಳು, ಆಲೋಚನೆಗಳು, ಗುರಿಗಳನ್ನು ಬೆಳೆಸುತ್ತದೆ ಎಂದು ಅವರು ಹೇಳಿದರು. ಆದರೆ, ಸಂಘವು ಆ ಸ್ವಯಂಸೇವಕರನ್ನು ದೂರದಿಂದಲೇ ನಿಯಂತ್ರಿಸುವುದಿಲ್ಲ. ದೇಶಭಕ್ತಿಯ ವಾತಾವರಣವನ್ನು ನಿರ್ಮಿಸುವ ಕಾರ್ಮಿಕರ ಗುಂಪನ್ನು ರಚಿಸಲು ಸಂಘವು ತನ್ನ ಶಾಖೆಗಳ ಮೂಲಕ ಕೆಲಸ ಮಾಡುತ್ತಿದೆ. ಸಂಘವು ಪ್ರತಿಕ್ರಿಯೆಯಾಗಿ ಅಥವಾ ವಿರೋಧವಾಗಿ ಹುಟ್ಟಿದೆ ಎಂಬ ಸಾಮಾನ್ಯ ಭಾವನೆ ಇದೆ. ಇದು ಹಾಗಲ್ಲ ಸಂಘವು ಯಾವುದಕ್ಕೂ ಪ್ರತಿಕ್ರಿಯೆ ಅಥವಾ ವಿರೋಧವಲ್ಲ. ಸಂಘವು ಯಾರೊಂದಿಗೂ ಸ್ಪರ್ಧಿಸುತ್ತಿಲ್ಲ ಎಂದು ಆರ್‌ಎಸ್‌ಎಸ್ ಮುಖ್ಯಸ್ಥರು ಹೇಳಿದರು. ಸಮಾಜವು ಸದ್ಗುಣಗಳು ಮತ್ತು ಗುಣಗಳೊಂದಿಗೆ ಒಗ್ಗಟ್ಟಿನಿಂದ ನಿಂತರೆ, ಈ ದೇಶದ ಭವಿಷ್ಯವು ಒಳ್ಳೆಯದಕ್ಕಾಗಿ ಬದಲಾಗುತ್ತದೆ ಎಂದು ಹೇಳಿದರು.

> **ಬಿಜೆಪಿಯನ್ನು ನೋಡಿ ಸಂಘವನ್ನು ಅರ್ಥಮಾಡಿಕೊಳ್ಳಲು ನೀವು ಬಯಸಿದರೆ, ಅದು ದೊಡ್ಡ ತಪ್ಪಾಗುತ್ತದೆ. ವಿದ್ಯಾ ಭಾರತಿಯನ್ನು ನೋಡಿ ನೀವು ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೆ ಅದೇ ಸಂಭವಿಸುತ್ತದೆ.**
> **-ಮೋಹನ್ ಭಾಗವತ್, ಆರ್‌ಎಸ್‌ಎಸ್ ಮುಖ್ಯಸ್ಥ**

# ಸೌದಿ ಅರೇಬಿಯಾಗೆ ಔಷಧಿ ಒಯ್ಯಲು ಅನುಮತಿ ಕಡ್ಡಾಯ

**ನವದೆಹಲಿ:** ಸೌದಿ ಅರೇಬಿಯಾಗೆ ಪ್ರಯಾಣ ಬೆಳೆಸುವ ಭಾರತೀಯ ಪ್ರವಾಸಿಗರು ತಮ್ಮ ವೈಯಕ್ತಿಕ ಬಳಕೆಗಾಗಿ ತೆಗೆದುಕೊಂಡು ಹೋಗುವ ಔಷಧಿಗಳ ಕುರಿತು ಅಲ್ಲಿನ ಆಡಳಿತದಿಂದ ಆನ್‌ಲೈನ್ ಮೂಲಕ ಕಡ್ಡಾಯವಾಗಿ ಅನುಮತಿ ಪಡೆಯಬೇಕಾಗಿದೆ ಎಂದು ಎನ್‌ಸಿಬಿ ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ. ಭಾರತ, ಇತರ ದೇಶಗಳಲ್ಲಿ ಕಾನೂನಾತ್ಮಕವಾಗಿ ಲಭ್ಯವಿರುವ ಕೆಲ ಔಷಧಿಗಳನ್ನು ಸೌದಿ ಅರೇಬಿಯಾ 'ನಿರ್ಬಂಧಿತ' ಅಥವಾ 'ನಿಷೇಧಿತ' ಎಂದು ಘೋಷಿಸಿರಬಹುದು. ಹೀಗಾಗಿ ಕೆಲ ಔಷಧಿಗಳನ್ನು ವೈಯಕ್ತಿಕ ಬಳಕೆಗಾಗಿ ತಮ್ಮೊಂದಿಗೆ ಸೌದಿಗೆ ತೆಗೆದುಕೊಂಡು ಹೋಗುವ ಭಾರತೀಯ ಪ್ರವಾಸಿಗರು ಅದಕ್ಕೆ ಅಗತ್ಯವಿರುವ ಅನುಮತಿ ತೆಗೆದುಕೊಳ್ಳಬೇಕು ಎಂದು ಅದು ಸಲಹೆ ನೀಡಿದೆ.



ನಿಗದಿಗಿಂತ ಹೆಚ್ಚಿನ ಪ್ರಮಾಣದ ಔಷಧಿಗಳನ್ನು ತೆಗೆದುಕೊಂಡು ಹೋಗಲು ಅವಕಾಶವಿಲ್ಲ. ಒಂದು ವೇಳೆ ತೆಗೆದುಕೊಂಡು ಹೋದರೆ ಅಲ್ಲಿ ಕಾನೂನು ಕ್ರಮಗಳನ್ನು ಎದುರಿಸಬೇಕಾಗಬಹುದು ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ವೈಯಕ್ತಿಕ ಬಳಕೆಗಾಗಿ ಔಷಧಿಗಳನ್ನು ತೆಗೆದುಕೊಂಡು ಸೌದಿಗೆ ಹೋಗುವ ಪ್ರವಾಸಿಗರು https://cds.sfda.gov.sa ವೆಬ್‌ಸೈಟ್‌ನಲ್ಲಿ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು ಎಂದು ಅದು ಹೇಳಿದೆ. ಅಲ್ಲದೆ ಪ್ರವಾಸಿಗರು ಸೌದಿಗೆ ತೆರಳುವುದಕ್ಕೂ ಮುನ್ನ, ಅಲ್ಲಿನ ಆಡಳಿತ ಅಧಿಕೃತವಾಗಿ ಪ್ರಕಟಿಸಿರುವ ನಿರ್ಬಂಧಿತ ಮತ್ತು ನಿಷೇಧಿತ ಔಷಧಿಗಳ ಪಟ್ಟಿ ಪರಿಶೀಲಿಸುವಂತೆಯೂ ಎನ್ ಸಿಬಿ ಸಲಹೆ ನೀಡಿದೆ. ಸೌದಿ ಅರೇಬಿಯಾದ ಮಾದಕ ದ್ರವ್ಯ ನಿಯಂತ್ರಣ ಮಹಾ ನಿರ್ದೇಶನಾಲಯವು ಈ ಕುರಿತು ಎನ್‌ಸಿಬಿಗೆ ಔಪಚಾರಿಕವಾಗಿ ಮಾಹಿತಿ ನೀಡಿದೆ ಎಂದು ಅದು ಹೇಳಿದೆ.

# ತಿರುಪತಿಯಲ್ಲಿ ಭದ್ರತಾ ವೈಫಲ್ಯ: ಗೋಪುರ ಏರಿದ ಕುಡುಕ

**ತಿರುಪತಿ:** ತಿರುಪತಿ ನಗರದಲ್ಲಿರುವ ಗೋವಿಂದರಾಯ ಸ್ವಾಮಿ ದೇವಸ್ಥಾನದ ಮುಖ್ಯದ್ವಾರದ ಗೋಪುರ ಏರಿ ಕುಡುಕ ಯುವಕನೊಬ್ಬ ಆತಂಕ ಸೃಷ್ಟಿಸಿದ್ದ ಘಟನೆ ಸಂಜೆ ನಡೆದಿದೆ. ಭದ್ರತಾ ಸಿಬ್ಬಂದಿಯ ಕಣ್ತಪ್ಪಿಸಿ ದೇವಸ್ಥಾನದ ಪೂರ್ವದಿಕ್ಕಿನ ಮುಖ್ಯದ್ವಾರದ ಗೋಪುರ ಏರಿದ ಯುವಕ ಸುಮಾರು ಮೂರು ತಾಸು ಅಲ್ಲಿಯೇ ಕುಳಿತು ಕಳಶ ಕೀಳಲು ಪ್ರಯತ್ನಿಸಿದ್ದಾನೆ. ಕೆಳಗೆ ಇಳಿದು ಬರುವಂತೆ ಭದ್ರತಾ ಸಿಬ್ಬಂದಿ ಮನವಿ ಮಾಡಿದರೂ ಆತ ನನಗೆ ಕುಡಿಯಲು ಮದ್ಯವನ್ನು ಇಲ್ಲಿಯೇ ಕೊಡಿ ಎಂದು ಮತ್ತಷ್ಟು ಹುಚ್ಚಾಟ ಮಾಡಿದ್ದಾನೆ. ಇದರಿಂದ ರೋಸಿಹೋದ ಭದ್ರತಾ ಸಿಬ್ಬಂದಿ ಕಡೆಗೆ ಅಗ್ನಿಶಾಮಕ ಸಿಬ್ಬಂದಿಯ ಸಹಾಯದಿಂದ ಏಣಿ ಹಿಡಿದು ಆತನನ್ನು ಕೆಳಕ್ಕೆ ಇಳಿಸಿ ಬಂಧಿಸಿ ಠಾಣೆಗೆ ಕರೆದೊಯ್ದಿದ್ದಾರೆ. ಘಟನೆಗೆ ಸಂಬಂಧಿಸಿದ ವಿಡಿಯೋಗಳು ಹರಿದಾಡುತ್ತಿವೆ. ಇನ್ನು ಈ ಘಟನೆ ಬಗ್ಗೆ ತಿರುಮಲದ ಟಿಟಿಡಿಯನ್ನು ಟೀಕಿಸುತ್ತಿದ್ದಾರೆ.



ಇದೊಂದು ದೊಡ್ಡ ಭದ್ರತಾ ವೈಫಲ್ಯ. ಭದ್ರತಾ ದೃಷ್ಟಿಯಿಂದ ಮತ್ತೆ ಟಿಟಿಡಿ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ವೈಎಸ್‌ಆರ್‌ಸಿಪಿ ಸೇರಿದಂತೆ ಅನೇಕರು ದೂರಿದ್ದಾರೆ. ಬಂಧಿತ ಯುವಕನನ್ನು ತೆಲಂಗಾಣದ ನಿಜಾಮಾಬಾದ್‌ನ ಕುತ್ತಾಡಿ ಮೂಲದನು ಎನ್ನಲಾಗಿದೆ. ತಿರುಮಲದ ಬಾಲಾಜಿ ದೇವಾಲಯದ ದರ್ಶನಕ್ಕೆ ತೆರಳುವವರು ಮೊದಲಿಗೆ ಗೋವಿಂದಸ್ವಾಮಿ ದರ್ಶನ ಮಾಡಿಕೊಂಡು ಹೋಗುವುದು ವಾಡಿಕೆ.


# ಭಾರತ-ಪಾಕ್ ಸಂಘರ್ಷ ಶಮನದಲ್ಲಿ ಚೀನಾ ಮಧ್ಯಸ್ಥಿಕೆ ನಿಜ ಎಂದ ಪಾಕ್

## ಪಾಕ್ ಹೇಳಿಕೆಗಳಿಗೆ ಭಿನ್ನವಾಗಿ ಕದನವಿರಾಮದಲ್ಲಿ 3ನೇ ದೇಶದ ಹಸ್ತಕ್ಷೇಪ ಇಲ್ಲ ಎಂದು ತನ್ನ ನಿಲುವನ್ನು ಧೃಡವಾಗಿ ಪುನರುಚ್ಚರಿಸಿದ ಭಾರತ

**ಇಸ್ಲಾಮಾಬಾದ್:** ಪೆಹಲ್ಗಾಮ್ ದಾಳಿ ಬಳಿಕ ಪ್ರತೀಕಾರವಾಗಿ ಭಾರತ ನಡೆಸಿದ ಆಪರೇಷನ್ ಸಿಂಧೂರದ ಕದನ ವಿರಾಮದ ಕ್ರೆಡಿಟ್ ವಾರ್ ಜೋರಾಗೇ ನಡೆಯುತ್ತಿದ್ದು, ಇತ್ತೀಚಿನವರೆಗೂ ಟ್ರಂಪ್ ನಾನೇ ಎಲ್ಲಾ ಮಾಡಿದ ಶಾಂತಿದೂತ ಎಂದು ಹೇಳಿಕೊಳ್ಳುತ್ತಾ ಊರೆಲ್ಲಾ ತಿರುಗುತ್ತಿದ್ದರೂ ಆದರೆ ಈಗ ಚೀನಾ ನಾನೇನು ಕಮ್ಮಿಇಲ್ಲಪ್ಪಾ ಎಂಬಂತೆ ಇಲ್ಲ ನಾನೇ ಭಾರತ-ಪಾಕ್ ನಡುವೆ ಮಧ್ಯಸ್ಥಿಕೆ ವಹಿಸಿದ್ದು ಅಂತಾ ಹೊಸದಾಗಿ ಕ್ರೆಡಿಟ್ ರೇಸ್ ಗೆ ಪಾದಾರ್ಪಣೆ ಮಾಡಿದ್ದಾರೆ.

**ಭಾರತ-ಪಾಕ್ ಸಂಘರ್ಷ ಕೊನೆಗೊಳಿಸಿದ್ದ ಚೀನಾ ಎಂದ ಪಾಕ್** ಈಗಾಗಲೇ ಭಾರತ ಈ ಹೇಳಿಕೆಗಳನ್ನು ತಳ್ಳಿಹಾಕಿದೆ. ಆದ್ರೆ ಪಾಕ್ ಮಾತ್ರ ಇಷ್ಟು ದಿನ ಟ್ರಂಪ್ ಎಲ್ಲಾ ಮಾಡಿದ್ದು ಎಂದು ಟ್ರಂಪ್ ಬಾಲ ಹಿಡಿಯುವ ಕೆಲಸ ಮಾಡುತ್ತಿತ್ತು, ಆದರೆ ಈಗ ಚೀನಾ ಹೇಳಿಕೆ ಬೆನ್ನಲ್ಲೆ ಅಟ್ಟಕ್ಕೇರಿಸಿದ್ದ ಟ್ರಂಪ್ ಅನ್ನು ಸದ್ದಿಲ್ಲದೆ ಕೆಳಗೆ ತಳ್ಳಿ ನೀನು ಹೇಳಿದ್ದೇ ಸರಿ ಎಂದು ಡ್ರ್ಯಾಗನ್ ಬಾಲ ಹಿಡಿದಿದೆ. ಚೀನಾ ಹೇಳಿಕೆ ನೀಡಿದ ಬೆನ್ನಲ್ಲೆ, ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಪಾಕಿಸ್ತಾನದ ವಿದೇಶಾಂಗ ಕಚೇರಿಯ ವಕ್ತಾರ ತಾಹಿರ್ ಆಂದ್ರಬಿ ಆಪರೇಷನ್ ಸಿಂಧೂರ ಸಂಘರ್ಷದ ಸಮಯದಲ್ಲಿ ಚೀನಾ ಮಧ್ಯಸ್ಥಿಕೆ ವಹಿಸಿದೆ ಎಂದು ಹೇಳಿರುವುದು ಸತ್ಯ ಎಂದು ಹೇಳಿಕೆ ನೀಡಿದ್ದಾರೆ.

ಈ ಕುರಿತು ಹೇಳುತ್ತಾ ಮೇ ತಿಂಗಳಿನಲ್ಲಿ ನಡೆದ ಪಾಕ್ -ಭಾರತದ ಸಂಘರ್ಷದ ಸಮಯದಲ್ಲಿ ಚೀನಾದ ನಾಯಕರು ಪಾಕ್ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು. ಮೇ 6 ರಿಂದ 10 ರವರೆಗಿನ ಆ 3-4 ದಿನಗಳಲ್ಲಿ ಮತ್ತು ಬಹುಶಃ ಅದಕ್ಕೂ ಮೊದಲು ಮತ್ತು ನಂತರ ಭಾರತೀಯ ನಾಯಕರೊಂದಿಗೂ ಸಂಪರ್ಕಗಳನ್ನು ಸಾಧಿಸಿದ್ದಾರೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ,




ಪಾಪ ಟ್ರಂಪ್ ಕಥೆ ಏನು?

ಚೀನಾದ ಸಕಾರಾತ್ಮಕ ರಾಜತಾಂತ್ರಿಕ ಮಾತುಕತೆಗಳು ಪರಿಸ್ಥಿತಿಯನ್ನು ತಣ್ಣಗಾಗಿಸಿ, ಪ್ರದೇಶದಲ್ಲಿ ಶಾಂತಿ ಮತ್ತು ಭದ್ರತೆಯನ್ನು ತರಲು ಸಹಾಯ ಮಾಡಿದೆ. ಆದ್ದರಿಂದ, ಭಾರತ -ಪಾಕ್ ಸಂಘರ್ಷ ಶಮನವಾಗುವಲ್ಲಿ ಚೀನಾ ಮಧ್ಯಸ್ಥಿಕೆಯ ಪಾತ್ರ ವಹಿಸಿದೆ ಎಂದು ಹೇಳಿರುವುದು ಸರಿಯಾಗಿಯೇ ಇದೆ ಎಂದು ನಾನು ಖಚಿತವಾಗಿ ಹೇಳಬಲ್ಲೆ ಎಂದು ತಿಳಿಸಿದ್ದಾರೆ. ಅಲ್ಲದೆ, ಈ 3-4 ನಿರ್ಣಾಯಕ ದಿನಗಳ ಸಂಘರ್ಷ ಸಮಯದಲ್ಲಿ ಶಾಂತಿ, ಸಮೃದ್ಧಿ, ಭದ್ರತೆಗಾಗಿ ರಾಜತಾಂತ್ರಿಕತೆಗಾಗಿ ಚೀನಾ ಸಾಕಷ್ಟು ಪ್ರಯತ್ನ ಮಾಡಿದೆ. ಇದು ಸಂಘರ್ಷ ಶಮನಗೊಳಿಸುವಲ್ಲಿ ಹಲವಾರು ಅಂತರಾಷ್ಟ್ರೀಯ ಪ್ರಯತ್ನಗಳಲ್ಲಿ ಚೀನಾ ಸಹ ಒಂದಾಗಿದೆ ಎಂದು ತಿಳಿಸಿದ್ದಾರೆ.

**ಪಾಕ್ ನಿನ್ನ ಹೇಳಿಕೆ ಎಷ್ಟು ನಿಜವಯ್ಯಾ ?:** ಆದರೆ, ಪಾಕಿಸ್ತಾನದ ಈ ಹೇಳಿಕೆಗಳು ಸಾಕಷ್ಟು ಅನುಮಾನಗಳಿಗೆ ಕಾರಣವಾಗಿದೆ. ಏಕೆಂದರೆ ಪಾಕ್ ಯಾವಾಗಲೂ ಗೆದ್ದವನ ಬಾಲ ಹಿಡಿಯುತ್ತದೆ ಎನ್ನುವ ವಿಚಾರ ಎಲ್ಲರಿಗೂ ತಿಳಿದಿದೆ. ಅದರಲ್ಲೂ ಪ್ರಮುಖವಾಗಿ ಸಂಕಷ್ಟ ಬಂದಾಗ ವೆಂಕಟರಮಣ ಎಂದು ಚೀನಾದ ಬಾಗಿಲು ತಟ್ಟುವ ಪಾಕ್ ಚೀನಾವನ್ನು ಎದುರು ಹಾಕಿಕೊಳ್ಳುವಷ್ಟು ಧೈರ್ಯ ಸಾಹಸವನ್ನು ಮಾಡಲು ಸಾಧ್ಯವಿಲ್ಲ. ಹಾಗಾಗಿಯೇ ಇಷ್ಟು ದಿನ ನಮ್ಮ ಸಂಘರ್ಷಕ್ಕೆ ವಿರಾಮ ನೀಡಿದ್ದೇ ನಮ್ಮ ದೊಡ್ಡಣ ಟ್ರಂಪ್ ಎನ್ನುತ್ತಿದ್ದ ಪಾಕ್ ಈಗ ಇದೇ ಮೊದಲ ಬಾರಿಗೆ ಎಲ್ಲಾ ಮಾಡಿದ್ದೂ ನನ್ನ ಆಪತ್ಬಾಂಧವ ಚೀನಾ ಎಂದು ಕ್ರೆಡಿಟ್ ನೀಡುತ್ತಿದೆ.


**ಚೀನಾ ಹೇಳಿದ್ದೇನು?:** ಅಷ್ಟಕ್ಕೂ ಪಾಕ್-ಭಾರತ ನಡುವಿನ ಸಂಘರ್ಷದ ಬಗ್ಗೆ ಚೀನಾ ಹೇಳಿದ್ದೇನು ಎಂತಾ ನೋಡೋದಾದ್ರೆ. ಇತ್ತೀಚೆಗೆ ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಬೀಜಿಂಗ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಪರಿಸ್ಥಿತಿ ಮತ್ತು ಚೀನಾದ ವಿದೇಶಾಂಗ ಸಂಬಂಧಗಳ ಕುರಿತಾದ ವಿಚಾರ ಸಂಕಿರಣದಲ್ಲಿ ಮಾತನಾಡಿ 2025ರಲ್ಲಿ ಚೀನಾ ಹಲವಾರು ಅಂತರರಾಷ್ಟ್ರೀಯ ಸಂಘರ್ಷಗಳನ್ನು ಕೊನೆಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದು ಹೇಳುವಾಗ ಅದರಲ್ಲಿ ಪಾಕಿಸ್ತಾನ-ಭಾತದ ನಡುವೆ ನಡೆದ ಸಂಘರ್ಷದ ಕೊನೆಗೊಳಿಸಿ ಶಾಂತಿ ಕಾಪಾಡುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಸ್ವಯಂ ಕ್ರೆಡಿಟ್ ಪಡೆದುಕೊಂಡಿದ್ದರು.

### ಭಾರತದ ಖಡಕ್ ಪ್ರತಿಕ್ರಿಯೆ

**ಇದರ ಬೆನ್ನಲ್ಲೇ, ಭಾರತ ಪ್ರತಿಕ್ರಿಯೆ ನೀಡಿ ಭಾರತ ಈಗಾಗಲೇ ಹಲವು ಬಾರಿ ಈ ವಿಷಯವನ್ನು ಸ್ಪಷ್ಟಪಡಿಸಿದ್ದು, ಮೇ ತಿಂಗಳಿನಲ್ಲಿ ನಡೆದ ಸಂಘರ್ಷದಲ್ಲಿ ಯಾವುದೇ ಮೂರನೇ ದೇಶದ ಹಸ್ತಕ್ಷೇಪವಿಲ್ಲದೆ, ಭಾರತ-ಪಾಕ್ ದೇಶಗಳ ಡೈರೆಕ್ಟರ್ ಜನರಲ್ ಆಫ್ ಮಿಲಿಟರಿ ಆಪರೇಷನ್ಸ್ ನಡುವೆ ನಡೆದ ನೇರ ಮಾತುಕತೆಯಿಂದಲೇ ಕದನವಿರಾಮ ಘೋಷಿಸಿದ್ದೇವೆ ಎಂದು ಹೇಳುವ ಮೂಲಕ ಅಮೆರಿಕಾ ಆಗಲಿ, ಚೀನಾ ಆಗಲಿ ಅಥವಾ ಬೇರೆ ಯಾವ ದೇಶವಾಗಲಿ ಮಧ್ಯಸ್ಥಿಕೆ ವಹಿಸಿಲ್ಲ ಎಂದು ಮತ್ತೊಮ್ಮೆ ಧೃಡವಾಗಿ ಸ್ಪಷ್ಟಪಡಿಸಿದೆ. ಆದಾಗ್ಯೂ, ಅಮೆರಿಕಾ ಹಾಗೂ ಚೀನಾ ಕ್ರೆಡಿಟ್ ವಾರ್ ನಡೆಸಿದ್ದು, ಪಾಕ್ ಎರಡಕ್ಕೂ ಹೂಂಗುಟ್ಟುತ್ತಿದ್ದು, ಟ್ರಂಪ್ ನಾ ಮಡಿದ್ದು ಎಂದರೆ ಹೌದು ಎನ್ನತ್ತಾ ಚೀನಾ ಇಲ್ಲ ನಾನೇ ಮಾಡಿದ್ದು ಎಂದರೆ ಹೂಂ ಹೂಂ ನಿಜ ಎನ್ನತ್ತಾ ಬೆನ್ನೆಲುಬಿಲ್ಲದ ವ್ಯಕ್ತಿಯಂತೆ ಯಾರೇ ಏನೂ ಹೇಳಿದರೂ ಅದೇ ಸತ್ಯ, ಆದ್ರೆ ನಮ್ಮ ಮೇಲೆ ದಯವಿಡಿ ಸ್ವಾಮಿ ಎಂದು ಸ್ವಾಭಿಮಾನವನ್ನು ಬಿಟ್ಟು ದಯಾನೀಯ ಸ್ಥಿತಿಯಲ್ಲಿದೆ.**

### ದ್ವಂದ್ವ ಹೇಳಿಕೆ ಸಾಕಷ್ಟು ಚರ್ಚೆಗೆ ಕಾರಣ


**ಭಾರತ-ಪಾಕ್ ಸಂಘರ್ಷ ಶಮನದ ಕ್ರೆಡಿಟ್ ವಾರ್‌ಗೆ ಈಗ ಚೀನಾ ಹೊಸದಾಗಿ ಎಂಟ್ರಿ ಕೊಟ್ಟಿದ್ದು, ಗೆದ್ದವನ ಬಾಲ ಹಿಡಿದು ದಡ ಸೇರಿಕೊಳ್ಳೋಣ ಎಂದು ಯಾವಾಗಲೂ ಪರರ ಮೇಲೆ ಅವಲಂಬಿತವಾಗಿರುವ ಪಾಕ್ ಈಗ ತನ್ನ ಸ್ವಾಭಿಮಾನವನ್ನೇ ಬಿಟ್ಟು ಇಷ್ಟು ದಿನ ಟ್ರಂಪ್ ಮಧ್ಯಸ್ಥಿಕೆ ವಹಿಸಿದ್ದು ಎಂದು ಕ್ರೆಡಿಟ್ ಎಲ್ಲಾ ಟ್ರಂಪ್ ಗೆ ನೀಡಿ ಈಗ ಚೀನಾ ಇಲ್ಲ ಕದನ ವಿರಾಮ ಆಗುವಂತೆ ನಾನೇ ಮಾಡಿದ್ದು ಎಂದ ತಕ್ಷಣ ಟ್ರಂಪ್ ಅನ್ನು ನಿಧಾನವಾಗಿ ಅಟ್ಟದಿಂದ ಕೆಳಗೆ ಬೀಳಿಸಿ ಚೀನಾ ಹೇಳಿದ್ದೇ ಸರಿ ಎನ್ನುತ್ತಾ ದಿ ಕ್ರೆಡಿಟ್ ಗೋಸ್ ಟು ಚೀನಾ ಎನ್ನುತ್ತಿದೆ. ಪಾಕ್‌ನ ಈ ದ್ವಂದ್ವ ಹೇಳಿಕೆ ಸಾಕಷ್ಟು ಚರ್ಚೆ ಕಾರಣವಾಗಿದೆ. ಆದರೆ ಭಾರತ ಮಾತ್ರ ತನ್ನ ನಿಲುವಿನ ಮೇಲೆ ಧೃಡವಾಗಿ ನಿಂತಿದ್ದು, ಪಾಕ್ -ಭಾರತದ ಸಂಘರ್ಷ ಶಮನವಾಗಲೂ ಯಾವುದೇ ಮೂರನೇ ದೇಶದ ಹಸ್ತಕ್ಷೇಪ ಇಲ್ಲ ಎಂದು ಪುನರುಚ್ಚರಿಸಿದೆ.**



# ೩ ಸಿನಿಮಾಗಾಗಿ ಒಂದಾದ ರಾಣಿ ಮುಖರ್ಜಿ ಅಕ್ಷಯ್ ಕುಮಾರ್

ಬಾಲಿವುಡ್‌ನ ನಟಿ ರಾಣಿ ಮುಖರ್ಜಿ ಹಾಗೂ ಅಕ್ಷಯ್ ಕುಮಾರ್ 'ಓ ಮೈ ಗಾಡ್-3 ಸಿನಿಮಾಗಾಗಿ ಒಂದಾಗ್ತಿದ್ದಾರೆ. 2026 ಹೊಸ ವರ್ಷಕ್ಕೆ ತಮ್ಮ ಅಭಿಮಾನಿಗಳಿಗೆ ಗುಡ್ ನ್ಯೂಸ್ ಕೊಟ್ಟಿದ್ದಾರೆ ಅಕ್ಷಯ್ ಹಾಗೂ ರಾಣಿ ಮುಖರ್ಜಿ.

ಅಂದಹಾಗೆ ಓ ಮೈ ಗಾಡ್ ಸಿನಿಮಾ ಈಗಾಗ್ಲೇ ಪಾರ್ಟ್-1 ಹಾಗೂ ಪಾರ್ಟ್-2 ಗಳಲ್ಲಿ ಸಖತ್ ಸೌಂಡ್ ಮಾಡಿದೆ. ಇದೀಗ ಓ ಮೈ ಗಾಡ್ ಪಾರ್ಟ್-3 ಸಿನಿಮಾ ಇದೇ ವರ್ಷ ಸೆಟ್ಟೇರಲಿದೆ. ಅಕ್ಷಯ್ ಕುಮಾರ್ ಜೊತೆಗೆ ರಾಣಿ ಮುಖರ್ಜಿ ಕೈಜೋಡಿಸುತ್ತಿದ್ದಾರೆ. ಈ ಸುದ್ದಿ ಹೊಸ ವರ್ಷದ ಹೊಸ್ತಿಲಲ್ಲಿ ಸಖತ್ ಸದ್ದು ಮಾಡ್ತಿದೆ. ಜೂನ್ ಅಥವಾ ಜುಲೈನಲ್ಲಿ ಶೂಟಿಂಗ್ ಶುರುವಾಗಲಿದೆ ಅಂತ ಹೇಳಲಾಗ್ತಿದೆ. ಈ ಸಿನಿಮಾಗೆ ಅಮಿತ್ ರೈ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಈ ಬಾರಿ ಮೊದಲೆರಡು ಪಾರ್ಟ್‌ಗಳಿಗಿಂತ ಈ ಸಿನಿಮಾ ಬಿಗ್ ಬಜೆಟ್‌ನಲ್ಲಿ ತಯಾರಾಗಲಿವೆ ಎನ್ನಲಾಗ್ತಿದೆ. ಇನ್ನು ಈ ಸಿನಿಮಾದಲ್ಲಿ ಅತಿದೊಡ್ಡ ತಾರಾಗಣ ಇರಲಿದ್ದು, ಸಾಕಷ್ಟು ವಿಶೇಷತೆಗಳಿಂದ ಈ ಚಿತ್ರ ಗಮನ ಸೆಳೆಯಲಿದೆ ಎನ್ನಲಾಗ್ತಿದೆ.



# ದೇವರಕೊಂಡ ಬ್ಯಾಡ್‌ಲಕ್

## ಕಿಂಗ್ಡಮ್ 2 ಮಾಡೋದಿಲ್ಲ ಎಂದ ನಿರ್ಮಾಪಕ!

ಗೌತಮ್ ತಿನ್ನನುರಿ ಅವರ ವಿಜಯ್ ದೇವರಕೊಂಡ ಅಭಿನಯದ ಕಿಂಗ್‌ಡಮ್ ಚಿತ್ರದ ಮುಂದುವರಿದ ಭಾಗ ರದ್ದಾಗಿದೆ. ನಿರ್ಮಾಪಕ ನಾಗ ವಂಶಿ ಐಡಲ್‌ಬ್ರೈನ್‌ಗೆ ನೀಡಿದ ಸಂದರ್ಶನದಲ್ಲಿ ಈ ಸುದ್ದಿಯನ್ನು ದೃಢಪಡಿಸಿದರು , ಅಲ್ಲಿ ಚಿತ್ರದ ಬಾಕ್ಸ್ ಆಫೀಸ್ ಗಳಿಕೆಯ ನೀರಸ ಪ್ರದರ್ಶನದ ಕಾರಣವನ್ನು ಚರ್ಚಿಸಲು ಅವರು ನಿರಾಕರಿಸಿದ್ದಾರೆ. ಈ ಹಿಂದೆ ವಿಜಯ್ ನಟಿಸಬೇಕಿದ್ದ ಮೂರು ಸಿನಿಮಾಗಳು ನಿಂತು ಹೋಗಿದ್ದವು ಇದೀಗ ಈ ಸಿನಿಮಾ ಸೇರಿ ಸಂಖ್ಯೆ ಒಟ್ಟೂ ನಾಲ್ಕಕ್ಕೆ ಏರಿದೆ. ಗೌತಮ್ ತಿನ್ನನುರಿ ಅವರ ವಿಜಯ್ ದೇವರಕೊಂಡ ಅಭಿನಯದ ಕಿಂಗ್ ಡಮ್ ಚಿತ್ರದ ಮುಂದುವರಿದ ಭಾಗ ರದ್ದಾಗಿದೆ. ನಿರ್ಮಾಪಕ ನಾಗ ವಂಶಿ ಐಡಲ್‌ಬ್ರೈನ್‌ಗೆ ನೀಡಿದ ಸಂದರ್ಶನದಲ್ಲಿ ಈ ಸುದ್ದಿಯನ್ನು ದೃಢಪಡಿಸಿದರು , ಅಲ್ಲಿ ಚಿತ್ರದ ಬಾಕ್ಸ್ ಆಫೀಸ್ ಗಳಿಕೆಯ ನೀರಸ ಪ್ರದರ್ಶನದ ಕಾರಣವನ್ನು ಚರ್ಚಿಸಲು ಅವರು ನಿರಾಕರಿಸಿದ್ದಾರೆ. ಈ ಹಿಂದೆ ವಿಜಯ್ ನಟಿಸಬೇಕಿದ್ದ ಮೂರು ಸಿನಿಮಾಗಳು ನಿಂತು ಹೋಗಿದ್ದವು ಇದೀಗ ಈ ಸಿನಿಮಾ ಸೇರಿ ಸಂಖ್ಯೆ ಒಟ್ಟೂ ನಾಲ್ಕಕ್ಕೆ ಏರಿದೆ.

ಕಿಂಗ್‌ಡಮ್‌ನ ಮುಂದಿನ ಭಾಗದ ಬಗ್ಗೆ ವಂಶಿ ಅವರನ್ನು ಕೇಳಿದಾಗ, ಅವರು ಇಲ್ಲ, ನಾವು ಇನ್ನು ಮುಂದೆ ಅದನ್ನು ಮಾಡುತ್ತಿಲ್ಲ ಎಂದು ಉತ್ತರಿಸಿದರು.

ಮುಂದಿನ ಭಾಗದ ಚಿತ್ರಕ್ಕಿಂತ ಒಂದೇ ಚಿತ್ರವಾಗಿ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವೇ ಎಂದು ಕೇಳಿದಾಗ, ಅವರು ಉತ್ತರಿಸಿದರು. ಏನಾಯಿತು ಎಂಬುದರ ಕುರಿತು ಮಾತನಾಡುವುದರಲ್ಲಿ ಅರ್ಥವಿಲ್ಲ ಏಕೆಂದರೆ ಅದು ಗೌತಮ್‌ಗೆ ಮಾತ್ರ ನೋವುಂಟು ಮಾಡುತ್ತದೆ. ಈಗ ಇನ್ನೇನೂ ಮಾಡಲು ಸಾಧ್ಯವಿಲ್ಲ. ಎಂದರು. ಗೌತಮ್ 'ಈಗ ವಿಭಿನ್ನ ರೀತಿಯ ಚಿತ್ರ'ದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.



# ರೆಬೆಕಾ ಪಾತ್ರದಲ್ಲಿ ತಾರಾ ಸುತಾರಿಯಾ

ಯಶ್ ಅಭಿನಯದ ಟಾಕ್ಸಿಕ್ ಸಿನಿಮಾದ ಒಂದೊಂದೇ ಪೋಸ್ಟರ್‌ಗಳು ರಿವೀಲ್ ಆಗ್ತಿವೆ. ಮಾರ್ಚ್ 19ಕ್ಕೆ ವಿಶ್ವದಾದ್ಯಂತ ತೆರೆಗೆ ಬರುವುದಕ್ಕೆ ಸಿದ್ಧತೆ ಮಾಡಿಕೊಂಡಿರುವ ಟಾಕ್ಸಿಕ್ ಚಿತ್ರದ ಒಂದೊಂದೇ ಕ್ಯಾರೆಕ್ಟರ್‌ಗಳನ್ನ ಅನಾವರಣ ಮಾಡುತ್ತಿದೆ ಚಿತ್ರತಂಡ. ಆ ಪೈಕಿ ರೆಬೆಕಾ ಪಾತ್ರವನ್ನ ಪರಿಚಯಿಸಿದ್ದು, ಈ ಪಾತ್ರದಲ್ಲಿ ನಟಿ ತಾರಾ ಸುತಾರಿಯಾ ನಟಿಸುತ್ತಿದ್ದಾರೆ.

ಈ ಹಿಂದೆ ಕಿಯಾರಾ ಅಡ್ವಾನಿಯ ನಡಿಯಾ ಪಾತ್ರವನ್ನ, ಹುಮಾ ಖುರೇಷಿ ಅವರ ಎಲೆಜೆಬೆತ್ ಹಾಗೂ ನಯನತಾರಾ ಅವರ ಗಂಗಾ ಪಾತ್ರದ ಬಗ್ಗೆ ಈಗಾಗ್ಲೇ ಹಿಂಟ್ ಕೊಟ್ಟಿದೆ ಚಿತ್ರತಂಡ. ಅವರ ಪಾತ್ರಗಳ ಫಸ್ಟ್ ಲುಕ್ ರಿಲೀಸ್ ಮಾಡಿ ಅಭಿಮಾನಿಗಳ ಸಂಭ್ರಮವನ್ನ ದುಪ್ಪಟ್ಟು ಮಾಡಿದೆ ಚಿತ್ರತಂಡ.

ಗೀತು ಮೋಹನ್‌ದಾಸ್ ಹಾಗೂ ಯಶ್ ಕಾಂಬಿನೇಷನ್‌ನಲ್ಲಿ ಮೂಡಿ ಬರ್ತಿರುವ ಟಾಕ್ಸಿಕ್ ಸಿನಿಮಾ ಮೇಲೆ ದೊಡ್ಡ ನಿರೀಕ್ಷಗಳಿವೆ. ವಿಶ್ವದಾದ್ಯಂತ ಸಿನಿಮಾವನ್ನ ರಿಲೀಸ್ ಮಾಡಲು ಅದ್ದೂರಿ ತಯಾರಿ ನಡೆಯುತ್ತಿದೆ. ಇನ್ನು ಯಶ್ ಹುಟ್ಟುಹಬ್ಬಕ್ಕೆ ಯಾವ ರೀತಿ ಗಿಫ್ಟ್ ಸಿಗಲಿದೆ ಅನ್ನೋದು ಮತ್ತಷ್ಟು ಕೌತುಕತೆ ಮೂಡಿಸಿದೆ.



# ತೀರ್ಥರೂಪ ತಂದೆಯವರಿಗೆ ಸಿನಿಮಾ ವಿಮರ್ಶೆ

ಭಾವನಾತ್ಮಕ ಸಿನಿಮಾದಲ್ಲಿ ಭಾವನೆಯನ್ನು ತಟ್ಟುವಂಥ ಸನ್ನಿವೇಶಗಳು ಹೆಚ್ಚಿರದಿದ್ದರೆ, ಭಾವನೆಗಳನ್ನು ದಾಟಿಸುವ ಸಮರ್ಥ ಕಲಾವಿದರು ಇಲ್ಲದಿದ್ದರೆ ತಾಳ್ಮೆ ಕೆಡಲು ಪ್ರಾರಂಭಿಸುತ್ತದೆ. ಅದೇ ರೀತಿ ಭಾವನಾತ್ಮಕ ಕಥೆಯನ್ನು ಕೈಗೆತ್ತಿಕೊಂಡ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ಚಿತ್ರಕಥೆ ಬರವಣಿಗೆಯಲ್ಲಿ ಎಡವಿದ್ದಾರೆ. ಹೀಗಾಗಿ 'ತೀರ್ಥರೂಪ ತಂದೆಯವರಿಗೆ' ಪ್ರಾರಂಭದಿಂದಲೇ ತಾಳ್ಮೆ ಪರೀಕ್ಷಿಸಲು ಶುರು ಮಾಡುತ್ತದೆ. ಅದೇ ರೀತಿಯ ಕಥಾಹಂದರ ಹೊಂದಿರುವ ಚಿತ್ರ 'ತೀರ್ಥರೂಪ'. ಯಾವುದೋ ಕಾರಣದಿಂದ ತಂದೆಯಿಂದ ದೂರವಾದ ಮಗನೊಬ್ಬ ಮತ್ತೆ ತಂದೆಯನ್ನು ಹುಡುಕಿಕೊಂಡು ಹೋಗುವುದೇ ಚಿತ್ರದ ಕಥೆ. ಯೂಟ್ಯೂಬರ್ ಆಗಿರುವ ಕಥಾನಾಯಕ ಪೃಥ್ವಿಯ ಬದುಕಿನ ಪಯಣದಿಂದಲೇ ಕಥೆ ಪ್ರಾರಂಭವಾಗುತ್ತದೆ. ಆತನ ತಾಯಿ ಜಾನಕಿ. ಆಕೆಗೊಬ್ಬ ಗೆಳೆಯ ವಿಶ್ವನಾಥ. ಈ ವಿಶ್ವನಾಥನಿಂದಲೇ ಪೃಥ್ವಿ ಸಮಾಜದಲ್ಲಿ ಸಾಕಷ್ಟು ಅವಮಾನಗಳನ್ನು ಅನುಭವಿಸುತ್ತ ಇರುತ್ತಾನೆ. ಹೀಗಾಗಿಯೇ ಆತ ತಾಯಿಯಿಂದಲೂ ಅಂತರ ಕಾಯ್ದುಕೊಂಡಿರುತ್ತಾನೆ. ಈತನ ಬದುಕಿನಲ್ಲಿ ಬರುವವಳು ಅಕ್ಷರ. ಇವರಿಬ್ಬರ ಭೇಟಿ, ಪೃಥ್ವಿಯ ಹಿನ್ನೆಲೆ ಕಥೆ ಮುಗಿಯುವ ಹೊತ್ತಿಗೆ ಚಿತ್ರದ ಮೊದಲಾರ್ಧ ಸಮೀಪಿಸಿರುತ್ತದೆ. ಚಿತ್ರದ ನಿಜವಾದ ಕಥೆ ಪ್ರಾರಂಭವಾಗುವುದು ಮೊದಲಾರ್ಧದ ಅಂತ್ಯದಲ್ಲಿ, ದ್ವಿತೀಯಾರ್ಧದಿಂದ ಕಥೆ ವೇಗ ಪಡೆಯುತ್ತದೆಯಾದರೂ, ಅಲ್ಲಿಯೂ ಒಂದಷ್ಟು ಅನವಶ್ಯ ದೃಶ್ಯಗಳು ಮತ್ತೆ ಕಥೆಯ ಸೊಗಡನ್ನು ಕೆಡಿಸುತ್ತವೆ. ಉದಾಹರಣೆಗೆ ನಾಯಕ ಅಪ್ಪನನ್ನು ಹುಡುಕಿಕೊಂಡು ಕೊಚ್ಚಿನ್ ಗೆ ಹೋಗುವ ದೃಶ್ಯದಲ್ಲಿ ಕಾಲೇಜಿನಲ್ಲಿ ನಡೆಯುವ ಘಟನೆಯೊಂದನ್ನು ಬಿಟ್ಟು ಬೇರೆ ಯಾವ ಅಂಶಗಳು ಮುಖ್ಯ ಕಥೆಗೆ ಹೆಚ್ಚು ಪೂರಕವಾಗಿಲ್ಲ. ಭಾವ ಪಯಣದಲ್ಲಿ ನಾಯಕನ ಬಿಲ್ಡಪ್, ಆತನನ್ನು ವೈಭವೀಕರಿಸುವ ದೃಶ್ಯಗಳು, ಅದಕ್ಕಾಗಿಯೇ ಖಳನಾಯಕನ ಸೃಷ್ಟಿಯಂಥ ಸನ್ನಿವೇಶಗಳು ಅನಗತ್ಯ. ಎರಡು ಫೈಟ್‌ಗಳು, ನಾಯಕನಿಗೊಬ್ಬ ಎದುರಾಳಿ, ಆತನ ಒಂದಷ್ಟು ದೃಶ್ಯಗಳನ್ನು ಅಪ್ಪ-ಮಗನ ಸಂಬಂಧದ ಕಥೆಯನ್ನು ಹೇಳುವ, ಕುಟುಂಬದ ಸಂಬಂಧಗಳ ಮಹತ್ವ ತಿಳಿಸುವ ಸನ್ನಿವೇಶಗಳನ್ನಾಗಿ ಪರಿವರ್ತಿಸುವ ಅವಕಾಶ ನಿರ್ದೇಶಕರಿಗಿತ್ತು.

# ರೀಲ್ಸ್ ಮಾಡಿ ಕೋಟಿ ರೂ. ಬಹುಮಾನ ಗೆಲ್ಲಿ

## ಕೊರಗಜ್ಜ ಚಿತ್ರತಂಡದ ಆಫರ್

ಸಿನಿ ತಂಡಗಳು ಪ್ರೇಕ್ಷಕರನ್ನ ಸೆಳೆಯಲು ಎಲ್ಲಿಲ್ಲದ ಕಸರತ್ತು ಮಾಡುತ್ತವೆ. ಭರ್ಜರಿ ಪ್ರಚಾರ, ಕಾಲೇಜುಗಳಿಗೆ ಭೇಟಿ, ನಟ-ನಟಿಯರು ಆಟೋ ಓಡಿಸುವುದು ಇನ್ನೂ ಏನೇನೋ, ಇವುಗಳಲ್ಲಿ ಬಹುಮಾನ ಘೋಷಣೆಯೂ ಒಂದು. ಸಿನಿಮಾ ನೋಡಿ ಪ್ರಶ್ನೆಗೆ ಉತ್ತರಿಸಿದವರಿಗೆ ಬಹುಮಾನ ಎಂದೆಲ್ಲ ಹಿಂದೆ ಆಫರ್‌ಗಳನ್ನು ನೀಡಲಾಗುತ್ತಿತ್ತು.

ಸಿನಿಮಾದ ಕ್ಯಾಸೆಟ್ ಖರೀದಿಸಿದವರಿಗೆ ಬಹುಮಾನ ನೀಡಲಾಗುತ್ತಿತ್ತು. ಈಗಲೂ ಆಗೊಮ್ಮೆ-ಈಗೊಮ್ಮೆ ಇಂಥ ಆಫರ್‌ಗಳನ್ನು ಚಿತ್ರತಂಡಗಳು ನೀಡುವುದುಂಟು. ಇದೀಗ 'ಕೊರಗಜ್ಜ' ಚಿತ್ರತಂಡ ಇಂಥಹದ್ದೇ ಆಫರ್ ನೀಡಿದೆ.

'ಕೊರಗಜ್ಜ' ಸಿನಿಮಾದ ಹಾಡುಗಳಿಗೆ ರೀಲ್ಸ್ ಮಾಡಿ ಹಂಚಿಕೊಂಡವರಿಗೆ ಕೋಟಿ ರೂಪಾಯಿ ಬಹುಮಾನದ ಆಫರ್ ಅನ್ನು ಸಹ ಚಿತ್ರತಂಡ ನೀಡಿದೆ. ಚೆನ್ನಾಗಿ ರೀಲ್ಸ್ ಮಾಡಿ ಹಂಚಿಕೊಂಡು, ಅದರಲ್ಲಿ ಚಿತ್ರತಂಡ ಆಯ್ಕೆ ಮಾಡಿದವರಿಗೆ ಬಹುಮಾನ ವಿತರಣೆ ಮಾಡಲಾಗುತ್ತದೆಯಂತೆ. ಆದ್ರೆ ಇದಕ್ಕೆ ಕೊಡಗಿನ ದೈವ ನರ್ತಕರಿಂದ ಆಕ್ರೋಶ ವ್ಯಕ್ತವಾಗಿದೆ. ಸುಧೀರ್ ಅತ್ತಾವರ್ ನಿರ್ದೇಶನದ 'ಕೊರಗಜ್ಜ' ಸಿನಿಮಾದ ಹಾಡುಗಳು ಇತ್ತೀಚೆಗಷ್ಟೆ ಬಿಡುಗಡೆ ಆಗಿದ್ದು, ಸಿನಿಮಾದ ಹಾಡುಗಳಿಗೆ ರೀಲ್ಸ್ ಮಾಡಿ ಹಂಚಿಕೊಂಡವರಿಗೆ ಕೋಟಿ ರೂಪಾಯಿ ಬಹುಮಾನದ ಆಫರ್ ಅನ್ನು ಚಿತ್ರತಂಡ ನೀಡಿದೆ. ಕಾಂತಾರ ಸಿನಿಮಾದಲ್ಲಿ ದೈವ ವಿಡಂಬನೆ ಕುರಿತು ಸಾಕಷ್ಟು ಜನ ದೈವದ ವೇಷಭೂಷಣ ಹಾಕಿಕೊಂಡು ಸಿಕ್ಕಸಿಕ್ಕಲ್ಲಿ ರೀಲ್ಸ್ ಮಾಡುತ್ತಾ ದೈವಗಳಿಗೆ ಅಪಮಾನ ಮಾಡಿದ್ದರು.



ಇದೀಗ ತುಳುನಾಡಿನ ಆರಾಧ್ಯ ದೈವವಾಗಿರುವ ಕೊರಗಜ್ಜನ ಕುರಿತು ರೀಲ್ಸ್ ಮಾಡಿ ಹೆಚ್ಚು ಲೈಕ್ಸ್, ವೀವ್ಸ್ ಗಳಿಸಿದವಿಗೆ ಕೋಟಿ ರೂಪಾಯಿ ಬಹುಮಾನ ನೀಡುವುದಾಗಿ ಹೇಳಿರುವುದು ಖಂಡನೀಯವಾಗಿದೆ. ಈ ತಪ್ಪು ಮುಂದುವರಿದ್ರೆ, ತಪ್ಪಿತಸ್ಥರಿಗೆ ಶಿಕ್ಷೆ ನೀಡುವಂತೆ ದೈವದ ಮೊರೆ ಹೋಗುವುದಾಗಿ ಹೇಳಿದ್ದಾರೆ.

ಕರಾವಳಿ ಭಾಗದ ಕಾರಣಿಕದ ಶಕ್ತಿಯಾಗಿರುವ ಕೊರಗಜ್ಜ ದೈವದ ಕಥೆ ಆಧರಿತ ಸಿನಿಮಾ ಬಿಡುಗಡೆಗೆ ಸಿದ್ಧಗೊಂಡಿದೆ. ಚಿತ್ರದ ಪ್ರಚಾರಕ್ಕಾಗಿ ಕೊರಗಜ್ಜ ಚಿತ್ರದಲ್ಲಿರುವ 6 ಹಾಡುಗಳನ್ನು ಪ್ರೇಕ್ಷಕರಿಗೆ ತಲುಪಿಸುವ ನಿಟ್ಟಿನಲ್ಲಿ ಹಾಗೂ ಸಿನಿಮಾದ ಪ್ರಚಾರಕ್ಕಾಗಿ ಕೊರಗಜ್ಜ ರೀಲ್ಸ್ ಎಂಬ ಸ್ಪರ್ಧೆಯನ್ನು ಆಯೋಜಿಸಿದೆ.

# ಕರ್ನಾಟಕಕ್ಕೆ ಸುಲಭ ತುತ್ತಾದ ತ್ರಿಪುರ

## ಸತತ 5ನೇ ಜಯ

ಅಹಮದಾಬಾದ್‌ನ ನರೇಂದ್ರ ಮೋದಿ ಮೈದಾನದಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಐದನೇ ಸುತ್ತಿನ ಪಂದ್ಯದಲ್ಲಿ ಕರ್ನಾಟಕ ಹಾಗೂ ತ್ರಿಪುರ ತಂಡಗಳು ಮುಖಾಮುಖಿಯಾಗಿದ್ದವು. ಎಂದಿನಂತೆ ಈ ಪಂದ್ಯದಲ್ಲೂ ತನ್ನ ಸಾಂಘೀಕ ಪ್ರದರ್ಶನ ತೋರಿದ ಕರ್ನಾಟಕ ತಂಡ ತ್ರಿಪುರ ತಂಡವನ್ನು 80 ರನ್‌ಗಳಿಂದ ಸೋಲಿಸಿ ಈ ಟೂರ್ನಿಯಲ್ಲಿ ಸತತ ಐದನೇ ಗೆಲುವು ದಾಖಲಿಸಿದೆ. ಅಂದರೆ ಈ ಟೂರ್ನಿಯಲ್ಲಿ ಕರ್ನಾಟಕ ತಂಡ ಆಡಿರುವ ಐದಕ್ಕೆ ಐದು ಪಂದ್ಯಗಳು ಗೆಲುವು ಸಾಧಿಸಿದೆ. ಈ ಮೂಲಕ ಎಲೈಟ್ ಎ ಗುಂಪಿನಲ್ಲಿ ಅಗ್ರಸ್ಥಾನದಲ್ಲಿ ಮುಂದುವರೆದಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ 332 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ತ್ರಿಪುರ ತಂಡ 252 ರನ್‌ಗಳಿಗೆ ಆಲೌಟ್ ಆಯಿತು.

**ಕರ್ನಾಟಕಕ್ಕೆ ಆರಂಭಿಕ ಆಘಾತ:** ಈ ಪಂದ್ಯದಲ್ಲಿ ಟಾಸ್ ಸೋತ ಕರ್ನಾಟಕ ಮೊದಲು ಬ್ಯಾಟಿಂಗ್ ಮಾಡಬೇಕಾಯಿತು. ಆದರೆ ಈ ಬಾರಿ ತಂಡಕ್ಕೆ ಕಳಪೆ ಆರಂಭ ಸಿಕ್ಕಿತು. ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ನಾಯಕ ಮಯಾಂಕ್ ಅಗರ್ವಾಲ್ ಈ ಪಂದ್ಯದಲ್ಲಿ 5 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಆ ನಂತರ ಬಂದ ಕರುಣ್ ನಾಯರ್ ಕೂಡ ತಮ್ಮ ಕಳಪೆ ಫಾರ್ಮ್‌ಗೆ ಬೆಲೆ ತೆತ್ತು ಖಾತೆ ತೆರೆಯದೆ ನಿರ್ಗಮಿಸಿದರು. ಕಳೆದ ಆವೃತ್ತಿಯಲ್ಲಿ ರನ್‌ಗಳ ಮಳೆ ಹರಸಿದ್ದ ಕರುಣ್‌ಗೆ ಈ ಆವೃತ್ತಿಯಲ್ಲಿ ಹೇಳಿಕೊಳ್ಳುವಂತಹ ಪ್ರದರ್ಶನ ನೀಡಲು ಸಾಧ್ಯವಾಗಿಲ್ಲ.

**4ನೇ ಶತಕ ಸಿಡಿಸಿದ ದೇವದತ್ ಪಡಿಕ್ಕಲ್:** ಆದಾಗ್ಯೂ ತನ್ನ ವೃತ್ತಿಜೀವನದ ಅತ್ಯುತ್ತಮ ಫಾರ್ಮ್‌ನಲ್ಲಿರುವ ದೇವದತ್ ಪಡಿಕ್ಕಲ್ ಈ ಪಂದ್ಯದಲ್ಲೂ ತಂಡದ ಇನ್ನಿಂಗ್ಸ್ ಕಟ್ಟುವ ಕೆಲಸ ಮಾಡಿದರು. ಪಡಿಕ್ಕಲ್‌ಗೆ ಸಾಥ್ ನೀಡಿದ ಸ್ಮರಣ್ ರವಿಚಂದ್ರನ್ ಕೂಡ ಅರ್ಧಶತಕದ ಇನ್ನಿಂಗ್ಸ್ ಆಡುವ ಮೂಲಕ ತಂಡವನ್ನು ಶತಕದ ಗಡಿ ದಾಟಿಸಿದರು. ಸ್ಮರಣ್ 60 ರನ್‌ಗಳ ಇನ್ನಿಂಗ್ಸ್ ಆಡುವ ಮೂಲಕ ವಿಕೆಟ್ ಒಪ್ಪಿಸಿದರು. ಇತ್ತ ಪಡಿಕ್ಕಲ್ ಈ ಆವೃತ್ತಿಯಲ್ಲಿ ಸತತ ನಾಲ್ಕನೇ ಶತಕ ಸಿಡಿಸಿ ಮಿಂಚಿದರು. ತಮ್ಮ ಇನ್ನಿಂಗ್ಸ್‌ನಲ್ಲಿ 120 ಎಸೆತಗಳನ್ನು ಎದುರಿಸಿದ ಪಡಿಕ್ಕಲ್ 8 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 108 ರನ್ ಬಾರಿಸಿ ಔಟಾದರು. ಇನ್ನು ಈ ಆವೃತ್ತಿಯಲ್ಲಿ ಮೊದಲ ಬಾರಿಗೆ ಕರ್ನಾಟಕ ಪರ ಕಣಕ್ಕಿಳಿದಿದ್ದ ಕೆಎಲ್ ರಾಹುಲ್ ಉತ್ತಮ ಆರಂಭ ಪಡೆದರಾದರೂ ಅದನ್ನು ದೊಡ್ಡ ಇನ್ನಿಂಗ್ಸ್ ಆಗಿ ಪರಿವರ್ತಿಸುವಲ್ಲಿ ಎಡವಿದರು. ರಾಹುಲ್ ಇನ್ನಿಂಗ್ಸ್ 35 ರನ್‌ಗಳಿಗೆ ಅಂತ್ಯವಾದರೆ, ಅಭಿನವ್ ಮನೋಹರ್ ಸ್ಫೋಟಕ ಬ್ಯಾಟಿಂಗ್ ಮೂಲಕ 79 ರನ್‌ಗಳ ಇನ್ನಿಂಗ್ಸ್ ಆಡಿದರು. ಶ್ರೇಯಸ್ ಗೋಪಾಲ್ ಕೂಡ 29 ರನ್‌ಗಳ ಕಾಣಿಕೆ ನೀಡಿದರು.

**80 ರನ್‌ಗಳಿಂದ ಸೋತ ತ್ರಿಪುರ:** ಈ ಗುರಿ ಬೆನ್ನಟ್ಟಿದ ತ್ರಿಪುರ ತಂಡ 60 ರನ್ ದಾಟುವ ಮುನ್ನವೇ ಪ್ರಮುಖ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಆದಾಗ್ಯೂ ತಂಡದ ಪರ ಏಕಾಂಗಿ ಹೋರಾಟ ನಡೆಸಿದ ಆಲ್‌ರೌಂಡರ್ ಸ್ವಪ್ನಿಲ್ ಸಿಂಗ್ ಶತಕದ ಇನ್ನಿಂಗ್ಸ್ ಆಡುವ ಮೂಲಕ ಕೊಂಚ ಪ್ರತಿರೋಧ ತೋರಿದರು. ಅವರನ್ನು ಹೊರತುಪಡಿಸಿ ರಜತ್ ಕೂಡ 66 ರನ್‌ಗಳ ಇನ್ನಿಂಗ್ಸ್ ಆಡಿದರು. ಉಳಿದಂತೆ ತಂಡದ ಉಳಿದ ಬ್ಯಾಟ್ಸ್‌ಮನ್‌ಗಳಿಂದ ನಿರೀಕ್ಷಿತ ಪ್ರದರ್ಶನ ಮೂಡಿಬರಲಿಲ್ಲ.



# ಬಾಂಗ್ಲಾದೇಶ ಪ್ರವಾಸವನ್ನು ಮತ್ತೆ ಮುಂದೂಡಿದ ಬಿಸಿಸಿಐ

## ಭಾರತ ಪ್ರವಾಸದಿಂದ ಆದಾಯ

ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ, ಟೀಂ ಇಂಡಿಯಾ ಬಾಂಗ್ಲಾದೇಶ ಪ್ರವಾಸವನ್ನು 2025 ರಲ್ಲೇ ಮಾಡಬೇಕಿತ್ತು. ಆ ಪ್ರವಾಸದಲ್ಲಿ ಭಾರತ ತಂಡ ಏಕದಿನ ಹಾಗೂ ಟಿ20 ಸರಣಿಯನ್ನು ಆಡಬೇಕಿತ್ತು. ಆದರೆ ಆ ಸಮಯದಲ್ಲಿ ಬಾಂಗ್ಲಾದೇಶದಲ್ಲಿ ಭುಗಿಲೆದ್ದ ಹಿಂಸಾಚಾರದಿಂದಾಗಿ ಟೀಂ ಇಂಡಿಯಾದ ಪ್ರವಾಸವನ್ನು ಬಿಸಿಸಿಐ ಮುಂದೂಡಿತ್ತು.

ಈ ವರ್ಷವೂ ಟೀಂ ಇಂಡಿಯಾ ಬಾಂಗ್ಲಾದೇಶ ಪ್ರವಾಸ ಮಾಡುವುದು ಅಸಾಧ್ಯ ಎಂಬ ವರದಿಗಳಿದ್ದವು. ಏಕೆಂದರೆ, ಇತ್ತೀಚೆಗಷ್ಟೇ ಬಾಂಗ್ಲಾದೇಶದಲ್ಲಿ ಮತ್ತೆ ಹಿಂದೂಗಳ ಮೇಲಿನ ಹಿಂಸಾಚಾರ ಅತಿರೇಕಕ್ಕೆ ಹೋಗಿದೆ.

ಹೀಗಾಗಿ ಬಾಂಗ್ಲಾದೇಶದೊಂದಿಗಿನ ಎಲ್ಲಾ ಸಂಬಂಧಗಳನ್ನು ಕಡಿದುಕೊಳ್ಳಬೇಕು ಎಂಬುದು ಭಾರತೀಯರ ಆಗ್ರಹವಾಗಿದೆ.

ಇದೆಲ್ಲದರ ನಡುವೆ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯನ್ನು ಉಲ್ಲೇಖಿಸಿ, ಟೀಂ ಇಂಡಿಯಾ ಸೆಪ್ಟೆಂಬರ್ ತಿಂಗಳಲ್ಲಿ ಬಾಂಗ್ಲಾದೇಶ ಪ್ರವಾಸ ಮಾಡಲಿದ್ದು, ಈ ಪ್ರವಾಸದಲ್ಲಿ ಮೂರು ಪಂದ್ಯಗಳ ಏಕದಿನ ಸರಣಿ ಹಾಗೂ ಮೂರು ಪಂದ್ಯಗಳ ಟಿ20 ಸರಣಿ ನಡೆಯಲಿದೆ ಎಂದು ಕ್ರಿಕ್‌ಬಝ್ ವರದಿ ಮಾಡಿತ್ತು.

ಆದರೆ ಈ ವರದಿ ಬಹಿರಂಗವಾದ ಒಂದು ದಿನದ ಬಳಿಕ ಬಿಸಿಸಿಐ, ಬಾಂಗ್ಲಾದೇಶ ಆಟಗಾರನನ್ನು ಐಪಿಎಲ್‌ನಿಂದ ಹೊರಹಾಕಿತ್ತು. ಇದೀಗ ಇದರ ಜೊತೆಗೆ ಟೀಂ ಇಂಡಿಯಾದ ಬಾಂಗ್ಲಾದೇಶ ಪ್ರವಾಸವನ್ನು ಮತ್ತೆ ಮುಂದೂಡಲು ಬಿಸಿಸಿಐ ನಿರ್ಧರಿಸಿದೆ.

ಬಾಂಗ್ಲಾದೇಶದಲ್ಲಿನ ಪ್ರಸ್ತುತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಬಿಸಿಸಿಐ, ಆಗಸ್ಟ್-ಸೆಪ್ಟೆಂಬರ್‌ನಲ್ಲಿ ನಿಗದಿಯಾಗಿದ್ದ ಬಾಂಗ್ಲಾ ಪ್ರವಾಸವನ್ನು ತಾತ್ಕಾಲಿಕವಾಗಿ ಮುಂದೂಡಿದೆ ಎಂದು ಬಿಸಿಸಿಐ ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ.

ಮಂಡಳಿಯು ಈಗ ಈ ವಿಷಯವನ್ನು ಭಾರತ ಸರ್ಕಾರದೊಂದಿಗೆ ಚರ್ಚಿಸಿ ಅವರ ಸಲಹೆಯ ಆಧಾರದ ಮೇಲೆ ಮುಂದಿನ ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದು, ಆ ನಂತರ ತನ್ನ ನಿರ್ಧಾರವನ್ನು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಗೆ ತಿಳಿಸಲಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಿಸಿಸಿಐ ಈ ಪ್ರವಾಸವನ್ನು ಮುಂದೂಡಿದರೆ, ಅದು ಬಿಸಿಬಿಗೆ ಸಾಕಷ್ಟು ನಷ್ಟವನ್ನುಂಟುಮಾಡಬಹುದು. ಈಗಾಗಲೇ ಆರ್ಥಿಕವಾಗಿ ದುರ್ಬಲವಾಗಿರುವ ಬಾಂಗ್ಲಾ ಮಂಡಳಿಯು, ಭಾರತ ಪ್ರವಾಸದಿಂದ ಆದಾಯ ಗಳಿಸುವ ನಿರೀಕ್ಷಿಸುತ್ತಿತ್ತು. ಆದರೆ ಈ ಪ್ರವಾಸವನ್ನು ರದ್ದುಗೊಳಿಸುವುದರಿಂದ ಬಾಂಗ್ಲಾದೇಶ ಮಂಡಳಿಗೆ ಪ್ರಾಯೋಜಕತ್ವ ಮತ್ತು ಪ್ರಸಾರ ಒಪ್ಪಂದಗಳಿಂದ ಲಕ್ಷಾಂತರ ರೂಪಾಯಿಗಳ ನಷ್ಟವಾಗಬಹುದು.



# ಏಕದಿನ ಸರಣಿಗೆ ಟೀಂ ಇಂಡಿಯಾ ಪ್ರಕಟ ಇಬ್ಬರು ಔಟ್, ಮೂವರು ಇನ್..!

ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಗೆ ಟೀಂ ಇಂಡಿಯಾವನ್ನು ಪ್ರಕಟಿಸಲಾಗಿದೆ. ಶುಭ್‌ಮನ್ ಗಿಲ್ ನಾಯಕತ್ವದಲ್ಲಿ 15 ಸದಸ್ಯರ ತಂಡವನ್ನು ಬಿಸಿಸಿಐಘೋಷಿಸಿದೆ. ಅಚ್ಚರಿಯ ಸಂಗತಿಯೆಂದರೆ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಯಲ್ಲಿ ತಂಡದ ಭಾಗವಾಗಿದ್ದ ತಿಲಕ್ ವರ್ಮಾ ಮತ್ತು ರುತುರಾಜ್ ಗಾಯಕ್ವಾಡ್ ಅವರನ್ನು ಈ ಸರಣಿಯಿಂದ ಕೈಬಿಡಲಾಗಿದೆ. ಹಾಗೆಯೇ ಗಾಯದಿಂದಾಗಿ ಟೀಂ ಇಂಡಿಯಾದಿಂದ ಹೊರಗುಳಿದಿದ್ದ ಶ್ರೇಯಸ್ ಅಯ್ಯರ್ ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದ್ದು, ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ವಿಜಯ್ ಹಜಾರೆ ಟ್ರೋಫಿಯಲ್ಲಿ ಸಾಧಾರಣ ಪ್ರದರ್ಶನ ನೀಡಿರುವ ರಿಷಭ್ ಪಂತ್‌ಗೂ ತಂಡದಲ್ಲಿ ಸ್ಥಾನ ಸಿಕ್ಕಿದ್ದು, ಆಲ್‌ರೌಂಡರ್ ನಿತೀಶ್ ರೆಡ್ಡಿ ಕೂಡ ತಂಡಕ್ಕೆ ಆಯ್ಕೆಯಾಗಿದ್ದಾರೆ.

**ಶ್ರೇಯಸ್ ಅಯ್ಯರ್‌ಗೆ ಸ್ಥಾನ, ಆದರೆ:** ಕಳೆದ ಆಸ್ಟ್ರೇಲಿಯಾ ಪ್ರವಾಸದ ಸಮಯದಲ್ಲಿ ಗಾಯಗೊಂಡಿದ್ದ ಶ್ರೇಯಸ್ ಅಯ್ಯರ್ ಅಂದಿನಿಂದ ಟೀಂ ಇಂಡಿಯಾದಿಂದ ಹೊರಗುಳಿದಿದ್ದರು. ಪ್ರಸ್ತುತ ಎನ್‌ಸಿಎನಲ್ಲಿರುವ ಅಯ್ಯರ್ ಫಿಟ್ನೆಸ್ ಪರೀಕ್ಷೆಯಲ್ಲಿ ಪಾಸ್ ಆಗಿದ್ದು, ತಂಡದಲ್ಲಿ ಆಡಲು ಗ್ರೀನ್ ಸಿಗ್ನಲ್ ಸಿಕ್ಕಿದೆ. ಇದರ ಬೆನ್ನಲ್ಲೇ ಅಯ್ಯರ್ ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ. ಆದಾಗ್ಯೂ ಅಯ್ಯರ್ ಟೀಂ ಇಂಡಿಯಾ ಪರ ಕಣಕ್ಕಿಳಿಯುವ ಮೊದಲು ವಿಜಯ್ ಹಜಾರೆ ಟ್ರೋಫಿಯಲ್ಲಿ ಆಡಬೇಕಾಗುತ್ತದೆ. ಅಲ್ಲಿ ಅವರು ತಮ್ಮ ಫಿಟ್ನೆಸ್ ಸಾಭೀತುಪಡಿಸುವಲ್ಲಿ ವಿಫಲರಾದರೆ, ಅಯ್ಯರ್‌ಗೆ ಕಿವೀಸ್ ವಿರುದ್ಧದ ಏಕದಿನ ಸರಣಿಯಲ್ಲಿ ಆಡುವ ಅವಕಾಶ ಸಿಗುವುದು ಅನುಮಾನ.

ಶ್ರೇಯಸ್ ಅಯ್ಯರ್ ತಂಡಕ್ಕೆ ಆಯ್ಕೆಯಾಗಿರುವ ಪರಿಣಾಮದಿಂದಾಗಿ ಆಫ್ರಿಕಾ ವಿರುದ್ಧದ ಏಕದಿನ ಸರಣಿಯಲ್ಲಿ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟ್ ಬೀಸಿ ಶತಕದ ಇನ್ನಿಂಗ್ಸ್ ಆಡಿದ್ದ ರುತುರಾಜ್ ಗಾಯಕ್ವಾಡ್ ಅವರನ್ನು ಈ ಸರಣಿಯಿಂದ ಕೈಬಿಡಲಾಗಿದೆ. ಉಳಿದಂತೆ ರಿಷಭ್ ಪಂತ್ ಕೂಡ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಎರಡನೇ ವಿಕೆಟ್ ಕೀಪರ್ ಆಗಿ ಆಯ್ಕೆಯಾಗಿರುವ ಪಂತ್‌ಗೆ ತಂಡದಲ್ಲಿ ಆಡುವ ಅವಕಾಶ ಸಿಗುವುದು ಅನುಮಾನ. ಏಕೆಂದರೆ ಮೊದಲ ವಿಕೆಟ್ ಕೀಪರ್ ಆಯ್ಕೆಯಾಗಿ ಕೆಎಲ್ ರಾಹುಲ್ ತಂಡದಲಿದ್ದಾರೆ.




ಹಾಗೆಯೇ ಕಳೆದ ಅಕ್ಟೋಬರ್ ತಿಂಗಳಲ್ಲಿ ಆಸ್ಟ್ರೇಲಿಯಾ ವಿರುದ್ಧ ಕೊನೆಯ ಏಕದಿನ ಪಂದ್ಯವನ್ನಾಡಿದ್ದ ಮೊಹಮ್ಮದ್ ಸಿರಾಜ್‌ಗೆ ಕಿವೀಸ್ ವಿರುದ್ಧ ಆಡುವ ಅವಕಾಶ ಸಿಕ್ಕಿದೆ. ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಯಶಸ್ವಿ ಜೈಸ್ವಾಲ್ ತಂಡ ಸೇರಿಕೊಂಡಿದ್ದರೂ, ಗಿಲ್ ತಂಡಕ್ಕೆ ಮರಳಿರುವ ಕಾರಣ ಅವರು ಆಡುವ ಹನ್ನೊಂದರ ಬಳಗದಲ್ಲಿ ಕಾಣಿಸಿಕೊಳ್ಳುವುದು ಅನುಮಾನವಾಗಿದೆ.

# ಏಕದಿನ ಸರಣಿಯಿಂದ ಹಾರ್ದಿಕ್ ಔಟ್

ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಗೆ ಬಿಸಿಸಿಐ 15 ಸದಸ್ಯರ ಟೀಂ ಇಂಡಿಯಾವನ್ನು ಪ್ರಕಟಿಸಿದೆ. ಗಾಯಗೊಂಡಿದ್ದ ಶುಭ್‌ಮನ್ ಗಿಲ್ ಮತ್ತು ಶ್ರೇಯಸ್ ಅಯ್ಯರ್ ತಂಡಕ್ಕೆ ಮರಳಿದ್ದು, ಕ್ರಮವಾಗಿ ನಾಯಕ ಮತ್ತು ಉಪನಾಯಕನ ಜವಾಬ್ದಾರಿ ಹೊರಲಿದ್ದಾರೆ. ಇವರೊಂದಿಗೆ ಮೊಹಮ್ಮದ್ ಸಿರಾಜ್ ಕೂಡ ಬಹಳ ದಿನಗಳ ಬಳಿಕ ತಂಡಕ್ಕೆ ಮರಳಿದ್ದಾರೆ.

ಆದರೆ ದೊಡ್ಡ ಸುದ್ದಿಯೆಂದರೆ ಈ ಏಕದಿನ ಸರಣಿಯಿಂದ ಸ್ಟಾರ್ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರನ್ನು ಕೈಬಿಡಲಾಗಿದೆ. 2027 ರಲ್ಲಿ ಏಕದಿನ ವಿಶ್ವಕಪ್ ಇರುವಾಗ ಪಾಂಡ್ಯರನ್ನು ಏಕದಿನ ಮಾದರಿಯಿಂದ ಹೊರಗಿಡುವುದು ಹಲವರ ಅಚ್ಚರಿಗೆ ಕಾರಣವಾಗಿತ್ತು. ಆದರೆ ಪಾಂಡ್ಯರನ್ನು ಈ ಸರಣಿಯಿಂದ ಕೈಬಿಡಲು ಬಿಸಿಸಿಐ ಸೂಕ್ತ ಕಾರಣವನ್ನು ವಿವರಿಸಿದೆ. ಏಕದಿನ ಸರಣಿಗೆ ತಂಡ ಘೋಷಣೆಯ ನಂತರ ತನ್ನ ಎಕ್ಸ್ ಖಾತೆಯಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಬಿಸಿಸಿಐ, 'ಹಾರ್ದಿಕ್ ಪಾಂಡ್ಯ ಅವರಿಗೆ ಬಿಸಿಸಿಐ ಸಿಒಇಯಿಂದ 10 ಓವರ್ ಬೌಲಿಂಗ್ ಮಾಡಲು ಅನುಮತಿ ಸಿಗಲಿಲ್ಲ, ಆದ್ದರಿಂದ ಮುನ್ನೆಚ್ಚರಿಕೆಯ ಕ್ರಮವಾಗಿ ಅವರನ್ನು ಹೊರಗಿಡಲಾಗಿದೆ.

ಇದಲ್ಲದೆ, ಟಿ20 ವಿಶ್ವಕಪ್ ಹಿನ್ನೆಲೆಯಲ್ಲಿ ಅವರ ಕೆಲಸದ ಹೊರೆಯನ್ನು ನಿರ್ವಹಿಸಲಾಗಿದೆ' ಎಂದಿದೆ. ಹಾರ್ದಿಕ್ ಪಾಂಡ್ಯ ಪ್ರಸ್ತುತ ಅತ್ಯುತ್ತಮ ಫಾರ್ಮ್‌ನಲ್ಲಿದ್ದು ವಿಜಯ್ ಹಜಾರೆ ಟ್ರೋಫಿಯಲ್ಲಿ ವಿದರ್ಭ ವಿರುದ್ಧ ಭರ್ಜರಿ ಶತಕ ಬಾರಿಸಿದ್ದಾರೆ. ಶನಿವಾರ ನಡೆದ ಈ ಪಂದ್ಯದಲ್ಲಿ ಏಳನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ಪಾಂಡ್ಯ 92 ಎಸೆತಗಳಲ್ಲಿ 11 ಸಿಕ್ಸರ್‌ಗಳು ಮತ್ತು ಎಂಟು ಬೌಂಡರಿಗಳೊಂದಿಗೆ 133 ರನ್ ಗಳಿಸಿದರು. ಆದರೆ ಹಾರ್ದಿಕ್ ಪಾಂಡ್ಯರ ಈ ಸ್ಫೋಟಕ ಶತಕದ ಹೊರತಾಗಿಯೂ, ಬರೋಡಾ ತಂಡ ವಿದರ್ಭ ವಿರುದ್ಧ ಒಂಬತ್ತು ವಿಕೆಟ್‌ಗಳ ಸೋಲನ್ನು ಎದುರಿಸಬೇಕಾಯಿತು.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966